ಶ್ರೀ ಬಿ. ಲಕ್ಕಪ್ಪ.—ಸಭೆಯಲ್ಲಿ ೩೫ ಜನ ಮಂತ್ರಿಗಳ ಪೈಕಿ ಇಬ್ಬರು ಮಾತ್ರ ಹಾಜರಿದ್ದಾರೆ. ಸಭೆಯಲ್ಲಿ ಕೋರಂ ಸಹ ಇಲ್ಲ.

ಶ್ರೀ ಎಂ. ರಾಮಪ್ಪ —ನಾವು ಸಭೆಯಲ್ಲಿ ನಿಮಗೆ ಸಹಕಾರ ಕೊಡದಿದ್ದರೆ, ಕೋರಂ ಸಹ ಇರುವುದಿಲ್ಲ.

ಅಧ್ಯಕ್ಷರು.—ನಿಮ್ಮ ಸಹಕಾರ ನಮಗೆ ಯಾವಾಗಲೂ ಬೇಕು.

ಶ್ರಿ ಬಿ. ಬಸವಲಿಂಗಪ್ಪ.—ಆಡಳಿತ ಪಕ್ಷದ ಕಡೆ ಸದಸ್ಯರೇ ಇಲ್ಲದಿರಲು ಕಾರಣವೇನು ?

ಶ್ರೀ ಎಂ. ಶಿವಣ್ಣ.—ವಿರೋಧಪಕ್ಷದ ನಾಯಕರು ಮಾತನಾಡುವಾಗ ಎಲ್ಲಾ ಮಂತ್ರಿಗಳು ಹಾಜರಿರದಿದ್ದರೆ ಹೇಗೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಇದ್ದ ಮಂತ್ರಿಗಳೂ ಸಹ ಹೊರಗಡೆ ಹೋದರು.

ಅಧ್ಯಕ್ಷರು.—ಅವರು ಸದಸ್ಯರನ್ನು ಕರೆದುಕೊಂಡು ಬರುವುದಕ್ಕೆ ಹೋಗಿದ್ದಾರೆ. ತಾವು ಪ್ರಾರಂಭ ಮಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಇಲ್ಲಿ ಅಧಿಕಾರಿಗಳಿದ್ದಾರೆ, ರಿಪೋರ್ಟರ್ಸ್ ಇದ್ದಾರೆ, ನೀವು ಇದ್ದೀರಿ. ಇಷ್ಟು ಜನರಿದ್ದರೆ ಸಾಕು.

1987–88ನೇ ಸಾಲಿನ ಪೂರಕ ಅಂದಾಜುಗಳ ಮೇಲಿನ ಚರ್ಚೆ

(ಮೊದಲನೆ ಕಂತು)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಾನು ೪೫–೪೬ನೇ ಡಿಮ್ಯಾಂಡ್‌ವರೆಗೂ ಮುಗಿಸಿದ್ದೆ. ಈ ೪೬ನೇ ಡಿಮ್ಯಾಂಡ್‌ನಲ್ಲಿ ಎಲೆಕ್ಟ್ರಿಸಿಟಿ ಬಗ್ಗೆ ಕೇಳಿದ್ದಾರೆ. "A sum of 8.61 lakhs was released from contingecy fund towards payment of compensation for acquiring Karwar Electric Supply." ಇದು ಕೊಡಬೇಕಾಗುತ್ತದೆ. ಆದರೆ ಕೆ. ಇ. ಬಿ. ಮ್ಯಾನೇಜ್‌ಮೆಂಟ್ ಎಷ್ಟು ಚೆನ್ನಾಗಿದೆಯೆಂದರೆ ಕಂಬ ಇದ್ದ ಕಡೆ ವೈರ್ ಇರುವುದಿಲ್ಲ, ವೈರ್ ಇದ್ದ ಕಡೆ ಟ್ರಾನ್ಸ್‌ಫಾರ್ಮರ್ ಇರುವುದಿಲ್ಲ. ಆದ್ದರಿಂದ ದಯವಿಟ್ಟು ಸರ್ಕಾರಕ್ಕೆ ಇದನ್ನು ಸರಿ ಮಾಡಿಕೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಎಷ್ಟೋ ಬೋರ್‌ವೆಲ್‌ಗಳಿಗೆ ಪಂಪುಗಳನ್ನು ಕೊಟ್ಟಿಲ್ಲ, ಅದನ್ನು ಎನರ್ಜೈಸ್ ಮಾಡುವುದಕ್ಕೆ ಸಾವಧಾನಗಳಿಲ್ಲ. ಅಷ್ಟೇ ಅಲ್ಲ, ರೈತರ ಹೊಲಗಳಲ್ಲಿ ಎಲ್ಲಿ ಬಾವಿ ತೋಡಿದ್ದಾರೆ, ಅಲ್ಲಿ ಕರೆಂಟ್ ಇಲ್ಲದೇ ಇರುವುದರಿಂದ ನೀರು ಉಪಯೋಗಿಸಿಕೊಂಡು ಬೆಳೆ ತೆಗೆಯುವುದಕ್ಕೆ ಆಗುತ್ತಾ ಇಲ್ಲ, ಸಾಲವನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಬ್ಯಾಂಕಿನವರು ಸಾಲ ವಾಪಸ್ಸು ಕೊಡಿ, ಇಲ್ಲದಿದ್ದರೆ ಮನೆ ಮಠ ಹರಾಜು ಹಾಕುತ್ತೇವೆ ಎಂದು ಹೇಳುತ್ತಾರೆ. ಕೆ. ಇ. ಬಿ. ನವರಿಗೆ ಏತಕ್ಕೆ ಕರೆಂಟ್ ಕೊಡುವುದಕ್ಕಾಗುವುದಿಲ್ಲ, ಮ್ಯಾನೇಜ್‌ಮೆಂಟ್ ಇಷ್ಟು ಅವಲಕ್ಷಣವಾಗಿದೆ. ಇದನ್ನು ಸರಿ ಮಾಡಿಕೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ೫೧ನೇ ಡಿಮ್ಯಾಂಡ್‌ನಲ್ಲಿ ನ್ಯಾಚುರಲ್ ಕಲಾಮಿಟೀಸ್‌ಗೆ ೧೦ ಲಕ್ಷ ರೂಪಾಯಿ ಕೇಳುತ್ತಾ ಇದ್ದಾರೆ. ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿಗಳು ಬಂದ ಮೇಲೆ ಎಷ್ಟು ಅವಲಕ್ಷಣವಾಗಿದೆ ಎಂದರೆ ಹಳ್ಳಿಗಳಲ್ಲಿ ಎಲ್ಲಿ ನೋಡಿದರೂ ಫೈರ್ ಆಕ್ಸಿಡೆಂಟ್, ಹುಲ್ಲು ಬಣವೆಗಳನ್ನು ಅಲ್ಲಿ ಸುಟ್ಟರು, ಇಲ್ಲಿ ಸುಟ್ಟರು ಎಂಬುದನ್ನು ಕೇಳುತ್ತಿದ್ದೇವೆ, ಯಾರ ಮನೆಯ ಹಿತ್ತಲಲ್ಲೂ ಹುಲ್ಲು ಇಡುವ ಹಾಗಿಲ್ಲ. ಈ ಜಡ್.ಪಿ, ಮಂಡಲ ಪಂಚಾಯಿತಿಗಳ ಕೈಗೆ ಸಿಕ್ಕಿ ಯಾರ ಹೊಲದಲ್ಲೂ ಹುಲ್ಲು ಉಳಿಯುವ ಹಾಗಿಲ್ಲ. ನಾನು ಇತ್ತೀಚೆಗೆ ರಾಯಚೂರಿಗೆ ಹೋಗಿದ್ದೆ ಹಾಗೂ ಸಿಂಧಗಿಗೆ ಹೋಗಿದ್ದೆ. ಅಲ್ಲೂ ಹುಲ್ಲಿನ ಬಣವೆಗಳನ್ನು ಸುಟ್ಟಿದ್ದಾರೆ. ನಮ್ಮ ಗುಂಡ್ಲುಪೇಟೆಯಲ್ಲಿ ಎಷ್ಟೋ ಕೇಸ್‌ಗಳಲ್ಲಿ ಹುಲ್ಲಿನ ಬಣವೆಗಳಿಗೆ ಬೆಂಕಿ ಹಚ್ಚಿದ್ದಾರೆ. ಅದಕ್ಕೆ ಯಾರೂ ಕಾಸೂ ಕಾಂಪನ್ಸೇಷನ್ ಕೊಟ್ಟಿಲ್ಲ. ಅವರಿಗೆ ಬೇಕಾದವರ ಹುಲ್ಲು ಬಣವೆ ಸುಟ್ಟಿದ್ದರೆ ಕಾಂಪನ್ಸೇಷನ್ ಕೊಡುತ್ತಾರೆ, ಬಾಕಿಯವರಿಗೆ ಕಾಂಪನ್ಸೇಷನ್ ಸಿಕ್ಕುವುದಿಲ್ಲ. ದನಗಳ ಮೇವಾದ ಹುಲ್ಲಿನ ವಿಷಯದಲ್ಲಿಯೂ, ರಾಜಕೀಯ ಮಾಡುತ್ತಿದ್ದಾರೆ. ಮಾನ್ಯ ನೀಲಕಂಠಪ್ಪನವರಿಗೆ ಹೇಳಬೇಕು, ಏನೆಂದರೆ, ಇದಕ್ಕೆಲ್ಲಾ

ರಾಜಕೀಯ ಮಾಡಬೇಡಿ ಎಂದು, ಹಳ್ಳಿನ ಬಣವೆ ಸುಡಬಾರದು. ರಾಜಕೀಯವಾಗಿ ಸುಟ್ಟರೆ ಎಲ್ಲರಿಗೂ ಕಾಂಪನ್ಸೇಷನ್ ಕೊಡಬೇಕು. ಇದಕ್ಕೆ ಕೊಟ್ಟಿರುವ ಹಣ ಏನೇನೂ ಸಾಲದು. ಆದ್ದರಿಂದ ನ್ಯಾಚುರಲ್ ಕಲಾಮಿಟೀಸ್ ಬಗ್ಗೆ ಸ್ವಲ್ಪ ನಿಗಾ ಇಟ್ಟು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ೫೫ನೇ ಡಿಮ್ಯಾಂಡ್, ಕೋಆಪರೇಷನ್‌ಗೆ ಸಂಬಂಧಪಟ್ಟದ್ದು ಆಗಿದೆ. ಇದರಲ್ಲಿ ತಮಾಷೆ ಏನೆಂದರೆ, ಇದಕ್ಕೆ ಮೂರು ಜನ ಮಂತ್ರಿಗಳು. ಈ ಕೋಆಪರೇಷನ್ ಒಂದು ಪುಟಾಣಿ ಡಿಪಾರ್ಟ್‌ಮೆಂಟ್ ಆದರೆ ಇದಕ್ಕೆ ಮೂರು ಜನ ಮಂತ್ರಿಗಳು. ನನಗೆ ಆ ಫೈಲ್ ಕೊಡು, ನನಗೆ ಈ ಫೈಲ್ ಕೊಡು ಎಂದು ಒಬ್ಬಬರೂ ಫೈಲಿಗಾಗಿ ಹೊಡೆದಾಡುತ್ತಿದ್ದಾರೆ. ನೀವು ಚೀಫ್ ಮಿನಿಸ್ಟರ್ಸ್ ಹತ್ತಿರ ಬಗೆಹರಿಸಿಕೊಳ್ಳಿ, ಯಾರಿಗೆ ಯಾವ ಫೈಲ್ ಕೊಡಬೇಕೋ ಗೊತ್ತಾಗುವುದಿಲ್ಲ, ಎನ್ನುವಂಥ ಪರಿಸ್ಥಿತಿ ಅಧಿಕಾರಿಗಳಿಗೆ ಬಂದುಬಿಟ್ಟಿದೆ. ಇನ್ನು ಡಿಸ್ಟ್ರಿಬ್ಯೂಷನ್ ಆಫ್ ಫುಡ್ ಬಗ್ಗೆ ಮಾತನಾಡುತ್ತೇನೆ. ಇದನ್ನು ಇಷ್ಟಬಂದವರಿಗೆ ಕೊಡುವುದಕ್ಕೆ ಬದಲು, ಅನ್‌ಫೇರ್‌ಪ್ರೈಸ್ ಷಾಪ್ಸ್‌ಗೆ ಕೊಡುವ ಬದಲು ಎಲ್ಲೆಲ್ಲಿ ಸಹಕಾರ ಸಂಘಗಳು ಇರುತ್ತವೆ ಅಲ್ಲಿಗೆ ಕೊಟ್ಟರೆ ವಾಸಿ, ಒಬ್ಬೊಬ್ಬ ಮಿನಿಸ್ಟರ್‌ಗೂ ಸರಿಯಾದ ಕೆಲಸ ಹಂಚಿದರೆ ಅನುಕೂಲವಾಗುತ್ತದೆ. ಫುಡ್ ಡಿಸ್ಟ್ರಿಬ್ಯೂಷನ್‌ಅನ್ನು ಅನ್‌ಫೇರ್‌ಪ್ರೈಸ್ ಷಾಪ್‌ಗೆ ಕೊಡುವ ಬದಲು ಸೊಸೈಟಿಗಳಿಗೆ ಕೊಡುವುದು ವಾಸಿ. ಬರಗಾಲ ಇರುವುದರಿಂದ ಜನರಿಗೆ ಎಷ್ಟು ಕಷ್ಟ ಇದೆ ಎಂಬುದನ್ನು ನೋಡಬೇಕು. ಮಿನಿಸ್ಟರ್ಸ್ ಹೋಗಿಬಿಟ್ಟು ಸಾಲ ವಸೂಲು ಮಾಡಿ ಎಂದು ಹೇಳಿ,ಸಾಲ ವಸೂಲು ಮಾಡುವಂಥ ಕೆಲಸ ಈಗ ಬರದಿಂದ ನಡೆದಿದೆ ಅದೊಂದು ಕೆಲಸ ಉತ್ತಮವಾಗಿ ನಡೆಯುತ್ತಿದೆ. ಆಮೇಲೆ ಎಲ್ಲಕ್ಕಿಂತ ಮುಖ್ಯವಾಗಿ, ಪೀನಲ್ ಇಂಟರೆಸ್ಟನ್ನು ಎಲ್ಲಾ ಸಾಲಗಳಿಗೂ ವಜಾ ಮಾಡಿದರು. ಬ್ಯಾಂಕ್ ಸಾಲ ತಕಾವಿ ಲೋನ್ ಮುಂತಾದ್ದಕ್ಕೆ ಇದನ್ನು ವಜಾ ಮಾಡಿದರು. ಆದರೆ ಪಾಪ, ರೇಷ್ಮೆ ಬೆಳೆಗಾರರು ಏನು ತಪ್ಪು ಮಾಡಿದರು ಎಂದು ಗೊತ್ತಿಲ್ಲ. ಅವರಿಗೆ ಯಾವ ಇಂಟರೆಸ್ಟನ್ನೂ ವಜಾ ಮಾಡಿಲ್ಲ, ಅವರೂ ರೈತರು, ಅವರಿಗೂ ಬರಗಾಲದಲ್ಲಿ ಕಷ್ಟವಿದೆ, ಮಳೆ ಬರದೇಹೋದರೆ ಸೊಪ್ಪು ಬೆಳೆಯುವುದಿಲ್ಲ. ಅವರಿಗೆ ಇಂಟರೆಸ್ಟ್ ಕೊಡಬೇಕಾದರೆ ಕಷ್ಟವಿದೆ. ಆದ್ದರಿಂದ ಎಲ್ಲರಿಗೂ ಕೊಟ್ಟಹಾಗೆ ರೇಷ್ಮೆ ಬೆಳೆಗಾರರಿಗೂ ಪೀನಲ್ ಇಂಟರೆಸ್ಟ್ ವಜಾ ಮಾಡಿಕೊಡಬೇಕು. ಈ ಬಗ್ಗೆ ಅನೇಕ ಸಲ ಮಂತ್ರಿಗಳಿಗೆ ಹೇಳಿದರೂ ಕಿವಿ ಮೇಲೆ ಹಾಕಿಕೊಂಡಿಲ್ಲ. ಅನೇಕ ಜನರು ಈ ಬಗ್ಗೆ ನನಗೆ ರೆಪ್ರೆಸೆಂಟೇಷನ್ ಕಳಿಸಿದ್ದಾರೆ, ಅದನ್ನು ಅವರಿಗೆ ಕಳಿಸಿದ್ದೇನೆ. ಈಗ ಚೀಫ್ ಮಿನಿಸ್ಟರ್ ಇದ್ದಿದ್ದರೆ ಅನುಕೂಲವಾಗುತ್ತಿತ್ತು ಎಂದು ನನಗಾದರೂ ಅನ್ನಿಸುತ್ತದೆ. ಇನ್ನೊಂದು ತಮಾಷೆ ಅಂದರೆ, ನಾನು ಮೊನ್ನೆ ಪ್ರವಾಸ ಹೋಗಿದ್ದಾಗ, ರಾಮದುರ್ಗ ತಾಲ್ಲೂಕಿನ ತೋರಣಗಟ್ಟಿ ಸೊಸೈಟಿಯವರು ಸಾಲ ಕಟ್ಟುವುದಕ್ಕೆ ಹೋದರೆ ಅದನ್ನು ತೆಗೆದುಕೊಂಡಿಲ್ಲ. ಕಾರಣ, ಸಾಲ ವಾಪಸ್ಸು ಕೊಟ್ಟರೆ, ಅವರಿಗೆ ಓಟು ಹಾಕುವಂಥ ಹಕ್ಕು ಬರುತ್ತದೆ. ಅದನ್ನು ತಪ್ಪಿಸುವುದಕ್ಕೋಸ್ಕರ ಸಾಲವಾಪಸ್ಸು ತೆಗೆದುಕೊಂಡಿಲ್ಲ. ಇವರದ್ದು ಎಂಥ ವ್ಯವಹಾರವೋ, ಎಂಥ ಅಡ್ಮಿನಿಸ್ಟ್ರೇಷನ್ನೋ ನನಗೆ ತಿಳಿಯದಾಗಿದೆ. ದಯವಿಟ್ಟು ಆಡಳಿತ ಯಂತ್ರವನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಇನ್ನು ೫೮ನೇ ಡಿಮ್ಯಾಂಡಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇವರು ಒಂದು ದೊಡ್ಡ ಮೇಳವನ್ನು ಮಾಡಿದರು. ಬಂದಂಥ ಜನರಿಗೆ ಹಳಸಿದ ಅನ್ನ ಹಾಕಿ ಕಳುಹಿಸಿದರು, ಅವರು ಇಲ್ಲಿಗೆ ಬಂದು ಕಾಯಿಲೆ ಮಲಗಿದರು. ಅದಕ್ಕಾಗಿ ಇವರು ೪೦ ಲಕ್ಷದ ೫೧ ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ ಯಾರ ಪಬ್ಲಿಸಿಟಿಗೋಸ್ಕರ ಮಾಡಿದರೋ, ಯಾರ ಅನುಕೂಲಕ್ಕಾಗಿ ಮಾಡಿದರೋ ಗೊತ್ತಿಲ್ಲ. ಅದರಲ್ಲಿಯೂ ಮೇಳಕ್ಕೆ ಬಂದಂಥ ಹೆಣ್ಣುಮಕ್ಕಳು ಚಿಕ್ಕಪುಟ್ಟ ಮಕ್ಕಳನ್ನು ಎತ್ತುಕೊಂಡು ಬಂದಿದ್ದವರು ಒಂದು ತಿಂಗಳ ಕಾಲ ಸುಧಾರಿಸಿಕೊಳ್ಳಬೇಕಾಯಿತು. ಇದರಿಂದ ಯಾವ ಪ್ರಯೋಜನವೂ ಆಗಿಲ್ಲ, ಇವರ ಪಬ್ಲಿಸಿಟಿ ಮಾತ್ರ ಆಗಿದೆಯೆಂದು ಹೇಳುತ್ತೇನೆ. ಇನ್ನು ೫೯ನೇ ಡಿಮ್ಯಾಂಡ್ ಪ್ರಕಾರ ಐ, ಆರ್. ಡಿ. ಪಿ.ಯಲ್ಲಿ ಎಷ್ಟರಮಟ್ಟಿನ ಪ್ರಗತಿಯಾಗಿದೆಯೋ ಗೊತ್ತಿಲ್ಲ. ಇವರ ಸೈದ್ಧಾಂತಿಕ ಕಾರ್ಯಾಚರಣೆ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೋ ಗೊತ್ತಿಲ್ಲ. ೬ ತಿಂಗಳಿಗೆ ಎರಡು ಕೋಟಿ ಖರ್ಚು ಮಾಡಿದ್ದಾರೆ

"Expenditure on centrally sponsored rural development programme is shared by the Central Government and the State Government in ration 50:50. As there was no sufficient

provision in 1986–87 to meet State share, a sum of so much is asked.''

ರೀಫಂಡ್ ಮಾಡುವುದಕ್ಕೆ. ಇವರ ಡವಲಪ್‌ಮೆಂಟ್ ಎಷ್ಟು ಚಂದ ? ಇವರ ಸೈದ್ಧಾಂತಿಕ ಕಾರ್ಯಕ್ರಮ ಎಷ್ಟು ಚನ್ನಾಗಿ ನಡೆಯುತ್ತದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಇನ್ನೂ ಡಿಮ್ಯಾಂಡ್ ನಂ. ೬೯ರ ಬಗ್ಗೆ ಹೇಳುತ್ತೇನೆ. ಇವರು ಹರಿಜನ ಗಿರಿಜನರಿಗೆ ರಕ್ಷಣೆ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ ನಿನ್ನೆ ನಡೆದ ಚರ್ಚೆಯಿಂದ ಹರಿಜನ ಗಿರಿಜನರಿಗೆ ಯಾವರೀತಿಯ ರಕ್ಷಣೆ ಕೊಡುತ್ತಿದ್ದಾರೆನ್ನುವುದು ನಮಗೆ ಗೊತ್ತಾಗಿದೆ. ಇವರುಗಳು ತಮ್ಮ ಸ್ವಂತ ವೆಲ್‌ಫೇರ್ ಮಾಡಿ ಕೊಳ್ಳುತ್ತಿದ್ದಾರೆಯೇ ಹೊರತು. ಈ ರಾಜ್ಯದ ಹರಿಜನರ ಗಿರಿಜನರ ಹಾಗೂ ಮಹಿಳೆಯರ ರಕ್ಷಣೆ ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ನಿನ್ನೆ ಪಾಪ ಮಾನ್ಯ ಕಾನಡೆ ಏನೋ ಅಂದರು ಎಂದು ಎಲ್ಲರೂ ಸಿಟ್ಟಿಗೆದ್ದರು. ನಮಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ, ಇನ್ನೂ ನಮ್ಮಲ್ಲಿ ಬದಲಾವಣೆ ಯಾಗಿಲ್ಲ. ಮುಂದೆ ಬರತಕ್ಕ ಮಕ್ಕಳಿಗೆ ಮಾರ್ಗದರ್ಶಕರಾಗುವ ಬದಲು, ಹಳೇ ಕಾಲದ ರೀತಿ ನಡೆದುಕೊಂಡು ಹೋದರೆ, ಈ ದೇಶ ಈ ರಾಜ್ಯ ಉದ್ಧಾರವಾಗುವುದಿಲ್ಲ. ಹರಿಜನ ಗಿರಿಜನರ ವಿಚಾರ ದಲ್ಲಿ, ಮಹಿಳೆಯರ ವಿಚಾರದಲ್ಲಿ, ಅವರ ರಕ್ಷಣೆಯ ವಿಚಾರದಲ್ಲಿ. ಇವರು ನಡೆದುಕೊಳ್ಳುವ ರೀತಿ ಅವಲಕ್ಷಣವಾಗಿದೆ. ಕೇಂದ್ರ ಸರ್ಕಾರ ಈ ಒಂದು ವರ್ಗದವರಿಗಾಗಿ ಕೋಟಿಗಟ್ಟಲೆ ಹಣ ಕೊಡುತ್ತದೆ. ಆದರೆ, ಅವರ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರಕ್ಕೆ ಕಳಕಳಿ ಇಲ್ಲ. ಸ್ಪೆಷಲ್ ಕಾಂಪೊನೆಂಟ್ ಮೂಲ ದುಡ್ಡು ಬರುತ್ತದೆ. ಆದರ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ವ್ಯವಸ್ಥೆ ಇಲ್ಲ ಇದಕ್ಕೆ ಅಧಿಕಾರಿಗಳು ಜವಾಬ್ದಾರರೇ ಮಂತ್ರಿಗಳು ಜವಾಬ್ದಾರರೇ ಎಂಬುದನ್ನು ತಿಳಿಸಬೇಕು. ಕೇಂದ್ರದಿಂದ ಬರುವಂಥ ಹಣವನ್ನು ಬಳಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಯಾವುದೇರೀತಿಯ ಪ್ಲಾನ್ ಆಗಲೀ ಪ್ರೋಗ್ರಾಂ ಆಗಲೀ ಇಲ್ಲ.

ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲ. ಅಧ್ಯಕ್ಷರೆ, ಮುಖ್ಯವಾಗಿ ಹೇಳಬೇಕೆಂದರೆ, ಮೊನ್ನೆಯ ದಿವಸ ಪೋಲೇನಹಳ್ಳಿಗೆ ಹೋಗಿದ್ದೆ, ಅಲ್ಲಿ ಮಕ್ಕಳು ಸಾಯುವ ಪರಿಸ್ಥಿತಿಯಲ್ಲಿದ್ದವು. ಮಕ್ಕಳಿಗೆಲ್ಲಾ ದಢಾರ ಆಗುತ್ತಿದೆ, ಕಾಯಿಲೆ ಬರುತ್ತಿದೆ, ಹೊಟ್ಟೆಗೆ ಇಲ್ಲದೇ ಅಲ್ಲಿ ಸತ್ತು ಹೋಗುತ್ತಿವೆ. ಐ. ಸಿ. ಡಿ. ಎಸ್. ಪ್ರೋಗ್ರಾಮ್‌ನಲ್ಲಿ ಪ್ರೋಟೀನ್ ಕೊಡುತ್ತಾರೆ, ಆಹಾರ ಕೊಡುತ್ತಾರೆ, ಮಿಲ್ಕ್‌ಪೌಡರ್ ಕೊಡುತ್ತಾರೆ ಆದರೆ ಅದನ್ನು ಸರಿಯಾಗಿ ವಿತರಣೆ ಮಾಡದೆ ಮಕ್ಕಳ ಕೈಕಾಲಗಳೆಲ್ಲಾ ಇಷ್ಟಿಷ್ಟು ಸಣ್ಣವಾಗಿವೆ. ಅವರಿಗೆ ಕೆಮ್ಮಲಿಕ್ಕೆ ಆಗುವುದಿಲ್ಲ, ಉಸಿರು ಬಿಡಲಿಕ್ಕೆ ಆಗುವುದಿಲ್ಲ ಹೊಟ್ಟೆಗಿಲ್ಲದೆ ಸತ್ತು ಹೋಗುತ್ತಿವೆ. ಇಷ್ಟೆಲ್ಲಾ ಸೆಂಟ್ರಲ್ ಗವರ್ನಮೆಂಟ್ ದುಡ್ಡು ಕೊಟ್ಟರೂ ಈ ರೀತಿ ಆಗುತ್ತಿದೆ, ಇವರು ಮಾತ್ರ ಢಂಗೂರ ಹೊಡೆದುಕೊಂಡು ಅವರನ್ನು ಉದ್ಧಾರ ಮಾಡಿದ್ದೇವೆ, ಇವರನ್ನು ಉದ್ಧಾರ ಮಾಡಿದ್ದೇವೆಂದು ಹೇಳಿಕೊಂಡು ಹೊರಟಿದ್ದಾರೆಯೇ ಹೊರತು ಏನೇನೂ ಕೆಲಸ ಆಗಿಲ್ಲ. ನಾನು ಇಲ್ಲಿಂದ ಬೆಳಗಾಂವರೆಗೂ ಹೋಗಿ ಅಲ್ಲಿಂದ ಬಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ದೊಡ್ಡ ಪತ್ರವನ್ನು ಬರೆದ್ದೀನೆ, ನಾನು ಪತ್ರ ಬರೆದ ತಕ್ಷಣ ಅವರು ಜವಾಬು ಕೊಡುವ ಪದ್ಧತಿ ಇತ್ತು, ಈ ಸಾರಿ ಏಕೋ ಉತ್ತರ ಕೊಟ್ಟಿಲ್ಲ. ಅದರಲ್ಲಿ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ.

೧ ಬಳ್ಳಾರಿ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನು ಈಗ ಬದಲಿಸಿದ್ದು ಇಲ್ಲಿ ನಿವೇಶನಗಳ ದುರ್ವ್ಯವಹಾರದಲ್ಲಿ ಬಳ್ಳಾರಿಗೆ ಸಂಬಂಧಿಸಿದ ಮುಖಂಡರುಗಳು ಸೇರಿದ್ದಾರೆಂದೂ, ಈ ಬಗ್ಗೆ ವ್ಯಾಪಕವಾದ ವಿಚಾರಣೆ ನಡೆಯಬೇಕೆಂದು ಒತ್ತಾಯಿಸಿರುತ್ತಾರೆ.

ಇದರ ಬಗ್ಗೆ ಅವರು ಏನು ಮಾಡಿದ್ದಾರೆ, ಇದುವರೆಗೂ ಜವಾಬು ಬರಲಿಲ್ಲ. ಇನ್ನು ಎರಡನೆಯದು ಹೇಳಬೇಕೆಂದರೆ.

೨ ಸಿರಗುಪ್ಪ ತಾಲ್ಲೂಕಿನ ಪುರಸಭೆಯಲ್ಲಿ ಬಡ ಜನತೆಗೆ ಹಂಚಲು ನಿವೇಶನಗಳನ್ನು ತಯಾರಿಸಲು ೫೬ ಎಕರೆ ಜಮೀನು ಭೂ ಸ್ವಾಧೀನತೆ ನಡೆದಿದ್ದು, ಈಗ ರಾಜಕೀಯದಿಂದ ಕೈ ಬಿಟ್ಟಿರುತ್ತಾರೆಂದು ತಿಳಿಸಿ, ಈ ಪ್ರಕರಣದಲ್ಲಿ ತೆಕ್ಕಲುಕೋಟೆ ಪ್ರಕರಣದಲ್ಲಿ ೨೪ ಎಕರೆ ಜಮೀನಿನ ಭೂ ಸ್ವಾಧೀನತೆಯನ್ನು ಹಾಗೆಯೇ ಬಿಟ್ಟಿರುತ್ತಾರೆಂದು ನಿವೇಶನ ರಹಿತರು ಆಗ್ರಹಪಡಿಸಿರುತ್ತಾರೆ.

ಇದರ ಬಗ್ಗೆಯೂ ಸಹ ಇದುವರೆಗೆ ಜವಾಬು ಬಂದಿರುವುದಿಲ್ಲ. ಒಟ್ಟು ನಾನು ೧೮ ಇಷ್ಯೂ ಮೇಲೆ ಬರೆದಿದ್ದೇನೆ. ಇದರಲ್ಲಿ ಮುಖ್ಯವಾಗಿರತಕ್ಕ ನಾಲ್ಕನ್ನು ಮಾತ್ರ ಹೇಳುತ್ತೇನೆ.

೩ ರಾಯಚೂರು ಪಟ್ಟಣದಲ್ಲಿ ೧- ಅಂಗೀಕೃತ ಕೊಳಚೆ ಪ್ರದೇಶಗಳಿದ್ದು ೧೯೮೪ರಲ್ಲಿ ಇಕ್ಬಾಲ್ ನಗರ, ಹರಿಜನವಾಡ, ಗಸ್ಗಲ್‌ಪೇಟೆ, ನೀರು ಬಾವಿಕುಂಟ, ಕಾದರಗುಂಡಾಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಕಾಮಗಾರಿಗಳಿಗೆ ಟೆಂಡರು ಕರೆದಿದ್ದು ಕಂಟ್ರಾಕ್ಟರುಗಳಿಗೆ ನಿರ್ವಹಿಸಿದ್ದರೂ ಏನೂ ಕ್ರಮವಾಗಿರುವುದಿಲ್ಲ.

೪ ಜನತಾ ಮನೆಗಳ ಬಗ್ಗೆ ೧೯೮೫-೮೬ ಮತ್ತು ೧೯೮೬-೮೭ನೇ ಸಾಲಿನ ಮನೆಗಳಿಗೆ ಇನ್ನೂ ಉಳಿದಿರುವ ಹಂತಗಳ ಹಣವು ಬಿಡುಗಡೆಯಾಗದಿದ್ದು ತುಂಬಾ ತೊಂದರೆಯಾಗಿರುತ್ತದೆ. (ದೇವದುರ್ಗ, ತಾಲ್ಲೂಕಿನಲ್ಲಿ ರಾಮನಾಳ, ಹೇಮನಾಳಗಳಲ್ಲಿ ಎರಡು ಬಾರಿ ಮನೆಗಳು ಕುಸಿದಿರುವ ಬಗ್ಗೆ ದೂರಿರುತ್ತಾರೆ).

ಇದೆಲ್ಲಾ ಸೋಷಿಯಲ್ ವೆಲ್‌ಫೇರ್‌ಗೆ ಬರುವುದರಿಂದ ಹೇಳುತ್ತಿದ್ದೇನೆ.

೫ ಬಿಜಾಪುರ ಜಿಲ್ಲೆಯಲ್ಲಿ ಇರುವ ಸಿಂಧಗಿ ತಾಲ್ಲೂಕಿನಲ್ಲಿ ಮನೆ ಇದ್ದು ಐದು ಎಕರೆ ತೋಟವಿದ್ದ ನಿಂಗಪ್ಪ ಕಲ್ಲಪ್ಪ ಕಮ್ಮಾರ ಇವರನ್ನು ಮಂಡಲ ಪಂಚಾಯಿತಿಗೆ ಕೃಷಿ ಕಾರ್ಮಿಕರ ಮತ್ತು ಕುಶಲ ಕಾರ್ಮಿಕರ ಪರವಾಗಿ ನಾಮಕರಣ ಮಾಡಿರುತ್ತಾರೆ. ಇಂತಹ ಅನೇಕ ಜಮೀನು ಹೊಂದಿರುವ ಅನೇಕ ವ್ಯಕ್ತಿಗಳನ್ನು ನಾಮಕರಣ ಮಾಡಿರುವುದು ಕಾನೂನು ಬಾಹಿರವಾಗಿದೆ. ಈ ರೀತಿಯ ೧೨ ಪ್ರಕರಣಗಳನ್ನು ಬೆಳಗಾವಿ ಜಿಲ್ಲಾ ಪರಿಷತ್ತಿಗೂ ರದ್ದುಪಡಿಸಲು ಆಗ್ರಹಪಡಿಸಲಾಗಿದ್ದು ಏನೂ ಕ್ರಮವಾಗಿರುವುದಿಲ್ಲ.

೬ ಅನೇಕ ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ಸರ್ಕಾರದಿಂದ ಹೊರಬೇಕಾದ ಆಕ್ಟ್ರಾಯ್ ಪರಿಹಾರ ಹಣವು ದೊರೆಯದಿರುವ ಪ್ರಯುಕ್ತ ರಾಯಚೂರು, ಬಿಜಾಪುರ ಮತ್ತು ಮುಂತಾದ ಪುರಸಭೆಗಳಲ್ಲಿ ಸಿಬ್ಬಂದಿಯವರ ಸಂಬಳ ಪಾವತಿಯಾಗದೇ ಬಹಳ ತೊಂದರೆಯಾಗಿರುತ್ತದೆ. ಅಲ್ಲದೆ, ಪುರಸಭೆ ಮತ್ತು ನಗರಸಭೆಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿರುವುದಿಲ್ಲ. ಈ ಬಗ್ಗೆ ಪುರಸಭೆ ಮತ್ತು ನಗರಸಭೆಗಳ ಅಭಿವೃದ್ಧಿಗೆ ಸೂಕ್ತ ಯೋಜನೆಗಳನ್ನು ಅವಶ್ಯಕತೆಗಳಿಗನುಗುಣವಾಗಿ ತಯಾರಿಸುವುದು ಅವಶ್ಯ ಎಂದು ತಿಳಿಯಬಯಸುತ್ತೇನೆ.

೭ ರಾಯಭಾಗ ತಾಲ್ಲೂಕಿನಲ್ಲಿರುವ ಸಕ್ಕರೆ ಕಂಪನಿಯಲ್ಲಿ ರೈತರಿಗೆ ಕಬ್ಬು, ಸಾಗಾಣೆ ಮತ್ತು ಕಡಿಯುವ ವೆಚ್ಚದ ಬಾಬ್ತು ಒಂದು ಕೋಟಿ ರೂಪಾಯಿ ಬಾಕಿ ಇರುತ್ತದೆ. ಈ ಮೊದಲಿನ ನಷ್ಟವು ಒಂದು ಕೋಟಿಯಾಗಿದ್ದು ಇದರಿಂದ ರೈತರಿಗೆ ಬರಲಿಕ್ಕಿರುವ ಬಾಕಿಯು ಬಗ್ಗೆ ಬಹಳ ಕಳವಳ ಉಂಟಾಗಿದೆ. ಈ ಕಂಪನಿಯಲ್ಲಿ ಕೆಲಸದಲ್ಲಿದ್ದ ಸುಮಾರು ೬೦ ನೌಕರರನ್ನು ಕಾಂಗ್ರೆಸ್ ಕಾರ್ಯಕರ್ತರೆಂದು ದೂಷಿಸಿ ತೆಗೆದು ಹಾಕಿದ್ದಾರೆಂದು ದೂರಿರುತ್ತಾರೆ. ಈ ಬಗ್ಗೆ ಕೂಡಲೇ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ವಿನಂತಿಸುತ್ತೇನೆ.

ಇದರ ಬಗ್ಗೆ ನಾವು ಯಾರಿಗೆ ಹೇಳಬೇಕು ? ಇವೊತ್ತು ಈ ಕುರ್ಚಿಗಳಿಗೆ ಹೇಳಬೇಕಾಗಿದೆ. ಇಷ್ಟೆಲ್ಲಾ ಇದ್ದರೂ ಯಾವುದೇ ಮಂತ್ರಿಗಳಿಗೂ ಯಾವುದೇ ತರಹದ ಕಳಕಳಿ ಇಲ್ಲ.

೮ ರಾಮದುರ್ಗ ತಾಲೂಕು, ಬೆಳಗಾವಿ ಜಿಲ್ಲೆಯ ತೋರಣಗಟ್ಟಿ ಸೊಸೈಟಿಯಲ್ಲಿ ಬಾಕಿ ಹಣವನ್ನು ಕಟ್ಟಲು ಹೋಗಿದ್ದ ಸಮಯದಲ್ಲಿ ಹಣವನ್ನು ತೆಗೆದುಕೊಳ್ಳಲಿಲ್ಲವೆಂದು ಆಪಾದಿಸಿದ್ದು, ವಿಚಾರಿಸಲಾಗಿ ಸೊಸೈಟಿಯ ಚುನಾವಣೆಗೆ ಈ ವ್ಯಕ್ತಿಗಳಿಗೆ ಅವಕಾಶ ನೀಡಬಾರದೆಂದು ಮಾಡಿರುವುದಾಗಿ ಕಟ್ಟಲು ಬಂದ ಹಣವನ್ನು ನಿರಾಕರಿಸಿರುವುದು ಅಕ್ಷಮ್ಯ ಅಪರಾಧವೆಂದು ಆ ರೈತರು ದೂರಿರುತ್ತಾರೆ.......

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಕುರ್ಚಿಗಳೆಲ್ಲಾ ಖಾಲಿ. ಅವರು ಯಾರಿಗೆ ಹೇಳಬೇಕು ?

ಅಧ್ಯಕ್ಷರು.—ಅವರು ೧೮ ಮಂದಿ ಇದ್ದಾರೆ, ನೀವು ೧೨ ಮಂದಿ ಇದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಇವರು ಯಾರಿಗೆ ಹೇಳಬೇಕು, ಇದು ಸಪ್ಲಿಮೆಂಟರಿ ಬಡ್ಜೆಟ್.

ಶ್ರೀ ಕೆ. ಎಸ್. ನಾಗರತ್ನಮ್ಮ.—ಬೆಳಗಾವಿ ತಾಲೂಕಿನಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ಸಣ್ಣ ನೀರಾವರಿ ಕೆರೆಗಳಿದ್ದು ಅವುಗಳ ದುರಸ್ತಿ ೧೨ ವರ್ಷಗಳಿಂದ ನಡೆಯದ ಪ್ರಯುಕ್ತ ನೀರಾವರಿ ಸೌಲಭ್ಯವಿಲ್ಲದೆ ರೈತರಿಗೆ ತೊಂದರೆಯಾಗಿರುತ್ತದೆ. ಅನೇಕ ಕಡೆಗಳಲ್ಲಿ ನೀರು ಪೂರೈಸಲು ಸಾಧ್ಯವಾಗದಿದ್ದರೂ, ನೀರಿನ ಕರವನ್ನು ವಸೂಲು ಮಾಡುತ್ತಿದ್ದಾರೆಂದು ಆಪಾದಿಸಿರುತ್ತಾರೆ.

೧೦ ಬೆಳಗಾವಿ ತಾಲ್ಲೂಕಿನ ತಡಕು ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿಯಿಂದ ನೀಡಿದ ಅಕ್ಕಿಯನ್ನು ಸೇವಿಸಿದ ಪ್ರಯುಕ್ತ ಅನೇಕ ಜನರಿಗೆ ವಾಂತಿ ಆಗಿ ತೊಂದರೆಗೀಡಾಗಿದ್ದು, ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡು ಆ ಜನರಿಗೆ ಪರಿಹಾರ ಒದಗಿಸಿ ಬೇರೆ ಕಡೆಯಲ್ಲಿ ಇಂಥ ಪ್ರಸಂಗಗಳು ಆಗದೇ ಇರುವ ಹಾಗೆ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

೧೧ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ಒಳಾಂಗಣದ ಕ್ರೀಡಾಂಗಣದ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದ್ದು, ಚಿತ್ರದುರ್ಗ ಭೂ ಸೇನಾ ನಿಗಮಕ್ಕೆ ಪೂರ್ಣ ಬಿಡುಗಡೆ ಮಾಡಬೇಕಾಗಿ ತಿಳಿಸಬಯಸುತ್ತೇನೆ.

ಭೂ ಸೇನಾ ನಿಗಮಕ್ಕೆ ಇವರು ದುಡ್ಡನ್ನೇ ಕೊಟ್ಟಿಲ್ಲ. ಅಂದಮೇಲೆ ಅವರು ಹೇಗೆ ಕೆಲಸ ಮಾಡುತ್ತಾರೆ ?

೧೨ ಚಿತ್ರದುರ್ಗದಲ್ಲಿರುವ ಒನಕೆ ಓಬವ್ವ ಕ್ರೀಡಾಂಗಣದ ಕಾರ್ಯಕ್ರಮವು ಹಣದ ಮುಗ್ಗಟ್ಟಿನಿಂದ ತಡೆಹಿಡಿಯಲ್ಪಟ್ಟಿದು ಕೂಡಲೇ ಹಣ ಬಿಡುಗಡೆ ಕೆಲಸವನ್ನು ಮುಗಿಸಲು ಅನುವು ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

ಕೇಂದ್ರಸರ್ಕಾರದ ಹಣವನ್ನು ಇವರು ಯಾವುದಕ್ಕೆ ಉಪಯೋಗ ಮಾಡಿಕೊಂಡದ್ದಾರೋ ಏನೋ ಯಾರಿಗೆ ಗೊತ್ತು.

೧೩ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೩೧ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಬಹಳ ತೊಂದರೆಯಾಗಿರುತ್ತದೆಂದು ತಿಳಿಸಿರುವ ಪ್ರಯುಕ್ತ, ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ..

ಪಾಪ, ಅವರ ಕಷ್ಟವನ್ನು ಹೇಳಿಕೊಂಡಿದ್ದಾರೆ.

೧೪ ಮುಂಧೋಳ್ ತಾಲ್ಲೂಕು ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಯೋಜಿಸಲಾಗಿದ್ದು, ಸರ್ಕಾರದಲ್ಲಿ ಸ್ಥಗಿತವಾಗಿರುವ ಈ ಪ್ರಸ್ತಾಪಗಳಿಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಕಬ್ಬು ಬೆಳೆಯುವ ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

ಪಾಪ, ಇವರೂ ಕೂಡ ತಮ್ಮ ಕಷ್ಟವನ್ನು ಹೇಳಿಕೊಂಡಿದ್ದಾರೆ.

೧೫ ಖಾನಾಪುರ ಬಸ್ಸು ನಿಲ್ದಾಣದ ಬಗ್ಗೆ (ಕೆ.ಎಸ್.ಆರ್.ಟಿ.ಸಿ.) ತಕರಾರು ಇದ್ದು, ಸರ್ಕಾರೀ ಜಮೀನನ್ನು ಖಾಸಗಿ ವ್ಯಕ್ತಿಗಳು ಟ್ರಸ್ಟಿನ ಮೂಲಕ ಒಡೆತನವನ್ನು ರೂಪಿಸಿಕೊಂಡು ಅದನ್ನು ಇತರರಿಗೆ ಮಾರಾಟ ಮಾಡಿಕೊಂಡು ದಿನಗಳೆಯುತ್ತಿದ್ದು, ಬಸ್ಸು ನಿಲ್ದಾಣದ ಬಗ್ಗೆ ಯಾವುದೇ ಕ್ರಮವಾಗದಿದ್ದು ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸ ಬಯಸುತ್ತೇನೆ.

೧೬ ಚಿತ್ರದುರ್ಗ ತಾಲ್ಲೂಕಿನ ಕಾವಡಿಗರಹಟ್ಟಿಯ ಸರ್ವೆ ನಂ. ೩೪.೫ರಲ್ಲಿ ಮೂರು ಎಕರೆ ೩೦ ಗುಂಟೆ ಭೂ ಸ್ವಾಧೀನ ನಡವಳಿಕೆ ನಡೆದಿದ್ದು ಸುಮಾರು ೬೫ ಹರಿಜನ ಕುಟುಂಬಗಳಿಗೆ ನಿವೇಶನ ನೀಡಲು ವ್ಯವಸ್ಥೆಯಾಗಿದ್ದು ಜಿಲ್ಲೆಯ ರಾಜ್ಯಮಟ್ಟದ ರಾಜಕೀಯ ಧುರೀಣರ ಹಸ್ತಕ್ಷೇಪದಿಂದ ಭೂಸ್ವಾಧೀನತಾ ನಡವಳಿಕೆ ರದ್ದಾಗಿ ಬಳ್ಳಕೆರೆಯವರಿಗೆ ಕೈಗಾರಿಕೆ ನಡೆಸಲು ಮಾರಾಟವಾಗಿದೆ ಎಂದು ದೂರಿದ್ದು ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

ಪಾಪ, ಇವರು ಸುಮಾರು ೧೫–೨೦ ವರ್ಷಗಳಿಂದ ಅಲ್ಲಿ ಇದ್ದವರನ್ನು ಒಕ್ಕಲೆಬ್ಬಿಸಿ ನೀವು ಮನೆಯನ್ನು ಕಿತ್ತುಕೊಂಡು ಹೋಗಿ ಎಂದು ಹೇಳಿದ್ದಾರೆ. ಅವರು ಯಾರೋ ಒಬ್ಬರಿಗೆ ಕೈಗಾರಿಕೆಯನ್ನು ನಡೆಸುವುದಕ್ಕೆ ಈ ಜಾಗವನ್ನು ಕೊಡಬಹುದು. ಇದು ಒಂದು ರೀತಿಯ ಸೇಡಿನ ಮನೋಭಾವವಾಗಿದೆ. ಇದು ಹೇಗಿದೆ ಎಂದರೆ ನಾಗರಹಾವು ಸೇಡನ್ನು ಇಟ್ಟುಕೊಂಡು ಕೃಷ್ಣನ ಹತ್ತಿರ ಹೋಯಿತಂತೆ...

ಶ್ರೀ ಬಿ. ಆರ್. ನೀಲಕಂಠಪ್ಪ.—ನಿಮ್ಮ ಕೈಯಲ್ಲಿ ಆಗುವುದಿಲ್ಲ. ಆದರೆ ಬಾಯಿ ಮಾತ್ರ ಜೋರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ೧೦ ವರ್ಷ ಕಾಲ ಆ ಜಾಗದಲ್ಲಿ ಕೂತಿದ್ದೆ, ೬ ವರ್ಷ ಕಾಲ ಈ ಸೀಟಿನಲ್ಲಿ ಕೂತಿದ್ದೆ. ನಾನು ಏನು ಮಾಡಿದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಅದು ಬಿಟ್ಟು ನೀವು ಏನು ಮಾಡಿದಿರಿ, ನೀವು ಏನು ಮಾಡಿದಿರಿ ಅಂತ ಮಾತು ಮಾತಿಗೂ ಏತಕ್ಕೆ ಎದ್ದು, ಎದ್ದು ಕೂರುತ್ತೀರಿ ?

ಶ್ರೀ ಬಿ. ಆರ್. ನೀಲಕಂಠಪ್ಪ —ನಿಮ್ಮ ಕೈಲಾಗುವುದಿಲ್ಲ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನ್ನ ಕೈಲಾಗದೆ ಏನು ? ಪ್ರಯತ್ನ ಮಾಡುತ್ತಿಲ್ಲ ಅಷ್ಟೆ. ಏಕೆಂದರೆ ಈ ಸರ್ಕಾರಕ್ಕೆ ಎಷ್ಟು ಹೇಳಿದರೂ ಏನೂ ಪ್ರಯೋಜನವಿಲ್ಲ. ಈ ಸರ್ಕಾರ ಏನೂ ಮಾಡುವುದಿಲ್ಲ ಎಂಬುದು ನನಗೆ ಗೊತ್ತಿದೆ. ನಮಗೆ ಜನ ಇದ್ದಾರೆ ಅಂತ ಇವರು ಹೇಳುತ್ತಾರೆ. ಇದನ್ನೆಲ್ಲಾ ತೆಗೆದುಕೊಂಡು ಆ ಜನರ ಹತ್ತಿರವೇ ಹೋಗಲಿ ಎಂದು ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನಾಯಕಿಯವರು ಹೇಳಿದ ಪ್ರಕಾರ ನಾವು ಯಾರಿಗೆ ಮಾತನಾಡಬೇಕೋ ಅರ್ಥವಾಗುತ್ತಿಲ್ಲ. ತಮ್ಮನ್ನೇ ಉದ್ದೇಶಿಸಿ ಮಾತನಾಡಿದರೆ ಬಹಳ ಒಳ್ಳೆಯದೆಂದು ನನಗನಿಸುತ್ತದೆ ಏತಕ್ಕೆಂದರೆ, ಸಪ್ಲಿಮೆಂಟರಿ ಎಸ್ಟಿಮೇಟ್ ಎಂದರೆ ಮಿನಿ ಬಡ್ಜೆಟ್ ಇದ್ದಹಾಗೆ. ಫೈನಾನ್ಸ್ ಮಿನಿಸ್ಟರ್ ಸನ್ಮಾನ್ಯ ಮುಖ್ಯಮಂತ್ರಿಗಳೇ ಆಗಿದ್ದಾರೆ. ಏನಾದರೂ ಒಂದು ಅವಶ್ಯಕವಾದಂಥ, ಸರ್ಕಾರಕ್ಕೆ ಅಥವಾ ರಾಜ್ಯದ ಜನರ ಹಿತಕ್ಕೆ ಉಪಯೋಗವಾಗುವಂಥ ಯಾವುದೇ ಕಾರ್ಯಕ್ರಮ ಇದ್ದಲ್ಲಿ ಡೆಲ್ಲಿಗೆ ಹೋಗಲಿ, ಅಥವಾ ಎಲ್ಲಿಗೆ ಬೇಕಾದರೂ ಹೋಗಲಿ. ಪತ್ರಿಕೆಯಲ್ಲಿ ಏನಿದೆ ಅವರು ಹೊಸ ಪಕ್ಷವನ್ನು ಕಟ್ಟಬೇಕೆಂದು. ಮಾನ್ಯ ಮುಖ್ಯಮಂತ್ರಿಗಳಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸದೆ ಈವತ್ತು ದೇಶದ ರಾಜಕೀಯ ಮಾಡುವುದಕ್ಕೆ ಹೋದರೆ, ನಾವು ಹೇಳಬೇಕಾಗುತ್ತದೆ. ಅವರು ಅಲ್ಲಿಯೇ ಇದ್ದರೆ ಒಳ್ಳೆಯದು ಎಂದು. ಇಲ್ಲಿ ಒಂದು ರೆಸಲ್ಯೂಷನ್ ಮಾಡಬಹುದು. ಏತಕ್ಕೆಂದರೆ ಅಲ್ಲಿಗೆ ಹೋಗುವುದಕ್ಕೆ ಇಲ್ಲಿ ಬರುವುದಕ್ಕೆ ಪಾಪ ಇವರಿಗೆ ಬಹಳ ಕಷ್ಟವಾಗಿದೆ. ಇಲ್ಲಿ ಬಡ್ಜೆಟ್‌ನ್ನು ಯಾರಿಗಾಗಿ ಮಾಡಿರುವುದು ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ವಾಟರ್ ರಿಸೋರ್ಸಸ್ ಕಮಿಷನ್ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ಕರೆದಂಥ ಸಭೆಗೆ ಹಾಗೂ ಆ ಸಮಿತಿಯ ಸದಸ್ಯರಾಗಿ ಕಾಮಗಾರಿ ಮಂತ್ರಿಗಳೂ ಡೆಲ್ಲಿಗೆ ಹೋಗಿದ್ದಾರೆ. ನಮ್ಮ ರಾಜ್ಯಕ್ಕೆ ಅತ್ಯಂತ ಅವಶ್ಯಕವಾದ ವಿಚಾರ. ಅಲ್ಲಿ ಚರ್ಚೆಗೆ ಬರಲಿದೆ. ಕಾವೇರಿ ಜಲಾನಯನದ ಭೂಮಿಯಲ್ಲಿ ಹೇಗೆ ನೀರನ್ನು ಉಪಯೋಗಿಸಬೇಕು ಎನ್ನುವ ಬಗ್ಗೆ ಅಲ್ಲಿ ಚರ್ಚೆಯಾಗಿ ನಿರ್ಣಯವಾಗಬಹುದು ಎನ್ನುವ ಮಹತ್ವದ ವಿಷಯದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ. ಈ ವಿಚಾರವನ್ನು ಹೇಳಿದ್ದೇನೆ. ಅವರ ಗೈರು ಹಾಜರಿಯಲ್ಲಿ ಬೇರೆ ಮಂತ್ರಿಗಳು ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆಂದು ಸನ್ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆದು ಹೇಳಿದ್ದಾರೆ. ಇಷ್ಟು ಹೇಳಿದರೂ ಅವರು ಇಲ್ಲವೆಂದು ಟೀಕೆ ಮಾಡಿದರೆ ಏನು ಉತ್ತರ ಹೇಳಲಿ.

ಶ್ರೀ ಬಿ. ಆರ್. ನೀಲಕಂಠಪ್ಪ —ಅವರು ಡೆಲ್ಲಿಗೆ ಹೋಗುವುದು ಎಂದರೆ ಇವರಿಗೆ ಏತಕ್ಕೆ ಹೆದರಿಕೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಇವರಿಗೆ ಹೆದರಿಕೆ ಇರಬಹುದು. ನಮಗೇಕೆ ಹೆದರಿಕೆ ? ಈ ರೀತಿಯೆಲ್ಲಾ ಮಾತನಾಡುವುದು ಸರಿಯಾದುದಲ್ಲ ಅವರೇನು ಕರಡಿಯೋ, ಸಿಂಹವೇ, ಹುಲಿಯೋ, ಏತಕ್ಕೆ ಮಾನ್ಯ ಸದಸ್ಯರು ಈ ರೀತಿ ಮಾತನಾಡುತ್ತಾರೆ ?

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಬಾರದೇ ?

(ಡಾ. ಪುಷ್ಪಾವತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ.—ಹೆದರಿಕೆ ನಮಗಿಲ್ಲ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ನಿನ್ನೆ ನಡೆದಂಥ ಪಕ್ಷದ ಸಭೆಗೆ ಅವರ ಪಕ್ಷದ ಅನೇಕ ಸದಸ್ಯರು ಬರಲಿಲ್ಲವೆಂದು ಹೆದರಿ ಓಡಿ ಹೋದರು ಎಂದು ಈವತ್ತಿನ ಪತ್ರಿಕೆಯಲ್ಲಿ ಬಂದಿದೆ. ನಮ್ಮ ಪ್ರಶ್ನೆ ಇರಲಿ, ನಿಮ್ಮ ಪ್ರಶ್ನೆಯಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಪಕ್ಷದ ನಾಯಕರು, ಉಪನಾಯಕರು ಇದ್ದು ಪ್ರತಿನಿತ್ಯದ ಸಭೆಯನ್ನು ನಡೆಸಿಕೊಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಮಾನ್ಯ ನೀಲಕಂಠಪ್ಪನವರು ಹೇಳಿದ್ದರಿಂದ ನಾನು ಹೇಳಬೇಕಾಯಿತು.

೩.೦೦ ಪಿ.ಎಂ.

ಸನ್ಮಾನ್ಯ ಅಧ್ಯಕ್ಷಣಿಯವರೇ, ಇವತ್ತು ಸಪ್ಲಿಮೆಂಟರಿ ಎಸ್ಟಿಮೇಟನ್ನು ಪಾಸ್ ಮಾಡಿಕೊಡಬೇಕೆಂದು ನಮ್ಮ ಮುಂದೆ ತಂದಿದ್ದಾರೆ. ಒಂದು ದುರಾದೃಷ್ಟಕರವಾದ ಸಂಗತಿ ಏನೆಂದರೆ ಯಾವಾಗ ಬಡ್ಜೆಟ್ ಭಾಷಣವಾಗಲಿ, ಮುಖ್ಯ ಮಂತ್ರಿಗಳ ಬೇಡಿಕೆಗಳ ಬಗ್ಗೆ ಚರ್ಚೆಯಾಗಲಿ, ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಆಗಲಿ, ನಾನು ನಾಲ್ಕು ವರ್ಷಗಳಿಂದ ನೋಡುತ್ತಿದ್ದೇನೆ, ಮುಖ್ಯಮಂತ್ರಿಗಳು ಇರುವುದಿಲ್ಲ. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಮುಖ್ಯಮಂತ್ರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಯೋ ನೋಡಿ. ಇವರು ಕ್ಯಾಬಿನೆಟ್ ಲೀಡರ್, ಈ ಮನೆಯ ನಾಯಕರು. ಅವರೇ ಅವರ ಕಾರ್ಯಕ್ರಮವನ್ನು ಸದನದಲ್ಲಿ ಮಾಡದಿದ್ದರೆ, ಇನ್ನು ಅಧಿಕಾರದಲ್ಲಿ ಎಷ್ಟರ ಮಟ್ಟಿಗೆ ಮಾಡುತ್ತಾರೆಂಬುದನ್ನು ಕರ್ನಾಟಕದ ಜನತೆಗೆ ಬಿಡುತ್ತೇನೆ. ಇವತ್ತು ಪತ್ರಿಕೆಯಲ್ಲಿ ಬಹಳ ಜೋರಾಗಿ ಬಂದಿದೆ. ಎಲ್ಲಾ ವಿರೋಧ ಪಕ್ಷದ ನಾಯಕರ ಸಭೆಯನ್ನು ಡೆಲ್ಲಿಯ ಕರ್ನಾಟಕದ ಭವನದಲ್ಲಿ ಮುಖ್ಯಮಂತ್ರಿಗಳು ಕರೆದಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಮುಖ್ಯಮಂತ್ರಿಗಳ ಹಾಜರಿ ಇಂದು ಇಲ್ಲಿ ಬಹಳ ಅಗತ್ಯ ಇದ್ದುದರಿಂದ ಹೇಳಿದೆ. ನಾನು ಇದುವರೆಗೆ ನಡೆದು ಬಂದಿರುವುದನ್ನು ಹೇಳಿದ್ದೇನೆ, ಹೊಸದೇನೂ ಇಲ್ಲ. ನೀವು ಬೇಕಾದರೆ ರೆಕಾರ್ಡ್ ತೆಗೆದು ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರೀ ಕೆಲಸಗಳಿಗೆ ಹೋಗತಕ್ಕ ಸಮಯದಲ್ಲಿ ವಿರಾಮ ಇದ್ದಾಗ ರಾಜಕೀಯ ಸಭೆಗಳನ್ನು ನಡೆಸುತ್ತಾ ಬಂದಿರುವುದನ್ನು ಈ ದೇಶದಲ್ಲಿ ನಾನು ಸುಮಾರು ೧೯೫೨ ರಿಂದ ನನಗೆ ನೆನಪಿರುವ ಹಾಗೆ ನೋಡಿದ್ದೇನೆ. ಸರ್ಕಾರೀ ಕೆಲಸ ಮುಗಿದ ಮೇಲೆ ಈ ಕೆಲಸವನ್ನು ಪ್ರತಿಯೊಬ್ಬ ಮಂತ್ರಿ, ಮುಖ್ಯಮಂತ್ರಿ ಪ್ರಧಾನ ಮಂತ್ರಿಗಳೂ ಮಾಡುತ್ತಿದ್ದಾರೆ. ಕೇಂದ್ರದಿಂದ ಬಂದಂತಹ ಮಂತ್ರಿಗಳು ಸರ್ಕಾರಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ತದನಂತರ ಪಕ್ಷದ ಮುಖಂಡರನ್ನು, ಪಕ್ಷದ ಶಾಸಕರನ್ನು ಭೇಟಿ ಮಾಡಿರುವುದು ಈ ಊರಿನಲ್ಲಿ ನಡೆದಿದೆ. ಅಂಥದ್ದು ಇವತ್ತು ಡೆಲ್ಲಿಯಲ್ಲಿ ನಡೆದಿರಬಹುದು. ಆ ಬಗ್ಗೆ ನಾನು ಬೆಳಿಗ್ಗೆ ಉತ್ತರಿಸುತ್ತೇನೆ. ಸರ್ಕಾರಿ ಕೆಲಸದ ಜೊತೆಗೆ ರಾಜಕೀಯವನ್ನೂ ಮಾಡಬೇಕಾಗುತ್ತದೆ ಹಾಗೂ ಪಕ್ಷದ ಕೆಲಸವನ್ನೂ ಮಾಡಬೇಕಾಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಕರ್ನಾಟಕದಲ್ಲಿ ಜನ ಸಾಯುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಒಂದೇ ಕಡೆ ಅಲ್ಲ. ಎಲ್ಲಾ ಕಡೆ ಇದೆ. ಮಾನ್ಯ ಶಿವನಂಜಪ್ಪನವರು ತಿಳಿದುಕೊಳ್ಳಬೇಕು, ಪ್ರಧಾನ ಮಂತ್ರಿಗಳು ಒಬ್ಬರೇ ಅಲ್ಲ ಪ್ರತಿಯೊಬ್ಬರೂ ಮಾಡುತ್ತಿದ್ದಾರೆ. ಜನರಿಗೆ ಸಂಬಂಧಪಟ್ಟ ಸಮಸ್ಯೆಗಳತ್ತ ಗಮನ ಹರಿಸುತ್ತಿದ್ದಾರೆ. ಅಷ್ಟೇ ತಿಳುವಳಿಕೆ, ಜವಾಬ್ದಾರಿಯಿಂದ ಈ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ರಾಜಕೀಯವೂ ನಡೆಯಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಬಹುಶಃ ನಾನು ಎಲ್ಲವನ್ನೂ ತಿಳಿದುಕೊಳ್ಳುವುದಕ್ಕೆ ಹೋಗಿಲ್ಲ. ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ನಾನು ಏನು ಹೇಳಿವೆ ಎಂದರೆ ಮುಖ್ಯ ಮಂತ್ರಿಗಳಾಗಿ, ಈ ಸದನದ ನಾಯಕರಾಗಿ ಪ್ರಮುಖವಾದ ಕೆಲವು ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು, ಕೆಲವು ನೀತಿ ಸಂಹಿತೆಗಳು ಇರುತ್ತವೆ. ಇದೊಂದೇ ಸಾರಿ ಅಲ್ಲ. ಇದು ಇವತ್ತು ನಿನ್ನೆಯದು ಮಾತ್ರವಲ್ಲ. ನಾಲ್ಕು ವರ್ಷಗಳಿಂದ ನಾನು ನೋಡುತ್ತಿದ್ದೇನೆ. ಬಡ್ಜೆಟ್ ಡಿಸ್‌ಕಷನ್ ಆಗಲಿ, ಮುಖ್ಯ ಮಂತ್ರಿಗಳಿಗೆ

ಸಂಬಂಧಪಟ್ಟ ಚರ್ಚೆ ಬರಲಿ, ಮುಖ್ಯ ಮಂತ್ರಿಗಳು ಇಲ್ಲಿ ಇರುವುದಿಲ್ಲ. ಪ್ರಾರಂಭವಾಗುವಾಗ ಇರುತ್ತಾರೆ, ನಂತರ ಹೋಗುತ್ತಾರೆ. ಅನೇಕ ಸಾರಿ ಬೇರೆ ಸಚಿವರು ಉತ್ತರಿಸಿದ್ದಾರೆ. ಮಾನ್ಯ ಪಟೇಲರು ಮಾನ್ಯ ಬೊಮ್ಮಾಯಿಯವರು, ಮಾನ್ಯ ದೇವೇಗೌಡರು ಹಾಗೂ ಮಾನ್ಯ ಲಕ್ಷ್ಮೀಸಾಗರ್‌ರವರು ಉತ್ತರಿಸಿರ ತಕ್ಕ ದಾಖಲೆ ಕೂಡ ಇದೆ. ಇವರನ್ನು ಯಾರನ್ನಾದರೂ ಮುಖ್ಯಮಂತ್ರಿಗಳನ್ನಾಗಿ ಮಾಡಿ. ಮಾನ್ಯ ಲಕ್ಷ್ಮೀಸಾಗರ್ ಅವರು ಫ್ರೀ ಆಗಿದ್ದಾರೆ. ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿ. ಕರ್ನಾಟಕ ರಾಜ್ಯದ ಜನರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಬಾಕಿಯವರು ಪೊಲಿಟಿಕ್ಸ್ ಮಾಡು ತ್ತಾರೆ ಆದರೆ ಮಾನ್ಯ ಲಕ್ಷ್ಮೀಸಾಗರ್‌ರವರು ಯಾವ ಪೊಲಿಟಿಕ್ಸ್ ಮಾಡುವುದಿಲ್ಲ. ಆದ್ದರಿಂದ ಅವರನ್ನೇ ಮುಖ್ಯ ಮಂತ್ರಿಗಳನ್ನಾಗಿ ಮಾಡಿ ಡಾ|| ಜೀವರಾಜ ಆಳ್ವ ಅವರೇ.

ಶ್ರೀ ಎ. ಲಕ್ಷ್ಮೀಸಾಗರ್. — ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಖ್ಯ ಮಂತ್ರಿಗಳು ಇದ್ದಾಗ ಈ ಪ್ರಶ್ನೆಯನ್ನು ಮಾನ್ಯ ಮೊಯಿಲಿಯವರಾಗಲಿ, ವಿರೋಧ ಪಕ್ಷದ ನಾಯಕರಾಗಲಿ ಎತ್ತಲಿ. ನಾನು ಮಾನ್ಯ ಮೊಯಿಲಿಯವರಿಗೆ ಸರಿಯಾದ ಉತ್ತರ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಅವರ ಬಗ್ಗೆ ಈಗ ಚರ್ಚಿಸುವುದು ಬೇಡ, ಈಗ ಪೂರಕ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಮುಂದುವರಿಸೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ. — ವಿಚಾರ ಏನೇದರೆ ಇಂಥ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು he must organise his programmes in such a way. ಅದರಲ್ಲೂ ಕೂಡ ವಿಧಾನಸಭೆ ನಡೆಯುವಾಗ ಮಂತ್ರಿಗಳಾಗಲೀ ಮುಖ್ಯ ಮಂತ್ರಿಗಳಾಗಲೀ ಇರಬೇಕು. ಮುಖ್ಯ ಮಂತ್ರಿಗಳೇ ಇಲ್ಲದಿದ್ದರೆ, ಬಾಕಿಯವರು ಯಾರಿರುತ್ತಾರೆ? ಏಕೆಂದರೆ ಅವರೆಲ್ಲಾ ಲೀಡರನ್ನು ಫಾಲೊ ಮಾಡುತ್ತಾರೆ. ಆಡಳಿತದಲ್ಲಾಗಲೀ, ವಿಧಾನಸಭೆ ಹಾಜರಾತಿ ವಿಚಾರದಲ್ಲಾಗಲೀ ಮುಖ್ಯಮಂತ್ರಿಗಳ ಹಾಜರಿ ಇಲ್ಲದೇ ಹೋದರೆ, ಬಾಕಿಯವರು ಏತಕ್ಕಿರುತ್ತಾರೆ? ಆದ್ದರಿಂದ ಕನಿಷ್ಠ ನೀತಿ ಸಂಹಿತೆಯನ್ನಾ ದರೂ ಮುಖ್ಯಮಂತ್ರಿಗಳು ಪಾಲಿಸಬೇಕು. ನಂತರ ಬೇರೆಯವರು ಪಾಲಿಸಬೇಕು. ಅನೇಕ ಪ್ರಾಮುಖ್ಯ ವಾದ ಪ್ರಶ್ನೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಯಾರು ಉತ್ತರ ಹೇಳುತ್ತಾರೆ? ಮಾನ್ಯ ಲಕ್ಷ್ಮೀಸಾಗರ್ ಅವರು ಉತ್ತರ ಕೊಟ್ಟರೆ ಕರ್ನಾಟಕ ಜನತೆಗೆ ಮತ್ತು ನಮಗೆ ಖಂಡಿತ ತೃಪ್ತಿ ಬರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. — ನಿಮಗೆ ಆಗದಿರಬಹುದು. ಆದರೆ ಜನಕ್ಕೆ ಆಗುತ್ತದೆ.

ಶ್ರೀ ಜೀವರಾಜ ಆಳ್ವ. — ಇಲ್ಲಿ ೧೦ ಜನ ಮಂತ್ರಿಗಳಿದ್ದೇವೆ,

ಶ್ರೀ ಬಿ.ಎಸ್. ಯಡಿಯೂರಪ್ಪ. — ಅವರಿಗೆ ಬಿಡುವಿರುವುದೇ ಮುಖ್ಯಮಂತ್ರಿಗಳು ಇಲ್ಲದಿರು ವಾಗ. ಅವರು ಇಲ್ಲದಿರುವ ಸಮಯದಲ್ಲಿ ಮುಂದೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬ ಬಗ್ಗೆ ಸಮಾಲೋಚನೆ ಮಾಡುತ್ತಾರೆ. ಮಾಡಲಿ ಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್. — ಅದರಿಂದ ನಿಮಗೇನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ. — ಮಾನ್ಯ ಯಡಿಯೂರಪ್ಪನವರ ಸಲಹೆಯನ್ನು ನಾನು ಶಿರಸಾ ವಹಿಸಿ ಒಪ್ಪಿಕೊಂಡು ಮುಂದುವರೆಸುತ್ತೇನೆ.

ಶ್ರೀ ರಾಜವರ್ಧನ್. — ವಿರೋಧ ಪಕ್ಷದ ನಾಯಕರ ಸಮ್ಮೇಳನ ಆಗುತ್ತಾ ಇರುವುದನ್ನು ನೋಡಿ ಮಾನ್ಯ ಮೊಯಿಲಿಯವರಿಗೆ ಏತಕ್ಕೆ ಇಷ್ಟೊಂದು ಭಯ?

ಶ್ರೀ ಎಂ. ವೀರಪ್ಪ ಮೊಯಿಲಿ. — ನಿನ್ನೆ ಏನು ನಡೆಯಿತೋ ಅದರ ಭಯ ನಿಮಗಿದೆ. ನಮಗೇನೂ ಭಯ ಇಲ್ಲ. ನಾವು ಭದ್ರವಾಗಿದ್ದೇವೆ. ಏನು ಪಿತೂರಿ ತಾವು ಮಾಡಿದರೂ ಕೂಡ, ಯಾವ ಕಡೆಯಲ್ಲಿ ಮಾಡಿದರೂ ಏನೂ ನಡೆಯಲಿಲ್ಲ. ಆದ್ದರಿಂದ ಭಯ ನಿಮಗೇ ಹೊರತು ನಮಗಿಲ್ಲ. ಮಾನ್ಯ ಪ್ರಣವ್ ಮುಖರ್ಜಿಯವರು ನಮ್ಮ ಪಕ್ಷ ಬಿಟ್ಟ ಕೂಡಲೇ ಮಾನ್ಯ ರಾಮಕೃಷ್ಣ ಹೆಗಡೆಯವರು ಅವರನ್ನು ಆಹ್ವಾನಿಸಿ ಇಲ್ಲಿ ಊಟ ಕೊಟ್ಟಿದ್ದೇ ಕೊಟ್ಟಿದ್ದು. ಅದು ಪುಸ್ ಆಯಿತು. ನಡೆಯಲಿಲ್ಲ. ಮಾನ್ಯ ವಿ.ಪಿ. ಸಿಂಗ್ ಅವರು ಅವರು ನಮ್ಮ ಪಕ್ಷದಿಂದ ಹೋದರು. ಅವರಿಗೆ ಸ್ವಾಗತ ಮಾಡಿದರು. ಅದೂ ಒಂದು ದಿವಸ ಪುಸ್ ಆಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಲೆಕ್ಕಾಚಾರವೆಲ್ಲಾ ತಲೆಕೆಳಕಾಗು ತ್ತಿದೆ. ಇನ್ನೊಬ್ಬ ಅರ್ಥ ಮಂತ್ರಿ ಹೊರಗೆ ಬಂದರೆ ಅವರಿಗೆ ಕೂಡ ಸ್ವಾಗತ ಮಾಡುತ್ತಾರೆ. ಅದೂ ಪುಸ್ ಆಗುತ್ತದೆ. ಇದು ನಡೆದಿರುವ ವಿದ್ಯಮಾನ. ಮಾನ್ಯ ಪ್ರಣವ್ ಕುಮಾರ್ ಮುಖರ್ಜಿ ಬಂದಾಗ

ವಿಧಾನ ಸಭೆ ನಡೆಯುತ್ತಿರುವಾಗ ಇಲ್ಲೇ ಛೇಂಬರ್‌ಗೆ ಬಂದು ಮೀಟಿಂಗ್ ಮಾಡಿದರು. ಆಮೇಲೆ ಮಾನ್ಯ ಪ್ರಣವ್‌ಕುಮಾರ್ ಮುಖರ್ಜಿಬಗ್ಗೆ ಇದ್ದ ಆತ್ಮೀಯತೆ ಎಲ್ಲಿಹೋಯಿತು? ಈಗಹೊಸಬರು ಬಂದಿದ್ದಾರೆಹೊಸ ಬಲಿಪಶುಸಿಕ್ಕಿದ್ದಾರೆ. ಅವರದೂ ಇತಿಹಾಸ ಮಾಡಿಬಿಡುತ್ತಾರೆ. ಆಮೇಲೆ ಇನ್ನೊಬ್ಬರನ್ನು ಹುಡುಕುವುದಕ್ಕೆ ಹೋಗುತ್ತಾರೆ. ಇಂಥ ರಾಜಕೀಯ ಮಾಡುವುದಕ್ಕೆ ಡೆಲ್ಲಿಗೆ ಹೋಗುವುದಾದರೆ, ನಮ್ಮ ಅಡ್ಡಿ ಇಲ್ಲ. ಆದರೆ ನಮ್ಮ ಕೆಲಸ, ಕರ್ನಾಟಕ ರಾಜ್ಯದ ಜನತೆಯ ಕೆಲಸ ಆಗಬೇಕು. ನಮ್ಮ ಸಮಸ್ಯೆ ಪರಿಹಾರ ಆಗಬೇಕು. ಹತ್ತು ದಿವಸ ಅಸೆಂಬ್ಲಿ ಕರೆದಿದ್ದಾರೆ. ಈ ಹತ್ತು ದಿವಸ ಆದರೂ ತಮ್ಮ ಒಂದು ಜವಾಬ್ದಾರಿಯನ್ನು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ನಿರ್ವಹಿಸುವುದಕ್ಕೆ ಅಷ್ಟು ತನ್ನ ಮನಸ್ಸಿನ ಮೇಲೆ ಹತೋಟಿ ಇಲ್ಲದೇ ಹೋದರೆ, ಬಾಕಿಯವರ ಮೇಲೆ ಏನು ಹತೋಟಿ ಇರುತ್ತದೆ.? ಇದ್ದರಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹೊಸದಾಗಿ ಅಬ್ಸೆಂಟ್ ಆಗುವುದಾದರೆ ಸರಿ. ಆದರೆ ನಾಲ್ಕು ವರ್ಷಗಳಿಂದ ಇದೇ ನಡೆದುಕೊಂಡು ಬರುತ್ತಿದೆ. ಇನ್ನು ಮುಂದೆ ಸದನ ನಡೆಯುವಾಗ ಅದರಲ್ಲೂ ಪ್ರಮುಖವಾಗಿ ಅವರ ಬೇಡಿಕೆ ಮೇಲೆ ಚರ್ಚೆ ನಡೆಯುವಾಗ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹಾಜರಿರುವಂತೆ ಅಪ್ಪಣೆ, ಆದೇಶವನ್ನು ತಾವು ಕೊಡಿಸಿದರೆ ನಾನು ಮುಂದೆ ಮಾತನಾಡುತ್ತೇನೆ.

ಛೇರ್ಮನ್.— ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.— ಸಪ್ಲಿಮೆಂಟನ ಎಸ್ಟಿಮೇಟ್‌ನಲ್ಲಿ.........

ಶ್ರೀ ಪಟಮಕ್ಕಿ ರತ್ನಾಕರ್.— ತಾವು ಹೇಳಿದ್ದು ರೆಕಾರ್ಡ್ ಆಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆಯಿತು ಎಂದು ಹೇಳಿದ್ದಾರೆ. ಅದು ರೆಕಾರ್ಡ್ ಆಗಿರಬಹುದು. ಈ ಪೂರಕ ಬೇಡಿಕೆಯಲ್ಲಿ ನಾವು ಏನು ನಿರೀಕ್ಷೆ ಮಾಡಿದ್ದೆವು ಎಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಏನು ಸಮಸ್ಯೆಗಳು ಬಹಳ ಬಾಧಿಸುತ್ತಿವೆ ಅದರ ಬಗ್ಗೆ ಹೆಚ್ಚು ಆಧ್ಯತೆ ಕೊಡುತ್ತಾರೆ ಎಂದು ಕೊಂಡಿದ್ದೆವು. ನಾನು ಇದರ ಪುಟಗಳನ್ನು ತಿರುಗಿಸಿ ನೋಡಿದ್ದೇನೆ. ಬರಗಾಲದ ಪ್ರಶ್ನೆ ತೆಗೆದುಕೊಂಡು ಪುಟ ೧ ಮತ್ತು ೨ರಲ್ಲಿದೆ. ಬರಗಾಲಕ್ಕಾಗಿ ೨೯೮ ಕೋಟಿ ರೂಪಾಯಿ ಬೇಕು ಎಂದು ತಾವು ಮೆಮೊರ್‍ಯಾಂಡಮ್ ಸಲ್ಲಿಸಿದ್ದಿರಿ. ೧೫ ಕೋಟಿ ರೂಪಾಯಿ ತಾತ್ಕಾಲಿಕವಾಗಿ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಾವು ಕೇಳಿದ್ದೀರಿ. ಏಪ್ರಿಲ್ ತಿಂಗಳಿನಿಂದ ಇವತ್ತಿನವರೆಗೂ ಅನೇಕ ಕಡೆ ಬರಗಾಲದ ಸೂಚನೆ ಇದೆ. ಬರಗಾಲದಿಂದ ಜನ ತತ್ತರಿಸಿ ಹೋಗಿದ್ದಾರೆ, ಅನೇಕ ಕಡೆ ಮಳೆ ಬರಲಿಲ್ಲ. ಬೆಳೆ ಬರಲಿಲ್ಲ. ಈ ಸಮಸ್ಯೆ ಇರುವಾಗ ಬರಗಾಲದ ಬಗ್ಗೆ ಪೂರಕ ಬೇಡಿಕೆ ಏನಿದೆ?

ಬಜೆಟ್ಟಿನಲ್ಲಿ ಬರಗಾಲಕ್ಕಾಗಿ ಇಟ್ಟಿರತಕ್ಕ ಮಾರ್ಜಿನ್ ಮನಿ ೬ ಕೋಟಿ ರೂಪಾಯಿಗಳು ಮಾತ್ರ. ಆದರೆ ಬಜೆಟ್ಟಿನಲ್ಲಿ ಬರಗಾಲಕ್ಕಾಗಿ ವಿಶೇಷವಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಪತ್ರಿಕೆಗಳಲ್ಲಿ ಹೇಳಿಕೆ ಬರುತ್ತದೆ. ಏಕೆಂದರೆ ಇವರು ಕೊಡತಕ್ಕ ಎಸ್ಟಿಮೇಟ್ ಎಕ್ಸ್‌ಪೆಂಡಿಚರ್ ಅಂತ ಹೇಳುತ್ತಾರೆ. ಮಾನ್ಯ ಬೊಮ್ಮಾಯಿಯವರ ಲೆಕ್ಕಾಚಾರದಲ್ಲಿ ಎಸ್ಟಿಮೇಟಿಗೂ ಎಕ್ಸ್‌ಪೆಂಡಿಚರ್‌ಗೂ ವ್ಯತ್ಯಾಸವೇ ಇರುವುದಿಲ್ಲ. ಎಷ್ಟು ಕೇಳುತ್ತಾರೋ ಅಷ್ಟು ಎಕ್ಸ್‌ಪೆಂಡಿಚರ್ ಎಂದು ಹೇಳುವ ಪ್ರವೃತ್ತಿ ಇವರದ್ದು. ಎಲ್ಲಾ ಪತ್ರಿಕೆಗಳಲ್ಲಿ ಎಲ್ಲಾ ಹಣವನ್ನು ಬರಗಾಲಕ್ಕಾಗಿ ಖರ್ಚು ಮಾಡಿದ್ದೇವೆಂಬ ಲೆಕ್ಕವನ್ನು ತೋರಿಸತಕ್ಕ ಪ್ರವೃತ್ತಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ಬರಗಾಲಕ್ಕಾಗಿ ಇಟ್ಟ ಒಟ್ಟು ಹಣ ಇವರ ಪೂರಕ ಬೇಡಿಕೆಗಳಲ್ಲಿ ಹೇಳಿರುವಂತೆ ೨.೦೮ ಕೋಟಿ ರೂಪಾಯಿಗಳು ಮಾತ್ರ. ಹಾಗಾದರೆ ಬರಗಾಲಕ್ಕಾಗಿ ಹಣವನ್ನು ಕೊಡಿ ಎಂಬುದಾಗಿ ಯಾವ ಮುಖದಲ್ಲಿ ಕೇಂದ್ರವನ್ನು ಕೇಳುತ್ತೀರಿ ? ೨೯೮ ಕೋಟಿ ರೂಪಾಯಿಗಳು ತಮಗೆ ಬೇಕಾಗಿದೆ. ಭೀಕರ ಬರಗಾಲ ಬಂದಿದೆ. ಜನಗಳಿಗೆ ಕಷ್ಟ ಬಂದಿದೆ. ಬರಗಾಲದ ಬಿಸಿ ಈ ಸರ್ಕಾರಕ್ಕೆ ತಟ್ಟಿದೆ ಎಂಬುದು ತಮ್ಮ ಪೂರಕ ಬೇಡಿಕೆಯ ಡಾಕ್ಯುಮೆಂಟ್‌ನಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಈ ಸಮಸ್ಯೆಯ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಜನ ನಿರೀಕ್ಷೆಯ ಕಣ್ಣುಗಳಿಂದ ತಮ್ಮ ನೋಡಿದವರಿಗೆ ತುಂಬಾ ನಿರಾಸೆಯಾಗತಕ್ಕ ಪರಿಸ್ಥಿತಿ ತಮ್ಮ ಪೂರಕ ಬೇಡಿಕೆಯಲ್ಲಿ ಕಾಣುತ್ತಿದೆ. ಬರಗಾಲಕ್ಕಾಗಿ ಬಜೆಟ್ಟಿನಲ್ಲಿ ಇಂತಹ ೬ ಕೋಟಿ ರೂಪಾಯಿಗಳಲ್ಲಿ ತಾವು ಬರಗಾಲಕ್ಕಾಗಿ ಖರ್ಚು ಮಾಡಿರುವಂತಾದ್ದು ೨.೦೮ ಕೋಟಿ ರೂಪಾಯಿಗಳು ಮಾತ್ರ. ತಾವು ಆ ಒಂದು ಹಣವನ್ನು ಬರಗಾಲಕ್ಕಾಗಿಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದ್ದೀರಿ. ಕೇಂದ್ರದಿಂದ ಇಷ್ಟೇ ಹಣವನ್ನು ಮಾತ್ರ ತಾವು ಕೇಳಿದ್ದೀರಿ ಎಂದ ಹಾಗಾಯಿತು. ತಾವು ಕೇಂದ್ರಕ್ಕೆ ಹೆಚ್ಚು ಹಣದ ನೆರವನ್ನುಕೇಳಿದ್ದೀರಿ. ಅದಕ್ಕಾಗಿ ಕೇಂದ್ರದ ಅಧ್ಯಯನ ತಂಡ (ಸ್ಟಡಿ ಟೀಂ) ಬರುತ್ತದೆ. ಇದರ ಬಗ್ಗೆ ಮೊನ್ನೆ ನಡೆದಂತಹ

ಸಭಾ ಸಲಹಾ ಸಮಿತಿಯಲ್ಲಿ ಖಾಸಗಿಯಾಗಿ ಮಾನ್ಯ ಬೊಮ್ಮಾಯಿಯವರಿಗೆ ಹೇಳಿದೆ. ದಯಮಾಡಿ ತಪ್ಪು ಮಾಡಬೇಡಿ. ನೀವು ೨೧೯ ಕೋಟಿ ರೂಪಾಯಿಗಳ ನೆರವನ್ನು ಬರಗಾಲಕ್ಕಾಗಿ ಕೇಂದ್ರದಿಂದ ಕೇಳಿದ್ದೀರಿ. ಈ ತರಹದ ಬೇಡಿಕೆಗಳನ್ನು ಕೇಂದ್ರಕ್ಕೆ ಸಲ್ಲಿಸಿದ್ದೀರಿ, ಅದನ್ನು ಅಧ್ಯಯನ ಮಾಡುವ ಸಲುವಾಗಿಯೇ ಕೇಂದ್ರದ ಅಧ್ಯಯನ ತಂಡ ಬರುತ್ತದೆ. ಅವರು ಯಾವ್ಯಾವ ಜಾಗಕ್ಕೆ ಹೋಗುತ್ತಾರೋ ಅಲ್ಲೆಲ್ಲಾ ಸಾವಿರಾರು ಜನಗಳು ಕೆಲಸದಲ್ಲಿರಬೇಕು ಸಾವಿರಾರು ಜನರನ್ನು ಕೆಲಸದಲ್ಲಿ ತೊಡಗಿಸಿ ಅದನ್ನು ಕೇಂದ್ರದ ಅಧ್ಯಯನ ತಂಡ ನೋಡಿದರೆ ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡತಕ್ಕ ಜನ ಇದ್ದಾರೆ, ಕೆಲಸ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಅವರು ಕೇಂದ್ರಕ್ಕೆ ನೀಡುತ್ತಾರೆ. ಅದನ್ನು ಕೇವಲ ನಿಮ್ಮ ಮೆಮೊರಾಂಡಂ ಮುಖಾಂತರ ಕೊಡತಕ್ಕದ್ದು ಅಲ್ಲ. ಆ ಜಾಗದಲ್ಲಿ ಜನ ಕೆಲಸ ಮಾಡುತ್ತಿರಬೇಕು. ಕೆಲಸ ಮಾಡುವುದಕ್ಕೆ ಜನ ಕಾಯ್ದುಕೊಂಡಿರಬೇಕು. ಆ ಹಿನ್ನೆಲೆಯಲ್ಲಿ ಬಂದಂತಹ ಅಧ್ಯಯನ ಸಮಿತಿ ಸೂಕ್ತ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಮಾಡುತ್ತದೆ. ಆದರೆ ೨ ಕೋಟಿ ರೂಪಾಯಿಗಳನ್ನು ೧೯ ಜಿಲ್ಲೆಗಳಿಗೆ ಬಿಡುಗಡೆ ಮಾಡಿದರೆ ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಹಣ ಬರುತ್ತದೆ ? ಎಷ್ಟು ಸಾವಿರ ಜನಗಳಿಗೆ ಕೆಲಸವನ್ನು ಕೊಡಲು ಸಾಧ್ಯ ೧೨ರಿಂದ ೧೫ ಲಕ್ಷದವರೆಗೆ ಜನ ಕೆಲಸಕ್ಕಾಗಿ ಕಾದಿದ್ದಾರೆ ನಾವು ಆ ಜನಗಳನ್ನು ಕೆಲಸದಲ್ಲಿ ತೊಡಗಿಸಬೇಕು ಅಂತ ಮನವಿಯಲ್ಲಿ ತಿಳಿಸಿದ್ದೀರಿ. ಅದರಂತೆ ಅಧ್ಯಯನ ಸಮಿತಿ ಬಂದಾಗ ಅದೇ ಪರಿಸ್ಥಿತಿ ತಮ್ಮಗೆ ಅರಿವಾಗಬೇಕು ಅದಿಲ್ಲದಿದ್ದರೆ ನೀವು ಹೇಳಿದ ರೀತಿಯಲ್ಲಿ ಅಷ್ಟು ಜನ ಕೆಲಸ ಮಾಡದಿದ್ದರೆ ನಿಮಗೆ ಸಿಕ್ಕತಕ್ಕ ಸಹಾಯ ೧೦ ಕೋಟಿ ರೂ. ಮಾತ್ರ in page No. 2 item No. 3you have stated ' A sum of Rs. 2·08 crores has been distributed among the Zilla Parishads to undertake drought relief m-asures in drought affected areas'' ಆದರೆ ನೀವು ಇವತ್ತು ಆ ಬಗ್ಗೆ ೨ ಕೋಟಿ ಹಣವನ್ನು ಇಟ್ಟು ೨೧೯ ಹಣವನ್ನು ಕೇಂದ್ರದಿಂದ ಕೇಳಿದರೆ ಅವರು ಹೆಚ್ಚೆಂದರೆ ೧೫ ಕೋಟಿ ಕೊಟ್ಟರೆ ಸಾಕು. It is on record ಇದನ್ನು ಕೇಂದ್ರದಿಂದ ಬರುವಂತಹ ಅಧ್ಯಯನ ತಂಡ ನೋಡಿದರೆ ನಿಮ್ಮ ಮುಖಕ್ಕೆ ಮಂಗಳಾರತಿಯಾಗುತ್ತದೆ. ಯಾವ ರೀತಿ ನೀವು ಹಣಕಾಸಿನ ಪರಿಸ್ಥಿತಿಯನ್ನು ನಿರ್ವಹಿಸುತ್ತಿದ್ದೀರಿ. ಕರ್ನಾಟಕ ರಾಜ್ಯದ ಜನರು ಏನು ಇಂತಹ ಒಂದು ಕಷ್ಟದಲ್ಲಿದ್ದಾರೆ ಅವರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ? ಅವರ ಬಗ್ಗೆ ತಮ್ಮ ಹೃದಯ ಮಿಡಿತ ಇಲ್ಲ ಅಂತಲೇ ಇಟ್ಟುಕೊಳ್ಳೋಣ ಅದರೆ ಅವರ ಬಗ್ಗೆ ಮೊಸಳೆ ಕಣ್ಣೀರನ್ನಾದರೂ ಬರಿಸತಕ್ಕ ನಟನೆಯಾದರೂ ನಿಮ್ಮ ರೆಕಾರ್ಡಿನಲ್ಲಿ ಎಲ್ಲಿಯಾದರೂ ಕಾಣುತ್ತದೆಯೋ ಅಂತ ನೋಡಿದರೆ ಅದು ಕೂಡ ಇಲ್ಲ. ಇದಕ್ಕೂ ರಾಜಕೀಯವಾ ಹಾಗೆಂದರೆ ಜನ ಯಾರು ಕೆಲಸಕ್ಕೆ ಬರುವುದಿಲ್ಲವೇ ಸಪ್ಲಿಮೆಂಟರಿ ಎಸ್ಟಿಮೇಟನ್ನು ಯಾವ ರೀತಿ ಮಾಡಿದ್ದಾರೆಂದು ಮುಖ್ಯಮಂತ್ರಿಗಳು ನೋಡೇ ಇಲ್ಲವೆಂದು ಕಾಣುತ್ತದೆ. ಇದು ಒಂದು ಊರಿನ ಜನರ, ಕರ್ನಾಟಕ ರಾಜ್ಯದ ಸಮಸ್ಯೆಯಾದರೆ ವಿಧಾನಸೌದ ಮಟ್ಟದಲ್ಲಿ ನಡೆಯತಕ್ಕ ಚಟುವಟಿಕೆಯೇ ಬೇರೆ. ಒಂದು ರೀತಿಯಾದ ಕಠೋರತನದಿಂದ ನಿರ್ಲಜ್ಜತೆಯಿಂದ ಸಮಸ್ಯೆಗಳ ಬಗ್ಗೆ ಯಾವುದೇ ರೀತಿಯ ಸ್ಪಂದನ ಕೊಡದೇ ಸರ್ಕಾರವನ್ನು ನಡೆಸತಕ್ಕ ಚಟುವಟಿಕೆಯನ್ನು ನೋಡಿದರೆ ಯಾರಿಗೇ ಆದರೂ ರೋಷ ಬರುತ್ತದೆ. ಇದರಲ್ಲಿ ರಾಜಕೀಯ ಇಲ್ಲ. ಬೇರೆ ಯಾವ ಬಾಬತ್ತಿನಲ್ಲೂ ಕೂಡಾ ಸ್ವಲ್ಪವೇ ಹಣ ಕಾಣುತ್ತದೆ ಏಕೆಂದರೆ ಕೆಲವು ನಗರಗಳಲ್ಲಿ ನೀರಿನ ಕೊರತೆ ಇದೆ. ಗ್ರಾಮಾಂತರ ಪ್ರದೇಶದಲ್ಲಿ ನೀರಿನ ಕೊರತೆ ಇದೆ ಜನರಿಗೆ ಕೆಲಸ ಕೊಡಬೇಕು. ಮಾನ್ಯ ದೇಶಪಾಂಡೆಯವರಿಗೆ ವಿಷಯ ಗೊತ್ತಿದೆ. ಇನ್ನು ಒಂದು ತಿಂಗಳು ಕೆಲಸ ಮಾಡದಿದ್ದರೆ, ಕೆಲಸ ಕೆಡುತ್ತದೆ. ಒಂದು ತಿಂಗಳು ಕೆಲಸ ವ್ಯವಸಾಯ ಕ್ಷೇತ್ರದಲ್ಲಿ ಚುರುಕಾಗಿ ನಡೆಯಬೇಕು. ಇದಕ್ಕೆ ಹಣ ಬೇಕಾಗುತ್ತದೆ.

SRI R. V. DESHAPANDE—We have already released the amount.

SRI M VEERAPPA MOILY.—Where is the mony ? You have released to what extent ? Every year you release : this time in the name of drought:

SRI R. V. DESHAPANDE.—In addition to normal Programmes we have released.

SRI M. VEERAPPA MOILY.—Where is it reflected ?

ಶ್ರೀ ಆರ್. ವಿ. ದೇಶಪಾಂಡೆ.—ಏನೇನು ಹೇಳುತ್ತಿದ್ದಾರೋ ಅದು ನಾರ್ಮಲ್ ಪ್ರೋಗ್ರಾಂ ಅಲ್ಲ. ಬರ ಪ್ರದೇಶದಲ್ಲಿ ಬೀಜ, ಗೊಬ್ಬರ ಹಾಗೂ ಇತರ ಸಾಮಗ್ರಿಗಳನ್ನು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಒದಗಿಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.– ನಾನು ಎಲ್ಲಾ ಕಡೆ ನೋಡಿ ಬಂದಿದ್ದೇನೆ. ಬೀಜ ಎಲ್ಲೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹಣದ ಬಗ್ಗೆ ಹೇಳಿದಾಗನಾವು ಹಣ ರಿಲೀಸ್ ಮಾಡಿದ್ದೇವೆಂದು ಹೇಳಿದರೆ ಬೀಜ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.– ಸೂರ್ಯಕಾಂತಿ ಬೀಜ ಒಂದು ಬಿಟ್ಟರೆ ಬೇರೆ ಯಾವ ಬೀಜದ ಕೊರತೆ ನಮ್ಮಲ್ಲಿಲ್ಲ. Seeds are supplied through Karnataka State Seeds Corporation.

ಶ್ರೀ ಡಿ.ಎ. ಚಿನ್ನಪ್ಪ. —ಕೊಡಗಿನಲ್ಲಿ ಸೂರ್ಯಕಾಂತಿ ಬೀಜ ಸಿಕ್ಕುತ್ತಾ ಇಲ್ಲ. ಆದ್ದರಿಂದ ಅಲ್ಲಿ ಕೆಲಸ ಪ್ರಾರಂಭ ಮಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ.—ನಾನು ಅದನ್ನು ಒಪ್ಪಿಕೊಂಡಿದ್ದೇನೆ. ಸೂರ್ಯಕಾಂತಿ ೪ ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಸಲಾಗುತ್ತಿದ್ದುದು ಈಗ ೬ ಲಕ್ಷ ಹೆಕ್ಟೇರ್ ಆಗಿದೆ. ಇದರ ಬೀಜ ಮಹಾರಾಷ್ಟ್ರದಲ್ಲಿ, ಗುಜರಾತಿನಲ್ಲಿ, ಆಂಧ್ರಪ್ರದೇಶದಲ್ಲಿ ಏಕೆ, ಇಡೀ ದೇಶದಲ್ಲಿಯೇ ಸಿಗುತ್ತಿಲ್ಲ ಆದಷ್ಟು ಬೇಗ ೪ ಸಾವಿರ ಕ್ವಿಂಟಾಲ್ ರಿಲೀಸ್ ಮಾಡಿ ಎಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ನಾವು ಇನ್ನೇನು ಮಾಡುವುದಕ್ಕಾಗುತ್ತದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಐಟಂ ೪ ರಿಂದ ೬ ತಾವು ಹೇಳುತ್ತಾ ಇರಬಹುದು. You have said :

> "During 1986–87 the Government of India released a short term loan of Rs. 216.50 lakhs more than expected for purchase and distribution of Agricultural inputs. Hence this amount was released from contingency fund in March 1987. Of this, a sum of Rs. 100.00 lakhs was released to Karnataka Agro Industries Corporation and this was not drawn. The sanction was renewed and a snm of Rs. 70.00 lakhs was released. A further sum of Rs. 90 lakhs has also been released out of the short term loan sanctioned during the curreent year as against the budget provision of Rs. 71.40 lakhs."

ಕೇಂದ್ರಸರ್ಕಾರದವರು ಕೊಟ್ಟಂತಹ ಹಣವನ್ನು ಇವರು ಖರ್ಚುಮಾಡುವುದಿಲ್ಲ. ಆಗ್ರಿಕಲ್ಚರಲ್ ಇನ್‌ಪುಟ್ಸ್‌ಗೋಸ್ಕರ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆಂದು ಹೇಳಿ ೨೧೬ ಲಕ್ಷ ರೂ.ಗಳನ್ನು ೧೯೮೬–೮೭ರಲ್ಲಿ ಕೊಟ್ಟರೆ ಇವತ್ತಿಗೂ ಖರ್ಚುಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾರ್ಚಿಯೊಳಗೆ ಅದನ್ನು ಡ್ರಾ ಮಾಡಬೇಕಾಗಿತ್ತು, ಮಾರ್ಚಿಯೊಳಗೆ ಫೈನಾನ್ಸಿಯಲ್ ಬಡ್ಜೆಟ್ ಕ್ಲಿಯರ್ ಮಾಡುವ ಸಂದರ್ಭದಲ್ಲಿ ಖರ್ಚು ಮಾಡಿಲ್ಲ. ಆಗ ಬಂದಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಣವನ್ನು ಡ್ರಾಮಾಡಿ ಅಲ್ಲಿ ಇಡುವ ಪ್ರಶ್ನೆಯಲ್ಲ. ಅಡ್ಜೆಸ್ಟ್‌ಮೆಂಟ್‌ಗೋಸ್ಕರ ಅದನ್ನು ಆ ರೀತಿ ಮಾಡಿದ್ದೀರಿ, ೧೯೮೬–೮೭ರಲ್ಲಿ ಕೊಟ್ಟಂತಹ ಹಣವನ್ನು ನೀವು ಖರ್ಚುಮಾಡಿಲ್ಲ ಅದನ್ನು ನೀವು ಒಪ್ಪುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾರ್ಚಿಯೊಳಗೆ ಬಂದಿದೆ, ಆ ಸಮಯದಲ್ಲಿ ೨೧೬ ಲಕ್ಷ ರೂಪಾಯಿಗಳನ್ನು, ಖರ್ಚುಮಾಡುವುದಕ್ಕೆ ಆಗುತ್ತದೆಯೋ ? ಮಾರ್ಚಿಯೊಳಗೆ ಬಂದಿದೆ, ತಾವು ಅರ್ಥಮಂತ್ರಿ

ಗಳಾಗಿದ್ದವರು, ಹಣ ಒಂದೇ ಸಲ ಬರುವುದಿಲ್ಲ ನಾವು ಯಾವರೀತಿ ಖರ್ಚಿನ ಬಾಬ್ತು ಕೊಡುತ್ತೇವೆಯೋ ಅದೇರೀತಿ ಕೇಂದ್ರಸರ್ಕಾರದಿಂದ ಬರತಕ್ಕ ಹಣ ಒಂದೇ ಸಾರಿ ಬರುವುದಿಲ್ಲ. ಕೊನೆ ಕೊನೆಗೆ ಬರುತ್ತದೆ. ಅವರಿಗೂ ಕಷ್ಟವಿದೆ ಅದಕ್ಕೋಸ್ಕರ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಕಂಟಿನ್‌ಜೆನ್ಸಿ ಹಣವನ್ನು ತಾವು ಬಿಡುಗಡೆ ಮಾಡಿದ್ದು ಮಾರ್ಚಿ ೧೯೮೭ರಲ್ಲಿ ಅದಕ್ಕೆ ಮೊದಲೇ ಕೇಂದ್ರಸರ್ಕಾರದವರು ರಿಲೀಸ್ ಮಾಡಿದ್ದಾರೆ. ಅಲ್ಲಿಂದ ಬಂದ ಮೇಲೆ ಖರ್ಚುಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇಲ್ಲವೆಂದು ಹೇಳಲಿಲ್ಲ, ತಾವು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬರಗಾಲದ ವ್ಯವಸ್ಥೆಯನ್ನು ಈ ಸರ್ಕಾರದವರು ಯಾವರೀತಿ ನಿರ್ವಹಿಸುತ್ತಿದ್ದಾರೆ ಅಷ್ಟನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಪುಟ-೧೧ರಲ್ಲಿ ನಮ್ಮ ನಾಯಕಿಯವರು ಸಹ ಹೇಳಿದರು ೩೧½ ಲಕ್ಷ ರೂಪಾಯಿಗಳನ್ನು ೪೦ನೇ ಸ್ವಾತಂತ್ರ್ಯೋತ್ಸವಕ್ಕೆ ಖರ್ಚು ಮಾಡಿದ್ದಾರೆ. ಅದರ ವಿವರ ಕೊಡಬೇಕು. ಆ ಹಣ ಸದುಪಯೋಗವಾಗಿದ್ದರೆ ಅದನ್ನು ಹೇಳಬೇಕು ಇಷ್ಟು ಹಣದ ಕೊರತೆ ಇರತಕ್ಕ ಸಂದರ್ಭದಲ್ಲಿ ತಾವು ಯಾವರೀತಿಯಲ್ಲಿ ಇಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಏನು ಕಾರಣ ? ಇದು ದುಂದು ವೆಚ್ಚವೆಂದು ಹೇಳಬೇಕಾಗಿದೆ. ಪುಟ ೧೧-೧೩ರಲ್ಲಿ ಹಣದ ಕೊರತೆಯಿದೆ ಎಂದು ಒಂದು ಪುಸ್ತಕ ಬಿಡುಗಡೆ ಮಾಡಿದ್ದೀರಿ. "Resource Crunch-why ? ' ಎಂದು, ಈ ಸಂದರ್ಭದಲ್ಲಿ ದೆಹಲಿಯಲ್ಲಿ ಬೃಂದಾವನ ಸಂಸ್ಥೆ ಅವರಿಗೆ ಕಟ್ಟಲಿಕ್ಕೆ, ಅವರ ಉಪಯೋಗಕ್ಕೆ ಅದಕ್ಕೆ ೨೫ಲಕ್ಷ ಮಂಜೂರು ಮಾಡಿ ಅದರಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಈ ತರಹ ಅನೇಕ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಿರುವಂತಹ ಐಟಂಗಳು ಬಹಳ ಇವೆ. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ ಬಗ್ಗೆ ತಮಗೆ ಬಹಳ ಆಸಕ್ತಿಯಿದೆ ಎಂದು ಇವರು ಆಗಾಗ ಭಾಷಣ ಮಾಡುತ್ತಾರೆ. ನಿಮ್ಮಿಂದ ಅವರಿಗಾಗಿ ಇರತಕ್ಕ ಹಣವನ್ನು ಸರಿಯಾಗಿ ಖರ್ಚುಮಾಡುವುದಕ್ಕೆ ಆಗಿಲ್ಲ. ಕೇಂದ್ರಸರ್ಕಾರ ದಿಂದ ಅವರಿಗಾಗಿ ಹಣವನ್ನು ಬಿಡುಗಡೆ ಮಾಡುತ್ತಾರೆ. ಇವರು ಅದನ್ನು ಖರ್ಚು ಮಾಡುವುದಿಲ್ಲ. Further, under Demand No. 62, in explanatory note, it is stated as follows.—

> "The Government of India and the Government of Karnataka are investing equally in the share capital of the Karnataka Scheduled Caste Scheduled Tribes Development Corporation. For the year 1985-86, Government of India released Rs. 38 43 lakhs towards their share capital. As there was no sufficient funds, a sum of Rs. 38.43 lakhs was released from the Contingency Fund. Now, it is required to repay to the fund."

ಅವರು ಬಿಡುಗಡೆ ಮಾಡಿದಂತಹ ೩೮ ಲಕ್ಷ ಅದನ್ನು ನೀವು ಖರ್ಚು ಮಾಡಿಲ್ಲ. ಅವರು ಕೊಟ್ಟಷ್ಟು ಹಣವನ್ನು ಕೊಡುವುದಕ್ಕೆ ನಿಮ್ಮ ಹತ್ತಿರ ಹಣವಿಲ್ಲ. ಆ ಹಣವನ್ನು ಟ್ರೆಜರಿಯಲ್ಲಿಟ್ಟುಕೊಂಡು ಬೇರೆ ಯಾವುದಕ್ಕೊ ಒದಗಿಸಿದ್ದೀರಿ. ಕೇಂದ್ರ ಸರ್ಕಾರ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದಂತಹ ಹಣವನ್ನು ತಾವು ರಾಜಕೀಯಕ್ಕಾಗಿ ಮತ್ತೊಂದಕ್ಕಾಗಿ ಇನ್ನೊಂದು ರೀತಿಯಲ್ಲಿ ದುರುಪಯೋಗ ಮಾಡುತ್ತಿರುವುದು ನಿಮ್ಮ ಸರ್ಕಾರದ ಸಂಸ್ಕೃತಿ ಎಂದು ಹೇಳಿದರೆ ಅದಕ್ಕೂ ರಾಜಕೀಯ ಮಾತನಾಡುತ್ತೀರಿ ಎಂದು ಹೇಳುತ್ತೀರಿ ?

ಏಕೆಂದರೆ ನಿಮ್ಮ ರೆಕಾರ್ಡ್‌ನಲ್ಲಿ ಈ ರೀತಿ ಇದೆ. ಇನ್ನೊಂದು ಡಿಮ್ಯಾಂಡ್ ನಂ. ೬೪ ರಲ್ಲಿ ಕೂಡ ಇದೆ. This is again special Component Plan.

> "During 1986-87, savings were expected out of the amount provided to different departments for special component plan. In order to utilise the unspent amount during 1987-88 for the welfare of Scheduled Castes/

Scheduled Tribes, the amount was placed at the disposal of the Karnataka State Scheduled Castes, Scheduled Tribes Development Corporation and Zilla Parishad Bangalore. Additional amounts to this extent to the Corporation and Zilla Parishad constituted new service and hence a sum of Rs. 245.77 lakhs was released from Contingency Fund. The demand is for repayment to the Fund...

Government of India again released a total amount of Rs. 774.87 lakhs for taking up developmental programmes for Scheduled Castes and Scheduled Tribes for the year 1986–87 under Special Component Plan. As provision made in the budget was insufficient for some programmes an amount of Rs. 175 lakhs was released from contingency fund."

ಇದರಲ್ಲಿ ಕೂಡ ಅಷ್ಟೆ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಅವರಿಗೆ ಸಂಬಂಧಪಟ್ಟಂಥ ಕಾರ್ಯಕ್ರಮದಲ್ಲೂ ಕೂಡ ತಾವು ಹಣವನ್ನು ದುರುಪಯೋಗ ಪಡಿಸುತ್ತಿದ್ದೀರಿ, ಈ ಹಣವನ್ನು ಬೇರೆ ರೀತಿಯಲ್ಲಿ ಉಪಯೋಗಿಸುತ್ತಿದ್ದೀರಿ ಎಂಬುದಕ್ಕೆ ಬಹುಶಃ ತಾವು ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಕೊಟ್ಟಂಥ ಕೆಲವು ದಾಖಲೆಗಳು ಸಾಕ್ಷಿ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ಸಪ್ಲಿಮೆಂಟರಿ ಡಿಮಾಂಡ್‌ನಲ್ಲಿ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಇದರಲ್ಲೂ ಕೂಡ ಹೇಳುವುದಾದರೆ ಸುಮಾರು 8 ಪರ್ಸೆಂಟ್ ಕಾರ್ಯಕ್ರಮಗಳು ಇವತ್ತು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳ ಮೂಲಕ ಅನುಷ್ಠಾನ ಆಗಬೇಕು. ಇದರ ಬಗ್ಗೆ ಸಪ್ಲಿಮೆಂಟರಿ ಡಿಮಾಂಡ್‌ನಲ್ಲಿ ಒಂದು ನಯಾ ಪೈಸೆ ಕೂಡ ಇದರಲ್ಲಿ ಇಲ್ಲ. ಗ್ರಾಮಾಂತರ ಜನರಿಗೆ ಈ ವಿಧಾನಸೌಧ ಅಥವಾ ವಿಧಾನ ಸಭೆ ಔಟ್ ಆಫ್ ಬೌಂಡರಿ ಆಗಿದೆ. ಜಿಲ್ಲಾಪರಿಷತ್ತುಗಳನ್ನು ಡಿಸೆಂಟ್ರಲೈಸೇಶನ್ ಮಾಡುವುದಕ್ಕೆ, ಅವರ ಬೇಡಿಕೆಗಳ ಬಗ್ಗೆ ಗ್ರಾಮಾಂತರ ಜನರ ಬೇಡಿಕೆ ಬಗ್ಗೆ ಯಾವುದೇ ಪೂರೈಕೆ ಸಪ್ಲಿಮೆಂಟರಿ ಡಿಮಾಂಡ್‌ನಲ್ಲಿ ಇಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಬೇಗ್ಗೆ ಸಾಕಷ್ಟು ಚರ್ಚೆ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಈ ಸದನದಲ್ಲಿ ಆಯಿತ್ತು. ಈಗ ಹೊಸ ಅಕೌಂಟಿಂಗ್ ಸಿಸ್ಟಮ್ ಅನ್ನು ಜಿಲ್ಲಾ ಪರಿಷತ್ ಅಥವಾ ಮಂಡಲ್ ಪಂಚಾಯತಿಗಳಲ್ಲಿ ಮಾಡಿದ್ದಾರೆ. ಹಿಂದೆ ಆದರೆ ಯಾವುದೇ ಒಂದು ಫೈನಾನ್ಸಿಯಲ್ ಸ್ಟ್ರಕ್ಚರ್ ಫೈನಾನ್ಸಿಯಲ್ ಕೋಡ್ ಮುಖಾಂತರ ಆಗತಕ್ಕದ್ದು ಬಜೆಟ್ ಓಟ್ ಆದಮೇಲೆ ಯಾವುದೇ ಡಿಮಾಂಡ್‌ಗೆ ಓಟು ಕೊಟ್ಟಮೇಲೆ... The funds will be placed at the disposal of the respective Heads of Departments. ಅವರು ಅವರವರ ಡೇಲಿಗೇಷನ್ ಆಫ್ ಪವರ್ಸ್ ಪ್ರಕಾರ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ಗೆ ಅಥರೈಸ್ ಮಾಡುತ್ತಾರೆ, ಆಪರೇಟ್ ಮಾಡಲಿಕ್ಕೆ ಹೆಡ್ ಆಫ್ ಡಿಪಾರ್ಟಮೆಂಟ್ ಬೇರೆ ಬೇರೆ ಆಫೀಸರ್‌ಗಳು ಬೇರೆ ಬೇರೆ ಹಂತದಲ್ಲಿ ಅವರವರ ಅಧಿಕಾರಕ್ಕೆ ಅನುಗುಣವಾಗಿ ಆಪರೇಟ್ ಮಾಡುತ್ತಾರೆ. ಇದ ಬಹಳ ಸ್ಮೂತ್ ಆಗಿ ನಡೆಯುತ್ತಿತ್ತು. ಇವತ್ತು ಎಲ್ಲಾ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ ಹೊರಟಂಥವರು, ಏಕೆಂದರೆ ಅವರಿಗೆ ಗೊತ್ತು...they know what is voted budget ಎಂದು ಹಣಕಾಸಿನ ವಿಷಯದಲ್ಲಿ ಕೇಂದ್ರೀಕರಣ ಆಯಾಯ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್‌ನಲ್ಲಿ ಆಗುತ್ತಿತ್ತು. ಅಥವಾ ಆಯಾಯ ಇಲಾಖೆಗೆ ಸಂಬಂಧಪಟ್ಟ ಕಾರ್ಯದರ್ಶಿಯವರದ್ದು, ಮಿನಿಸ್ಟ್ರಿಯವರದ್ದು ಇದೆ. ಅಲ್ಲಿ ಒಂದು ತರಹ ಕೇಂದ್ರೀಕೃತ ಆಗುತ್ತಿತ್ತು. ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲದ ಅನೇಕ ನಿಯಮಗಳನ್ನು ಡಬ್ಬಿ ಇವತ್ತು ಇದೇ ಒಂದು ಕೇಂದ್ರೀಕರಣ ಡಿಸ್ಟ್ರಿಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಆಗಿಲ್ಲ. ಹೆಡ್ಸ್ ಆಫ್ ಡಿಪಾರ್ಟಮೆಂಟ್‌ನಲ್ಲಿ ಆಗಿಲ್ಲ. ಇಲಾಖೆಗೆ ಸಂಬಂಧಪಟ್ಟ ಕಾರ್ಯದರ್ಶಿಯವರ ಕಛೇರಿಯಲ್ಲಿ ಆಗಲಿಲ್ಲ.

೩–೩೦ ಪಿ. ಎಂ.

ಇವತ್ತು ಫೈನಾನ್ಸ್ ಸೆಕ್ರೆಟರಿ ಅವರ ಬಿಗಿಮುಷ್ಟಿಯಲ್ಲಿ ಜಿಲ್ಲಾ ಪರಿಷತ್ತಿನ ಆಡಳಿತವನ್ನು ಕೊಟ್ಟು, ಇಡೀ ಆಡಳಿತವನ್ನು ನುಚ್ಚುನೂರು ಮಾಡಿದ್ದೀರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇನ್ನು ಎಲ್. ಓ. ಸಿ. ಬಗ್ಗೆ ಅನೇಕ ಮಂತ್ರಿಗಳೇ ಕಂಪ್ಲೇಂಟ್ ಮಾಡಿದ್ದಾರೆ. ಪಿ. ಡಬ್ಲ್ಯೂ. ಡಿ. ನಲ್ಲಿ ಮತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಎಲ್. ಓ. ಸಿ. ಹಿಂದೆ ಕೂಡ ಜಾರಿಯಲ್ಲಿತ್ತು. ಈ ಹಣವನ್ನು ಏತಕ್ಕೆ ಖರ್ಚು ಮಾಡಬೇಕೆಂದೂ ಕೂಡ ಇತ್ತು. ಆದರೆ ಇವತ್ತು ಎಲ್. ಓ. ಸಿ. ಸಿಸ್ಟಂ ಎಷ್ಟು ಡಿಸ್ಟಾರ್ಟ್ ಆಗಿದೆ ಎಂಬುದನ್ನು ನೋಡಬೇಕು. ಬರೀ ಪತ್ರಿಕೆಯಲ್ಲಿ ಮಂಡಲ್ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ ಆಗುಹೋಗುಗಳನ್ನು ನೋಡುತ್ತಿದ್ದೇವೆ. ಪೇಮೆಂಟ್‌ಗೆ ಆಥರೈಸ್ ಮಾಡಿದಾಗ ಹನ್ನೆರಡನೇ ಒಂದು ಭಾಗ ಮಾತ್ರ ರಿಲೀಸ್ ಮಾಡುತ್ತಾರೆ. ಯಾವುದೇ ಕಾರ್ಯಕ್ರಮಗಳ ಬಗ್ಗೆ ಆಗಲೀ ಜಿಲ್ಲಾ ಪರಿಷತ್ ಸೆಕ್ರೆಟರಿ ಕಾಯಬೇಕಾಗಿದೆ ಈ ಜಿಲ್ಲಾ ಪರಿಷತ್ ಕಾರ್ಯದರ್ಶಿಯವರ ಹತ್ತಿರ, ಆ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳು ಕ್ಯೂ ನಿಲ್ಲಬೇಕು. ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳು, ಫೈನಾನ್ಸ್ ಸೆಕ್ರೆಟರಿ ಆದೇಶವನ್ನು ಕಾದು ನಿಲ್ಲಬೇಕು. ಈವತ್ತು ಸ್ಯಾಲರಿ ವಿಚಾರವನ್ನೇ ತೆಗೆದುಕೊಳ್ಳಿ. ಸ್ಟೇಟ್ ಸೆಕ್ಟಾರ್‌ನಲ್ಲಿರತಕ್ಕಂಥ ನೌಕರರಿಗೆ ೩೦ ಅಥವಾ ೩೧ ಸಂಬಳ ಬರುತ್ತದೆ ಆದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯಾಪ್ತಿಗೆ ಒಳಪಡತಕ್ಕ ಇಲಾಖೆಗಳ ನೌಕರರಿಗೆ ೬ ಅಥವಾ ೭ನೇ ತಾರೀಖಿಗೆ ಬರುತ್ತದೆ. ಫೈನಾನ್ಸ್ ಸೆಕ್ರೆಟರಿ ಇಂಟಿಮೇಷನ್ ಕೊಡುವುದೇ ೨೯ ಅಥವಾ ೩೦ನೇ ತಾರೀಖಿಗೆ. ಯಾವುದೇ ಐಟಂ ಆಗಲೀ, ಹನ್ನೆರಡನೇ ಒಂದು ಭಾಗ ಮಾತ್ರ ರೀಲಿಸ್ ಮಾಡುತ್ತಾರೆ. ಎಲ್ಲಿಯವರೆಗೆ ಡಿಸ್ಟಾರ್ಷನ್ ಆಗಿದೆ ಎಂದು ಹೇಳಿದರೆ, ಕೃತಕ ಗರ್ಭಧಾರಣೆಗೂ ಹನ್ನೆರಡನೇ ಒಂದು ಭಾಗ ರಿಲೀಸ್ ಮಾಡಿದ್ದಾರೆ ಎಂದರೆ, ಇದರ ಅರ್ಥ ಏನು ? ಕ್ರಿಮಿಕೀಟಗಳನ್ನು ನಿರ್ಮೂಲ ಮಾಡುವುದು, ಬೆಳೆಯನ್ನು ಪ್ರೊಟೆಕ್ಟ್ ಮಾಡುವುದ ಇಂತಹ ವಿಚಾರಗಳಿಗೂ ಹನ್ನೆರಡನೇ ಒಂದು ಭಾಗ ರಿಲೀಸ್ ಮಾಡುತ್ತಾರೆ. ಈ ತರಹ ಪ್ರೋಗ್ರಾಮ್‌ಗಳು ೧೨ ತಿಂಗಳೂ ಕೂಡ ಇರುವುದಿಲ್ಲ. ನಾನು ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಹೇಳುತ್ತಿದ್ದೇನೆ. ಇವರು ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಆಗುತ್ತಿಲ್ಲ. ಜೊತೆಗೆ ನೀವು ತಿಂಗಳಿಗೆ ಹನ್ನೆರಡನೇ ಒಂದು ಭಾಗ ರಿಲೀಸ್ ಮಾಡಿದರೆ, ಕಾರ್ಯಕ್ರಮಗಳು ಆಗುತ್ತವೆಯೇ ? ಯಾವ ಸಿಸನ್‌ನಲ್ಲಿ ಎಲ್ಲಿ ಮಾಡಬೇಕೋ ಯಾವಾಗ ರೀಲಿಸ್ ಆಗ ಮಾಡಿದರೆ ಅನುಕೂಲವಾಗುತ್ತದೆ, ಇಲ್ಲದೇ ಹೋದರೆ ತೊಂದರೆಯಾಗುತ್ತದೆ.

(ಸಭಾಧ್ಯಕ್ಷರು, ಪೀಠವನ್ನು ಅಲಂಕರಿಸಿದರು)

ಪ್ರತಿಯೊಬ್ಬ ಮಂತ್ರಿಗಳೂ ಸಹ ಇದರ ಬಗ್ಗೆ ಎಕ್ಸಾಮಿನ್ ಮಾಡಬೇಕು. ಎಲ್ಲರೂ ಕುಳಿತು ಕೊಂಡು ಚರ್ಚೆ ಮಾಡಬೇಕು. ಐಟಂ, ಐಟಂ ಬಗ್ಗೆಯೂ ಚರ್ಚೆ ಮಾಡಬೇಕು. ಮೊಬೈಲ್ ವೆಟರ್‌ನರಿ ಆಸ್ಪತ್ರೆಗೆ ಹನ್ನೆರಡನೇ ಒಂದು ಭಾಗ ರಿಲೀಸ್ ಮಾಡಿದ್ದಾರೆ. ಈ ಹಣ ಡೀಸಲ್‌ಗೂ ಸಾಲುವುದಿಲ್ಲ, ಇದರಿಂದ ವಾಹನಗಳು ಮೂವ್ ಆಗುವುದಿಲ್ಲ. ಬೇರೆ ಬೇರೆ ಫಂಕ್ಷನಲ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲವು ತಿಂಗಳಲ್ಲಿ ಸೀಸನಲ್ ವರ್ಕ್ ಇರುತ್ತದೆ. ಉದಾಹರಣೆಗೆ ಸಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಇದೆ. ಯಾವುದೋ ಒಂದು ವರ್ಕ್‌ನನ್ನು ಕಂಟ್ರಾಕ್ಟರಿಗೆ ಕೊಡುತ್ತಾರೆ, ಅವರಿಗೆ ಒಂದು ಅಗ್ರಿಮೆಂಟ್ ಪೀರಿಯಡ್ ಇರುತ್ತದೆ. ಇಂತಹ ಕೆಲಸಕ್ಕೆ ಇಂತಿಷ್ಟು ಹಣ ರಿಲೀಸ್ ಮಾಡಬೇಕು ಎಂದು ಅವರು ಕೆಲಸ ಮಾಡುವ ಪ್ರಾರಂಭದಲ್ಲಿ ಸ್ವಲ್ಪ ಹಣ ಕೊಡಬೇಕು. ನೀವು ಕಂಟ್ರಾಕ್ಟರಿಗೆ ಹಣ ರಿಲೀಸ್ ಮಾಡದೇ ಹೋದರೆ ಅವರು ವರ್ಕ್ ಮಾಡುವುದಿಲ್ಲ. The very contract is a total di tortion of the accouncting systam. ಇದನ್ನು ಏಕೆ ಮಾಡುವುದಕ್ಕೆ ಹೋಗುತ್ತಿದ್ದೀರಿ ? ಹಿಂದಿನ ಸಿಸ್ಟಂ ಏಕೆ ಫಾಲೋ ಮಾಡಬಾರದು ? ಹಿಂದಿನ ಸಿಸ್ಟಂ ಏಕೆ ಬದಲಾವಣೆ ಮಾಡುತ್ತಿದ್ದೀರಿ. ಬಜೆಟ್ ಅನ್ನು ವೋಟು ಮಾಡುತ್ತೇವೆ. ಆಯಾ ಇಲಾಖೆಯ ಕಾರ್ಯಕ್ರಮಗಳನ್ನು ನೋಡಿ ಹಣವನ್ನು ಬಿಡುಗಡೆ ಮಾಡಬೇಕು. ಇದನ್ನು ತಕ್ಷಣ ತಾವು ಸರಿ ಮಾಡಬೇಕು. ಇಂತಹದ್ದನ್ನು ಮಾಡತಕ್ಕ ಅವಶ್ಯಕತೆ ಇಲ್ಲ. ಇದರಿಂದ ಸಾಕಷ್ಟು ರೆಡ್ ಟೇಪಿಸಂ ಆಗುತ್ತದೆ. ನೀವು ಅಧಿಕಾರ ವಿಕೇಂದ್ರೀಕರಣ ಮಾಡುವ ಬದಲು ಸಂಪೂರ್ಣವಾಗಿ ಇದರಿಂದ ವಿಕೇಂದ್ರೀಕರಣ ಆಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಹಿಂದಿನ ಪಂಚಾಯತಿಯವರಿಗೆ ಐದು ಸಾವಿರ ರೂಪಾಯಿ

ಗಳನ್ನು ಖರ್ಚು ಮಾಡಲಿಕ್ಕೆ ಅಧಿಕಾರ ಇತ್ತು. ಈಗ ಎರಡು ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡುವ ಹಾಗೆ ಇಲ್ಲ. ಎರಡು ಸಾವಿರಕ್ಕಿಂತ ಹೆಚ್ಚಿನ ಕೆಲಸಗಳು ಜಿಲ್ಲಾಪರಿಷತ್ತಿಗೆ ಹೋಗಬೇಕು. ಈಗಿನ ಒಂದು ಆಡಳಿತ ಕ್ರಮದ ಪ್ರಕಾರ ಈ ರೀತಿ ಇದೆ. ಒಂದು ಪಂಚಾಯಿತಿಗೆ ೨೦ ಸಾವಿರ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡುತ್ತೀರಿ. ಏಪ್ರಿಲ್‌ನಿಂದ ಇವತ್ತಿನವರೆಗೆ ೨೦ ಸಾವಿರ ರೂಪಾಯಿ ಮಾತ್ರ ರಿಲೀಸ್ ಮಾಡಿದ್ದೀರಿ. ಉದಾಹರಣೆಗೆ, ಮೈಸೂರಿನ ಹತ್ತಿರ ಇರುವ ಹಿನಕಲ್ ಪಂಚಾಯಿತಿಯನ್ನು ತೆಗೆದುಕೊಳ್ಳೋಣ. ಇದರ ಬಗ್ಗೆ ಮಾನ್ಯ ಜಯದೇವರಾಜಅರಸರು ಹೇಳುತ್ತಿದ್ದರು. ಅಲ್ಲಿಗೆ ೨೦ ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಅದರಲ್ಲಿ ಹತ್ತು ಸಾವಿರ ರೂಪಾಯಿ ಸಂಬಳಕ್ಕೇ ಕೊಟ್ಟಿದ್ದಾರೆ. ಇನ್ನು ಹತ್ತು ಸಾವಿರದಲ್ಲಿ ಏನು ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಆಗುತ್ತದೆ ? ಜಿಲ್ಲಾ ಪರಿಷತ್ ಅಧ್ಯಕ್ಷರು, ಮೈಸೂರಿನಲ್ಲಿ, ಐ ಆರ್. ಡಿ. ಪಿ. ಕಾರ್ಯಕ್ರಮದಿಂದ ಸುಮಾರು ೨೨ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ತಮ್ಮ ಫರ್ನೀಚರ್ ತೆಗೆದುಕೊಂಡಿದ್ದಾರೆ. ತಮ್ಮ ಆಫೀಸ್‌ಗೆ ಮನೆಗೆ ಬೇಕಾದ ಪೀಠೋಪಕರಣಗಳನ್ನು ಇದರಿಂದ ತೆಗೆದು ಕೊಂಡಿದ್ದಾರೆ. ಇನ್ನು ಪರ್ ಕ್ಯಾಪಿಟಾ ಇನ್‌ಕಮ್ ಸರಕಾರದವರು ಬಿಡುಗಡೆ ಮಾಡಬೇಕು. ಮೈಸೂರಿನಲ್ಲಿ ಏನು ಮಾಡಿದ್ದಾರೆ ಎಂದರೆ ಬಾಂಡೆಡ್ ಲೇಬರ್ ಹೆಡ್‌ನಲ್ಲಿ ಇದ್ದಂಥ ಹಣವನ್ನು ತೆಗೆದುಕೊಂಡು ಪರ್ ಕ್ಯಾಪಿಟಾ ಇನ್‌ಕಮ್ ಎಂದು ಪಂಚಾಯಿತಿಗೆ ಬಿಡುಗಡೆ ಮಾಡಿದ್ದೀರಿ. ಈ ರೀತಿಯಾಗಿ ಅರ್ಥ ವ್ಯವಸ್ಥೆಯನ್ನು ಪೂರ್ತಿಯಾಗಿ ಅದಲುಬದಲು ಮಾಡಲಾಗಿದೆ ಹಾಗೂ ಅಸ್ತ ವ್ಯಸ್ತ ಮಾಡಲಾಗಿದೆ ಬಡವರ ಕಾರ್ಯಕ್ರಮ ಇರಲಿ, ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಇರಲಿ, ಯಾವುದನ್ನು ಕೂಡಾ ಅನುಷ್ಠಾನ ಮಾಡತಕ್ಕ ಪರಿಸ್ಥಿತಿ ಇವತ್ತು ಇಲ್ಲ. "ಫೈನಾನ್ಸಸ್ ರಿಸೋರ್ಸಸ್ ಕ್ರಂಚ್-ವೈ" ಎಂದು ಹೇಳಿ ಸರಕಾರದವರು ಒಂದು ಪುಸ್ತಕ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ "ಲೆಗಸಿ ಆಫ್ ದಿ ಫಾಸ್ಟ್" ಎಂದು ಒಂದು ವಿಷಯ ಇದೆ. ಹಿಂದಿನ ಸರಕಾರ ಮಾಡಿದ ಕೆಲವು ತೊಂದರೆಗಳಿಂದ ನಮಗೆ ಸಾಕಷ್ಟು ಅನಾನುಕೂಲ ವಾಗಿದೆ, ನಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಿದೆ ಎಂದು ಕಾಣಿಸಿದ್ದೀರಿ. ಇದರಲ್ಲಿ ಒಂದು ವಿಚಾರ ಹೇಳಿದ್ದೀರಿ.

> "The O. D. of Rs. 77.50 crores on 30th June 1982 was therefore converted into one year loan repayable during the months of Jonuary, February and March of 1983."

ಹಿಂದಿನ ಸರಕಾರ ಇರುವಾಗ ೭೭ ಕೋಟಿ ರೂಪಾಯಿಗಳನ್ನು ಗೌರ್ನಮೆಂಟ್ ಆಫ್ ಇಂಡಿಯಾದಿಂದ ಸಾಲ ತೆಗೆದುಕೊಂಡು ಅದನ್ನು ಹಾಗೇ ಬಿಟ್ಟು ಹೋದುದರಿಂದ ಹೆಚ್ಚು ಹೊರೆಯಾಗಿದೆ ಎಂದು ಹೇಳಿದ್ದೀರಿ, ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ಒಂದು ಹೇಳಿಕೆ. ಅಧ್ಯಕ್ಷರೇ, ನಿಜವಾಗಿ ಸರಕಾರಕ್ಕೆ ೭೭ ಕೋಟಿ ರೂಪಾಯಿ ಒಂದು ದೊಡ್ಡ ಭಾರವಾಗಿದ್ದರೆ, ಅಕೌಂಟ್ಸ್‌ನಲ್ಲಿ ಅದು ಖಂಡಿತವಾಗಿ ಕಾಣಬೇಕಾಗಿದೆ. That has to be reflected in your Accounts. 1982-83ರ ಫೈನಾನ್ಸ್ ಅಕೌಂಟ್ಸ್‌ನಲ್ಲಿ ಇದನ್ನು ರಿಫ್ಲೆಕ್ಟ್ ಮಾಡಬಹುದಾಗಿತ್ತು.

The liability acquired by this Government has not been reflected here. ಇದರಲ್ಲಿ ಲೋನ್ಸ್ ಅಂಡ್ ಅಡ್ವಾನ್ಸಸ್ ಫ್ರಮ್ ಗೌರ್ನಮೆಂಟ್ ಆಫ್ ಇಂಡಿಯಾ ಎಂದು ಒಂದು ಸ್ಮಾಲ್ ಚಾಪ್ಟರ್ ಇದೆ. ಇದರಲ್ಲಿ ಏನು ಹೇಳುತ್ತಾರೆ ಎಂದರೆ.

> "Loans and advances from the Government"

> Rs. 27 crores was obtained from the Government of India as ways and means advance in June 1982 and on February 1983 Rs.7 crores and the tentire amount was repaid in March 1983. Apart from other loans obtained from the Government of India amounted to Rs. 148.41crores repayment during the year including Rs.27 crores as above was Rs.94.5 crores.

As ways and Means advance, the amount taken from the Centre was Rs 27 Crores as per this document. This is the usual conversion in any given financial year. ಯಾವ ವರ್ಷದ ಅಕೌಂಟ್ಸ್ ನೋಡಿದರೂ ಇದು ಕಾಣುತ್ತದೆ. ೨೭ ಕೋಟಿ ರೂಪಾಯಿಗಳ ಹಣ ಹಿಂದಿನ ಸರ್ಕಾರದ್ದು. ಆ ಹಣವನ್ನು ನಾವು ಜನವರಿ ಫೆಬ್ರುವರಿ ಮಾರ್ಚ್ ತಿಂಗಳಲ್ಲಿ ಕೊಡಬೇಕೆಂದು ಹೇಳತಕ್ಕಂಥ ಹೇಳಿಕೆ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದುದೆಂದು ಹೇಳುವುದಕ್ಕೆ ಬೇರೆ ಅನುಮಾನ ಬೇಕಾಗಿಲ್ಲ. ಇದರ ಬಗ್ಗೆ ಯಾರು ಬೇಕಾದರೂ ಹೇಳಬಹುದು. Let me compare with the repayment schedule. 1982–83ನೇ ಸಾಲಿನಲ್ಲಿ ರೀಪೇಮೆಂಟ್ ಇನ್ನು ಹೆಚ್ಚು ಮಾಡಬೇಕಾಗಿತ್ತು. ಆದರೆ ಮಾಡಿಲ್ಲ.

SRI A. LAKSHMISAGAR.— The subject under discussion is Supplementary Demands for Grants. ನೀವು ಅರ್ಥ ಮಂತ್ರಿಗಳಾಗಿ ಏನು ಉತ್ತರ ಹೇಳುತ್ತಿದ್ದಿರಿ ಎನ್ನುವುದನ್ನು ಸಹ ನಾನು ನೋಡಿದ್ದೇನೆ. ನಾನು ಯಾವ ಉತ್ತರವನ್ನು ಕೊಡುತ್ತಿದ್ದೇನೆ ಎನ್ನುವುದನ್ನು ಸಹ ತಾವು ನೋಡುತ್ತಿದ್ದೀರಿ, ತಾವು ೧೯೮೨–೮೩ನೇ ಸಾಲಿನ ಅಂಕಿಅಂಶಗಳನ್ನು ತೆಗೆದುಕೊಂಡು ಬಂದು ಇಲ್ಲಿ ಪ್ರಸ್ತಾಪ ಮಾಡಿದರೆ ಉತ್ತರ ಹೇಳುವುದು ಕಷ್ಟ. ಈಗ ಇರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿದರೆ ನಾವು ಉತ್ತರ ಕೊಡಬಹುದು.

I am reading from Kaul and Shakdher. It says :

> "The debate on the supplementary demands for grants is confined to the items constituting the same and no discussion can be raised on the original grants nor on the policy underlying them save in so far as it is necessary to explain or illustrate the particular items under discussion. In respect of schemes which have already been sanctioned in the main budget, no discussion on any question of principle or policy is allowed. As regards demands for which no sanction has been obtained, the question of policy has to be confined to the items on which the vote of the House is sought. General grievances cannot be ventilated on a supplementary grant. A member can only say whether the supplementary demand is necessary or not."

There are two principles here. The discussion on grants for supplementary demands must be confined to the items mentioned in the supplementary demands. General discussion on the policy matters should not be countenanced, because budgetary amounts have been voted by this House. This is only minor adjustments here and there and change of Heading. Some years ago, the Supreme Court ruled that the Heads of accounts cannot be changed without being approved by the Lagislature. It is then onwards, such an exercise has been done, and Heads of Accounts are also being changed. Now the point I am trying to make is, the discussion on supplementary grant for demands is narrowed down. It is confined to the items mentioned in the supplementary demands. It does not lend itself to the discussion on general questions of policy or finances of the State or the manner in which they are being spent elsewhere. My learned friend referred to the working of the

Zilla Parishads and the manner of devolution of funds. Sofar as working of the Zilla Parishads are concerned, this morning, the Hon'ble Minister inch rge of the Rural Development gave a detailed information of the amount that were made available to the Zilla parishads and the responsibility of the Zilla parishads in spending them. All those details have been furnished by the Hon'ble Minister for Rural Developing. Those things cannot find a place. Mr. Moily knows it very well. He knows it, I know. Last year, Mr. Moily alone spoke on this, if I remember correctly. Others don't speak. Not that others should not speak. I am only making a statement of fact. Mr. Moily justified in making all those observations on another occasion but not on the occasion when the demands for supplementary grants are being discussed before this House.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಸ್ಪೆಸಿಫಿಕ್ ಇಷ್ಯೂ ಮೇಲೆ ಮಾತನಾಡುತ್ತಿದ್ದೇನೆ. ಸಪ್ಲಿಮೆಂಟರಿ ಬಜೆಟ್ ಮೇಲೆ ಏಕೆ ಮಾತನಾಡಬಾರದು ? ಇಲ್ಲದಿದ್ದರೆ ನಾವು ಪಾಸ್ ಮಾಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ನೀವು ಪಾಸ್ ಮಾಡದೇ ಇರಬಹುದು. ಅದು ಬೇರೆ ವಿಚಾರ.

ಶ್ರೀ ಎಂ. ವೀರಪ್ಪ ಮೊಯಿಲಿ.— ಬರಗಾಲದ ಬಗ್ಗೆ ಕಿಂಚಿತ್ತೂ ಕಳಕಳಿ ಇಲ್ಲದಿರುವ ಸರ್ಕಾರಕ್ಕೆ ಒಂದು ಪೈಸೆಯನ್ನೂ ಕೂಡ ಕೊಡಬಾರದು. ಒಂದು ವರ್ಷದಲ್ಲಿ ಒಂದು ಸಾರಿ ಮಾತ್ರ ಬಜೆಟ್ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ಸಿಗುವುದು. ನೀವೇ ಸುಂದರವಾಗಿ ಪುಸ್ತಕವನ್ನು ಪ್ರಿಂಟ್ ಮಾಡಿ ನಾವು ಅಸೆಂಬ್ಲಿಗೆ ಬರುವುದರೊಳಗೆ ಕೊಟ್ಟಿದ್ದೀರಿ. ಇವರ ಬಗ್ಗೆ ಚರ್ಚೆ ಮಾಡುವುದು ಬೇಡವೇ ? ಸತ್ಯಕ್ಕೆ ದೂರವಾದಂಥ ವಿಚಾರವನ್ನು ಹೇಳಿರುವುದರಿಂದ, I have to expose it. ೧೯೮೨—೮೩ರಲ್ಲಿ ೩೦ ಫೈನಾನ್ಸ್ ಅಕೌಂಟ್ಸ್‌ನಲ್ಲಿ ಕೂಡ ಓವರ್ ಡ್ರಾಫ್ಟ್ ಇರಲಿಲ್ಲ. As on the closing day, no outstanding, no overdraft at the commencement of the year. ಇಂಥ ಪರಿಸ್ಥಿತಿಯಲ್ಲಿ ರಾಜ್ಯವನ್ನು ನಡೆಸತಕ್ಕ ಶಕ್ತಿ ನಿಮಗೆ ಇದೆಯೋ ? ಚೈತನ್ಯ ಇದೆಯೋ, ದಕ್ಷತೆ ಇದೆಯೋ ಎಂದು ಪ್ರಶ್ನೆಯನ್ನು ಹಾಕಬೇಕಾಗುತ್ತದೆ. Rs. 316.60 Crores were obtained during the year as OD but the entire OD was repaid during that year. The credit is with us. We have done it. In page 2 of the audit report 1983-84 you have ended that year with Rs. 40 Crores overdraft. 1983 year was ended with no overdraft. But you ended the very next year with O. D. of Rs. 40 Crores. ಇದಕ್ಕೆ ನಮ್ಮ ದಕ್ಷತೆ ಎಂದು ಹೇಳಬೇಕೋ ಅಥವಾ ನೀವು ಮಾಡಿದ್ದ ಓವರ್ ಡ್ರಾಫ್ಟ್‌ಗೆ ನಿಮ್ಮ ದಕ್ಷತೆ ಹೆಚ್ಚಿದೆಯೆಂದು ಸರ್ಟಿಫಿಕೇಟ್ ಕೊಡಬೇಕೋ ? ಏಕೆಂದರೆ, ಓವರ್ ಡ್ರಾಫ್ಟ್ ೭೭ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ವೇಸ್ ಅಂಡ್ ಮೀನ್ಸ್‌ನಲ್ಲಿ ಕೊಟ್ಟಿದ್ದೇವೆಂದು ಹೇಳಿರುವುದು ಅಸಮಂಜಸವಾಗಿದೆ. ಸರ್ಕಾರ ನಿರ್ಲಜ್ಜತೆಯಿಂದ ಇದನ್ನು ಹೇಳಿದೆ. We have got to expose to the public, The Public is entitled to know about it. It is on record. 1980–81. page 27, it was mentioned that Ways and means advance of the RBI, repayment is Rs. 409.79 Crores. I have repaid that amount. In 1980–81, loans and advances from Government of India was Rs. 147.50 Crores. That was receipts and the repayment was Rs. 76.01 Crores. The indebtedness increased by Rs. 149.65 Crores in that year. In 1981–82, Ways and means from RBI was Rs. 464.24 Crores : Repayment was Rs 498.07 Crores. Loans and advances from the Government of India was Rs. 134. 30 Crores (Receipts) and

repayment was Rs. 55.27 Crores and the indebtedness increased by Rs. 90.54 Crores. During 1982-83, (please see page 29) loans from Government of India was Rs. 175.41 Crores. Next year, it was Rs. 225 Cro es in 1984-85, It was Rs. 371 Crores i. e., loans from Government of India. In 1985-86 it was Rs. 710 Crores past legacy. ಕರ್ನಾಟಕ ರಾಜ್ಯದ ಜನರ ಮೇಲೆ ಬಂಡೆಗಲ್ಲಿನ ಹಾಗೆ ಸಾಲದ ಹೊರೆಯನ್ನು ಹೊರಿಸುತ್ತಿದ್ದೀರಿ. ಅಸಮಂಜಸವಾಗಿ ಲೆಕ್ಕಗಳನ್ನು ಕೊಟ್ಟು ಜನಗಳಿಗೆ ವಂಚನೆ ಮಾಡತಕ್ಕ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಇದು ನಿಜವಾಗಿ ಸರ್ಕಾರಕ್ಕೆ ಒಪ್ಪತಕ್ಕ ಮತ್ತು ಶೋಭೆ ತರತಕ್ಕ ವಿಚಾರವಲ್ಲ. ಇದರ ಬಗ್ಗೆ ತಾವು ಸುಮ್ಮನೆ ಇರುವುದು ಒಳ್ಳೆಯದು. ಪ್ರತಿ ಬಜೆಟ್ ಅಧಿವೇಶನದಲ್ಲೂ ಹಿಂದಿನ ಸರ್ಕಾರದವರು ಮಾಡಿದ್ದ ೭೭ ಕೋಟಿ ರೂಪಾಯಿ ಸಾಲವನ್ನು ಕೊಡಬೇಕಾಯಿತೆಂದು ಹೇಳುತ್ತಲೇ ಇದ್ದೀರಿ.

೨೭ ಕೋಟಿ ರೂಪಾಯಿಗಳು ಹಿಂದಿನ ಸರಕಾರದವರು ಮಾಡಿದ ಸಾಲವನ್ನು ಹಿಂದಕ್ಕೆ ಕೊಡಬೇಕಾದ ಪರಿಸ್ಥಿತಿ ಬಂತು ಎಂದು ಹೇಳುತ್ತಾ ಇದ್ದಾರೆ. ಆದುದರಿಂದ ಇವೊತ್ತು ಬರಗಾಲದ ಒಂದು ಪಾಸ್ಟ್ ಲೆಗೆಸಿ. ಇಲ್ಲಿ ತಾವು ಬಳಸಿದಂತಹ ಒಂದು ಅಸತ್ಯದ ಜಾಲ ಏನಿದೆ, ಅದರ ವಿಷಯದಲ್ಲಿ ದಯವಿಟ್ಟು ಮಾತು ಬೆಳೆಸಲಿಕ್ಕೆ ಹೋಗಬೇಡಿ. ಅದರ ಬಗ್ಗೆ ವಿವರವಾದಂತಹ ಚರ್ಚೆಯನ್ನು ಮಾಡುವಷ್ಟು ವಿಷಯಗಳು ಮತ್ತು ದಿನವಿಡೀ ಮಾತನಾಡತಕ್ಕಂಥ ಮತ್ತು ಲೋಪದೋಷಗಳನ್ನು ಎತ್ತಿತೋರಿಸತಕ್ಕಂಥ ಅಂಕಿಅಂಶಗಳು ನಮ್ಮಲ್ಲಿ ಇವೆ. ಇವೊತ್ತು ಪೂರಕ ಅಂದಾಜನ್ನು ಏನು ಕೊಟ್ಟಿದ್ದಾರೆ, ಇದು ಜನಗಳ ಪರವಾಗಿ ಇರತಕ್ಕಂಥ ಎಸ್ಟಿಮೇಟ್ ಅಲ್ಲ. ಇದನ್ನು ಕೇವಲ ಆಡಂಬರಕ್ಕಾಗಿ ಮಾಡಿದ್ದಾರೆ. ಇದರಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೆ ಏನೂ ಕೊಟ್ಟಿಲ್ಲ, ಜಿಲ್ಲಾಪರಿಷತ್ತಿನವರಿಗೆ ಏನೂ ಕೊಟ್ಟಿಲ್ಲ, ಮಂಡಲ ಪಂಚಾಯತ್‌ನವರಿಗೆ ಏನನ್ನೂ ಕೊಟ್ಟಿಲ್ಲ, ಒಟ್ಟಿನಲ್ಲಿ ಇವರು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಹದಗೆಡಿಸಿ ಬಿಟ್ಟಿದ್ದಾರೆ. ಸಂಪೂರ್ಣವಾಗಿ ಅಕ್ರಮವಾದಂತಹ ರೀತಿಯಲ್ಲಿ ತಾವು ಸರಕಾರವನ್ನು ನಡೆಸುತ್ತಿದ್ದೀರಿ ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸಲಿದ್ದೇನೆ. ಇವೊತ್ತು ಇವರ ಹತ್ತಿರ ಎಷ್ಟು ಕ್ರೆಡಿಬಿಲಿಟಿ ಇದೆ ಎಂಬುದಕ್ಕೆ ಒಂದು ಉದಾಹರಣೆ ಸಾಕು. ೧೯೮೪-೮೫ ರಲ್ಲಿ ಬಜೆಟ್ ಭಾಷಣದಲ್ಲಿ ಒಂದು ಟ್ಯಾಕ್ಸೇಷನ್ ಪ್ರೊಪೋಸಲ್ ಕೊಟ್ಟರು. ಅದು ಏನೆಂದರೆ, ಒಂದು ಲೀಟರ್ ಶರಾಬಿಗೆ ನಾಲ್ಕು ರೂಪಾಯಿ ಇದ್ದುದನ್ನು ೬ ರೂಪಾಯಿಗೆ ಏರಿಸುತ್ತೇವೆ ಎಂದು ಹೇಳಿದ್ದು ಆದರೆ ಇವರ ಪಾವಿತ್ರ್ಯತೆ ಎಷ್ಟು ಇದೆ ಅಂದರೆ ಇವರು ಒಳವ್ಯವಹಾರ ಮಾಡಿಕೊಂಡು ಪ್ರಪೋಸಲ್‌ನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಇದರಿಂದ ವಿಧಾನಸಭೆಯನ್ನು ಮಾತ್ರವಲ್ಲ. ಇಡೀ ರಾಜ್ಯದ ಜನರನ್ನು ವಂಚಿಸಿದ್ದಾರೆ. ಇವರು ಜನರನ್ನು ಹೇಗೆ ವಂಚಿಸುತ್ತಾರೆ ಎನ್ನುವುದಕ್ಕೆ ಬೇರೆ ಉದಾಹರಣೆಗಳು ಬೇಕಾಗಿಲ್ಲ. ಆಯವ್ಯಯ ಪತ್ರ ೧೯೮೫-೮೬ ರಲ್ಲಿ ಸಾರಾಯಿ ಮೇಲೆ ಅಬಕಾರಿ ಶುಲ್ಕವನ್ನು ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಜನರಿಗೆ ಇದರಿಂದ ಅಬಕಾರಿಯ ತೆರಿಗೆಯಿಂದ ಬರುವ ಹಣದ ಬಗ್ಗೆ ಹೇಳಿದರು. ಹಣ ವಸೂಲು ಮಾಡಿದರು. ಇವೊತ್ತು ನಮ್ಮಲ್ಲಿ ೩೫-೪೦ ಲಕ್ಷ ಲೀಟರ್ ಶರಾಬು ಖರ್ಚು ಆಗುತ್ತಾ ಇದೆ. ಇವೊತ್ತು ಆ ಮೂಲಕ ೧೨ ಕೋಟಿ ರೂಪಾಯಿಗಳನ್ನು ಇವರು ಹೊಡೆದು ಬಿಟ್ಟಿದ್ದಾರೆ. ಆ ತೆರಿಗೆಯನ್ನು ವಸೂಲು ಮಾಡಲಿಲ್ಲ. ಇದನ್ನು ಪರಿಶೀಲನೆ ಮಾಡಿನೋಡಬೇಕು. ಇದಕ್ಕೆ ಒಂದು ಡ್ರಾಫ್ಟ್ ನೋಟಿಫಿಕೇಷನ್ ಕೊಟ್ಟರು. ಹೈಕೋರ್ಟ್‌ನಲ್ಲಿ ಅದಕ್ಕೆ ಸ್ಟೇ ಮಾಡಿದರು. ಆದರೆ ಎಕ್ಸೈಸ್ ಕಮಿಷನರ್‌ರವರು ಹೊಸ ನೋಟಿಫಿಕೇಷನ್ ಇಷ್ಯೂ ಮಾಡಿ ಆ ವರ್ಷವೇ ಇದನ್ನು ಫೈನಲೈಸ್ ಮಾಡಬೇಕಾಗಿತ್ತು. ಆದರೆ ಇವರು ಹಾಗೆ ಮಾಡಲಿಲ್ಲ. ೧೯೮೫-೮೬, ೮೬-೮೭ ಹೋಯಿತು ಇವರು ಶರಾಬಿನ ಬೆಲೆಯನ್ನು ಏರಿಸುತ್ತಾರೆ ಎಂದು ತಿಳಿದುಕೊಂಡು ಗುತ್ತಿಗೆದಾರರು ಬೆಲೆ ಏರಿಸಿದರು ಆದರೆ ಸರಕಾರಕ್ಕೆ ಹಣ ಬರಲಿಲ್ಲ. ಇದರಿಂದ ೧೨ ರಿಂದ ೧೫ ಕೋಟಿ ರೂಪಾಯಿಗಳಷ್ಟು ಹಣ ಒಂದೆ ಒಂದು ಬಾಬಿನಲ್ಲಿ ಹೋಯಿತು. ಇಂತಹ ಸರಕಾರಕ್ಕೆ ಏನು ಹೇಳಬೇಕು ? ತಾವುಗಳು ಹೇಳುತ್ತೀರಿ ಟ್ಯಾಕ್ಸೇಷನ್ ಬಿಲ್‌ನ್ನು ಬೇಗನೇ ಪಾಸ್ ಮಾಡಿಕೊಡಿ ಎಂದು. ಅದರ ಅವಶ್ಯಕತೆ ಇದೆ, ರಾಜ್ಯಕ್ಕೆ ಸಂಪನ್ಮೂಲಗಳು ಬೇಕು ತಡವಾದರೆ ತೊಂದರೆಯಾಗುತ್ತದೆ, ಮತ್ತೊಂದು, ಮಗದೊಂದು ಎಲ್ಲಾ ಹೇಳುತ್ತೀರಿ. ಆದರೆ ಇದರ ಪರಿಣಾಮ ಏನು ? ಏತಕ್ಕಾಗಿ ನಾವು ಬಜೆಟ್ ಡಾಕ್ಯುಮೆಂಟ್‌ಗಳನ್ನು ಗೌರವ ಮಾಡುತ್ತಿರುವುದು ? ಅಬಕಾರಿ ಟ್ಯಾಕ್ಸ್‌ನ್ನು ಹೆಚ್ಚಿಗೆ ಮಾಡುವುದರ ಜೊತೆಗೆ ಇದರ ತೆರಿಗಳನ್ನು ಜಾಸ್ತಿ ಮಾಡಿ ದರೋಡೆ ಮಾಡತಕ್ಕಂಥ ನೀಚ ಪ್ರವೃತ್ತಿಗೆ ಇಳಿದರೆ ಅದಕ್ಕೆ ಏನು ಬೇ

ಬರುತ್ತದ ? ಇವೊತ್ತು ತಾವುಗಳು ೧೦ ದಿವಸಗಳ ಕಾಲ ಸಭೆ ಕರೆದಿದ್ದೀರಿ. ಇದೊಂದು ಜಾಲ: ಏಕೆಂದರೆ ಹೆಚ್ಚು ದಿವಸಗಳ ಕಾಲ ಸಭೆ ಸೇರಿಸಿ ನಮಗೆ ಅವಕಾಶ ಮಾಡಿಕೊಟ್ಟಲ್ಲಿ ಸರಕಾರಕ್ಕೆ ತೊಂದರೆಯಾಗುತ್ತದೆ. ನಮಗೆ ಅವಕಾಶವನ್ನು ಕೊಟ್ಟರೆ ನಾವು ವಿಷಯಗಳ ಮೇಲೆ ಮಾತನಾಡುತ್ತೇವೆ, ಅದರ ಮೂಲಕ ಇವರನ್ನು ಪ್ರಶ್ನಿಸುತ್ತೇವೆ ಎಂಬ ಒಂದು ಯೋಚನೆ ಇವರಿಗೆ ಇದೆ. ಈ ಬಗ್ಗೆ ಯಾವ ರೀತಿಯ ಜಾಲ ಇದರಲ್ಲಿ ಇದೆ ಎಂದು ಬಹುಶಃ ದೊಡ್ಡದಾದ ವಾಲ್ಯೂಮ್‌ನ್ನು ಬರೆಯಬಹುದು ಎಂದು ಕಾಣುತ್ತದೆ. ಇವರು ಸಂಪನ್ಮೂಲಗಳನ್ನು ಯಾವ ರೀತಿಯಲ್ಲಿ ದುರುಪಯೋಗ ಪಡಿಸುತ್ತಿದ್ದಾರೆ ಹಾಗೂ ನಾಶ ಮಾಡುತ್ತಿದ್ದಾರೆ ಎಂಬುದನ್ನು ನೋಡಬೇಕು. ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹಣ ಏಕೆ ಇಲ್ಲ ಎಂದು ಜನ ಕೇಳುತ್ತಾರೆ. ಈವತ್ತು ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ as on to-day, they have not even spent Rs.48 Crores. Volumes and volumes, we can write against this Government. Even that Rs. 6 Crores of margin money and Rs. 2½ Crores, you have not released ಇವತ್ತಿನವರೆಗೂ ಬಿಡುಗಡೆ ಮಾಡಿಲ್ಲ ಎಂದು ನಾಲ್ಕೈದು ದಿನಗಳ ಹಿಂದೆ ತಿಳಿದುಬಂತು. ಆದ್ದರಿಂದ ಇವರು ಎಷ್ಟರಮಟ್ಟಿಗೆ, ವಿಧಾನಸಭೆಯನ್ನು ಹಾಗೂ ಜನತೆಯನ್ನು ವಂಚನೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಚರ್ಚೆ ಆಗಬೇಕು. ನಾವು ಹೇಳಿದೆವು ಇನ್ನೂ ಒಂದು ವಾರ ಸಭೆಯನ್ನು ಮುಂದುವರೆಸಿ ಎಂದು. ಆದರೆ ಅದಕ್ಕೆ ಅವಕಾಶ ಕೊಡುತ್ತಿಲ್ಲ. ನಮಗೆ ಸಾಕಷ್ಟು ಕಾಲ ಕೊಟ್ಟರೆ we must expose this Government. ಸಪ್ಲಿಮೆಂಟರಿ ಬಜೆಟ್ ಏಕೆ ಇಡುತ್ತಾರೆ ? ವಿಧಾನ ಸಭೆಯಲ್ಲಿ ಇದು ಮಂಡನೆಯಾದ ಮೇಲೆ ಇದಕ್ಕೆ ಒಂದು ಪಾವಿತ್ರ್ಯತೆ ಬರುತ್ತದೆ ಹಾಗೂ ಇದಕ್ಕೆ ಬೆಲೆ ಕೊಡಬೇಕಾಗುತ್ತದೆ. ಇದು ಪಬ್ಲಿಕ್ ಡಾಕ್ಯುಮೆಂಟಾಗುತ್ತದೆ. ಸರ್ಕಾರ ಇಟ್ಟಿರುವ ಈ ಡಾಕ್ಯುಮೆಂಟ್ ಸಂಪೂರ್ಣವಾಗಿ ಅಸತ್ಯದಿಂದ ಕೂಡಿದ್ದು ಜನತೆಯನ್ನು ವಂಚನೆ ಮಾಡುವ ರೀತಿಯಲ್ಲಿದ್ದರೆ, it has got to be exposed to the public. ಇವರು ಎಲೆಕ್ಟ್ರಿಸಿಟಿ ರೇಟ್ ಅನ್ನು ರೈಸ್ ಮಾಡಬಹುದು. ಏಕೆಂದರೆ ಇದರಿಂದ ಸುಲಭವಾಗಿ ೧೨ ರಿಂದ ೧೫ ಕೋಟಿಗಳಷ್ಟು ವಸೂಲು ಮಾಡಬಹುದಲ್ಲಾ. ಆದರೆ ಅಬ್ಕಾರಿ ಗುತ್ತಿಗೆದಾರರೊಂದಿಗೆ ಇವರು ಶಾಮೀಲಾಗಿದ್ದಾರೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಅಧ್ಯಕ್ಷರೇ, ಈ ಪೂರಕ ಅಂದಾಜುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇಷ್ಟೊಂದು ಚರ್ಚೆ ಇದಕ್ಕೆ ಅವಶ್ಯಕ ಇದೆಯೋ ಎಂಬುದನ್ನು ಕೇಳಿದರೆ ಇಷ್ಟೊಂದು ಅವಶ್ಯಕತೆ ಇಲ್ಲ. ಆದರೆ ನಾನು ಹೆಚ್ಚು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಚಾರ, ಈ ಪೂರಕ ಅಂದಾಜುಗಳನ್ನು ಅನುಮೋದನೆ ಮಾಡುವ ಕರ್ತವ್ಯ ನನಗಿದೆ. ವರ್ಷಂಪ್ರತಿ ಮಾಡುತ್ತಲೇ ಇದ್ದೇವೆ. ಆದರೆ ಈ ಸರ್ಕಾರವು ಎಷ್ಟೇ ಕೊಡಲಿ ಬಿಡಲಿ, ಈ ಸರ್ಕಾರದ ಕೈಯಲ್ಲಿ ವ್ಯವಹಾರ ನಡೆಸಿಕೊಳ್ಳಲು ಆಗುತ್ತದೆಯೋ ಇಲ್ಲವೇ ಎಂಬ ಪ್ರಶ್ನೆ ನಮ್ಮ ಮುಂದಿದೆ. ನಾನು ಉತ್ತರ ಹೇಳುತ್ತೇನೆ. ಈ ಜನತಾ ಸರ್ಕಾರದ ಕೈಯಲ್ಲಿ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದು ನಾನಂತೂ ಸ್ಪಷ್ಟವಾದ ನಿರ್ಧಾರಕ್ಕೆ ಬಂದಿದ್ದೇನೆ.

ಶ್ರೀ ಎಂ ಶ್ರೀನಿವಾಸ್ (ಉತ್ತರಹಳ್ಳಿ).—ಜನ ೧೯೮೩ ಮತ್ತು ೧೯೮೫ರಲ್ಲಿ ಏನೆಂದು ತೀರ್ಮಾನ ಕೊಟ್ಟಿದ್ದಾರೆ,

ಶ್ರೀ ಬಿ. ಬಸವಲಿಂಗಪ್ಪ.—ನಾನು ಬಹಳ ವರ್ಷಗಳಿಂದ ಸದಸ್ಯನಾಗಿದ್ದೇನೆ: ಇಲ್ಲಿ ಮಂತ್ರಿಯಾಗಿದ್ದೆ. ಆದರೆ ಈ ಜನತಾದವರು ಹೋಗುವ ರೀತಿ ಮಾಡುವ ಕೆಲಸಗಳು, ಅವರು ಹೇಳುವ ಮಾತುಗಳು, ವಾಗ್ದಾನಗಳನ್ನು ನೋಡಿದರೆ ಜನಗಳು ಏನು ನಾಲ್ಕು ವರ್ಷಗಳ ಹಿಂದೆ ಆಸೆ ಆಕಾಂಕ್ಷೆ ಇಟ್ಟುಕೊಂಡಿದ್ದರೋ ಇವತ್ತು ಅವರಿಗೆ ನಿರಾಸೆಯಾಗಿದೆ. ಕಾರಣ ಇವರು ಏನು ಹೇಳುತ್ತಾರೋ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಇದೆ, ಮಂತ್ರಿವರ್ಗ ಇದೆ. ಅವರಲ್ಲಿ ಎಷ್ಟು ಜನತಾದವರೂ ಇರಲಿ, ನಾನು ಅದಕ್ಕೆ ಕೈಹಾಕುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಏನಿದೆ ಇದು ಳದರ್ಜೆ ನೌಕರರಿಗೆ ಏನು ನಿರ್ದೇಶನ ಕೊಡುತ್ತಾರೋ ಅದನ್ನು ಅವರು ನಡೆಸುವುದಕ್ಕೆ ಆಗುವುದಿಲ್ಲ.

೪-೦೦ ಪಿ. ಎಂ.

ನೀವು ಏನು ಹೇಳುತ್ತೀರಿ ಏನು ಹುಕುಂ ಮಾಡುತ್ತೀರಿ, ನೀವು ಏನು ಕಾನೂನುಗಳನ್ನು ಮಾಡುತ್ತೀರಿ, ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ ಅದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಯಾರೇ ಅಧಿಕಾರ ವರ್ಗದವರಿರಲಿ. ಅವರು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರುವುದಿಲ್ಲ. ಇವತ್ತು ತಾವು ಎಲ್ಲೇ ಹೋಗಿ ಆಡಳಿತ ವರ್ಗದ ಎಷ್ಟೇ ಕೆಳಗೆ ಹೋಗಲಿ ಅವರಿಗೆ ಸೂಕ್ತ ನಿರ್ದೇಶನ ಇಲ್ಲವೆಂಬುದು ಗೊತ್ತಾಗುತ್ತದೆ. i.e. suitable directions They may be obeyed or may not be obeyed by the force.

ಸನ್ ಮಾನ್ಯ ರಾಮಕೃಷ್ಣ ಹೆಗಡೆಯವರ ಮಾತಿನಲ್ಲೇ ಹೇಳುವುದಾದರೆ ೨ನೇ ಜುಲೈ ೧೯೮೭ರಂದು ಎಲ್ಲರಿಗೂ ಕಾಗದ ಬರೆದಿದ್ದಾರೆ ಏನೆಂದರೆ "ಇತ್ತೀಚಿನ ಕೆಲವು ತಿಂಗಳುಗಳಿಂದ ಆಡಳಿತದಲ್ಲಿ ಶಿಥಿಲತೆಯ ಬಗ್ಗೆ ಬಹಳ ದೂರುಗಳನ್ನು ಕೇಳುತ್ತಿದ್ದೇನೆ, ಶಿಥಿಲತೆಯ ರೋಗ ಮೇಲು ಹಂತಕ್ಕೆ ಸೀಮಿತವಾಗಿಲ್ಲ. ಎಲ್ಲಾ ಮಟ್ಟದಲ್ಲಿಯೂ ಇದನ್ನು ಕಂಡಿದ್ದೇನೆ. ರಾಜ್ಯ ಸರಕಾರದ ಸಚಿವಾಲಯವೂ ಇದಕ್ಕೆ ಹೊರತಾಗಿಲ್ಲ ಆಯಾಯ ಇಲಾಖೆಯ ಅದಕ್ಷತೆಗೆ ಆದರ ಕಾರ್ಯದರ್ಶಿಗಳೇ ಹೊಣೆಗಾರರು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಈ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಯತ್ನವನ್ನು ಯಾವ ಇಲಾಖೆಯ ಕಾರ್ಯದರ್ಶಿಯೂ ಮಾಡಿಲ್ಲವೆಂದು ನನ್ನ ಅನಿಸಿಕೆ ಕೆಳಗಿನ ಹಂತದಲ್ಲಿ ವಿಶೇಷವಾಗಿ ಕೆಲವೊಂದು ಶಾಖಾಧಿಕಾರಿಗಳು, ಅಧೀನ ಕಾರ್ಯದರ್ಶಿಗಳು ಹಣವಿಲ್ಲದೆ ಕೆಲಸವನ್ನೇ ಮಾಡುವುದಿಲ್ಲ ಎಂಬ ವಿಷಯ ಜನಜನಿತವಾಗಿದೆ ಆದರೂ ಕೂಡ ಅಂತಹವರ ಮೇಲೆ ಕ್ರಮ ಕೈಗೊಳ್ಳುವ ಪ್ರಯತ್ನವನ್ನೇ ಮಾಡದಿರುವುದು ನನಗೆ ವಿವಂಚನೆ ಉಂಟು ಮಾಡಿದೆ. ಯಾವುದೇ ಇಲಾಖೆಯ ಬಗ್ಗೆ ಭ್ರಷ್ಟಾಚಾರದ ಆಪಾದನೆ ಬಂದಲ್ಲಿ ಅಂತಹವರ ಜೊತೆಗೆ ಆಯಾಯ ಇಲಾಖಾ ಕಾರ್ಯದರ್ಶಿಗಳು ಹೊಣೆಗಾರರೆಂದು ತಿಳಿಯಬೇಕಾದ ಸನ್ನಿವೇಶ ಬಂದೊದಗಿದೆ." ನಾನು ವಿರೋಧ ಪಕ್ಷದಲ್ಲಿ ನಿಂತು ಟೀಕೆ ಮಾಡುತ್ತಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಭಾಷೆಯನ್ನೇ ಈ ಸದನದ ಮುಂದಿಟ್ಟಿದ್ದೇನೆ. ಮಾನ್ಯ ಶ್ರೀನಿವಾಸ್‌ರವರೇ ತಾವೂ ಕೇಳಿ ಇವತ್ತು ಭ್ರಷ್ಟಾಚಾರ ಅನ್ನತಕ್ಕಂಥಾದ್ದು ಅದಕ್ಷತೆ ಅನ್ನತಕ್ಕಂಥದ್ದು ಅದಕ್ಷತೆಯ ಆಡಳಿತವೆನ್ನತಕ್ಕಂಥಾದ್ದು ಹರಡಿ ಹೋಗಿದೆ ಮತ್ತೆ ಜನತಾ ಪಕ್ಷ ಜನತಾ ಪಕ್ಷವಾಗಿ ಇರಬೇಕು ಇಲ್ಲದಿದ್ದರೆ ಕೆಳ ದರ್ಜೆ ನೌಕರರು ಇದಕ್ಕೆ ಗಮನ ಕೊಡುವುದಿಲ್ಲ. ನಿರ್ಲಕ್ಷ್ಯರಾಗಿರುತ್ತಾರೆ. ಮಾನ್ಯ ಹೆಗಡೆಯವರ ನಿಲುವು ಏನಿದೆ ಅದು ಜನತಾ ಪಕ್ಷದ ನಿಲುವು ಅಲ್ಲ. ಅದು ಬದಲಾವಣೆಯಾಗಿರತಕ್ಕಂತಹ ನಿಲುವು. ಈ ಪೂರಕ ಅಂದಾಜಿನ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ಈ ವಿಷಯಗಳು ಯಾವ ರೀತಿ ಬರುತ್ತವೆ ಅನ್ನುವ ಪ್ರಶ್ನೆ ಉದ್ಭವಿಸುತ್ತದೆ ಎಂಬುದನ್ನು ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಯಾವಾಗ ಈ ಸರಕಾರ ಅಬಲತೆಯನ್ನು ಪ್ರದರ್ಶನ ಮಾಡುತ್ತದೆ, ಯಾವಾಗ ಅದಕ್ಷತೆಯ ಪ್ರದರ್ಶನ ಮಾಡುತ್ತದೆ ಆಗ ನೌಕರ ವರ್ಗವೂ ಅದೇ ರೀತಿಯಾಗಿ ನಟನೆ ಮಾಡುತ್ತಾರೆ. ಹಿಂದೆ ಕಾಂಗ್ರೆಸ್ ಸರಕಾರ ಇತ್ತು ನಾನೂ ಕೂಡ ಮಂತ್ರಿಯಾಗಿದ್ದೆ ಬಹಳ ವರ್ಷಗಳಿಂದ ಯಾವ ರೀತಿ ನೌಕರ ವರ್ಗದವರು ವರ್ತನೆ ಮಾಡುತ್ತಿದ್ದರು, ಅದೇ ರೀತಿಯಾಗಿ ಯಾವುದೇ ಸರಕಾರ ಬಂದರೂ ಕೂಡ ಅದೇರೀತಿ ವರ್ತನೆ ಮಾಡುತ್ತಿದ್ದಾರೆ. ಯಾರೇ ಬರಲಿ, ನಮಸ್ಕಾರ ಮಾಡುತ್ತಾರೆ ಆಗಲೀ ಎಂದು ಹೇಳುತ್ತಾರೆ ಅದು ಅವರ ಜಾತಿ. ಅವರ ಲಕ್ಷಣಗಳು ಅದೇ ಅವರು ಸಂಬಳಕ್ಕೋಸ್ಕರ ಕೆಲಸ ಮಾಡತಕ್ಕಂಥಹವರು ಸಂಬಳವನ್ನು ಮೇಲಕ್ಕೇರಿಸತಕ್ಕಂತಹ ಹಣಕ್ಕೆ ಕೆಲಸ ಮಾಡತಕ್ಕಂತಹ ವ್ಯಕ್ತಿಗಳು ಅವರು ಅವರಿಗೆ ದೇಶಾಭಿಮಾನವಾಗಲೀ ನಿಷ್ಠೆಯಾಗಲೀ, ಇರಬೇಕೆಂಬ ಪ್ರಶ್ನೆ ಬರುವುದೇ ಇಲ್ಲ ಸರ್ವೇ ಸಾಧಾರಣವಾಗಿ ಎಲ್ಲೋ ಕೆಲವರು ಇರಬಹುದು ಇಲ್ಲವೆಂದು ಹೇಳುವುದಿಲ್ಲ ಸುಮಾರು ಬಹುಭಾಗ ನೌಕರ ವರ್ಗಕ್ಕೆ ಸಂಬಳದ ಮೇಲೆ ಆಸೆ ಇದೆ ಸುಖವಾಗಿ ಜೀವನ ಮಾಡಬೇಕೆಂಬ ಹಿನ್ನೆಲೆ ಇದೆಯೇ ಹೊರತಾಗಿ ಜನಗಳ ಸೇವೆ, ಬಡವರ ಸೇವೆ ಮಾಡಬೇಕು ಯಾರು ನಿರ್ಗತಿಕರಿದ್ದಾರೆ ಅಂತಹವರನ್ನು ಮೇಲಕ್ಕೆತ್ತಲು ಪ್ರಯತ್ನ ಮಾಡಬೇಕೆಂಬ ಯೋಚನೆಯೇ ಇರುವುದಿಲ್ಲ. ಈ ವರ್ಗ ಎಫಿಷಿಯೆನ್ಸಿ, ಮೆರಿಟ್ ಆಧಾರದ ಮೇಲೆ ಅಧಿಕಾರಕ್ಕೆ ಬಂದಿದ್ದಾರೆ, ಷೇಕ್ಸ್‌ಪಿಯರ್‌ನ ಪೊಯಮ್‌ಗಳನ್ನು ಗಟ್ಟಿ ಮಾಡಿ ಪರೀಕ್ಷೆಗಳನ್ನು ಪಾಸ್ ಮಾಡಿಕೊಂಡು ಬಂದಿರುತ್ತಾರೆ,

Dicken son Thomas Jaffersen, ಷೇಕ್ಸ್‌ಪಿಯರ್, ವರ್ಡ್ಸ್‌ವರ್ಥ್ ಇಂಥವರು ಬರೆದಂಥ ಪದ್ಯಗಳನ್ನು ಬಾಯಿಪಾಠ ಮಾಡಿಕೊಂಡು ಪರೀಕ್ಷೆಯನ್ನು ಪಾಸು ಮಾಡಿಕೊಂಡು ಕೆಲಸಕ್ಕೆ ಬಂದು ಸೇರಿರುತ್ತಾರೆ. ಇವರಿಗೆ ಜನಗಳ ಕಳಕಳಿಯಾಗಲೀ ಬಡವರ ಬಗ್ಗೆ ಕಳಕಳಿಯಾಗಲೀ ಇರುವುದಿಲ್ಲ.

ಬಡವರು ಕಷ್ಟಪಡತಕ್ಕಂಥ ಪರಿಸ್ಥಿತಿ ಬಂದಿದೆ. ಅದರಲ್ಲಿ ಈಗ ಅಭಾವಪರಿಸ್ಥಿತಿಯಲ್ಲಿ, ಅಭಾವ ಪೀಡಿತ ಪ್ರದೇಶದಲ್ಲಿ ನಮ್ಮ ಜನಗಳು ಕಷ್ಟಪಡುತ್ತಿದ್ದಾರೆ. ನಾನು ಹೇಳುತ್ತಿದ್ದೇನೆ, ಇವರೇ ಸ್ವತಃ ಹೋಗಿ ಅವರ ಕಷ್ಟವನ್ನು ಅರಿತು ನಿವಾರಣೆ ಮಾಡಲಿಕ್ಕೆ ಯಾರಾದರೂ ಪ್ರಯತ್ನ ಮಾಡಿದ್ದಾರಾ ಸ್ವಾಮಿ ? ಇದನ್ನು ಮಾಡಲಿಕ್ಕೆ ಸರ್ಕಾರ ದಕ್ಷರಿರಬೇಕು. ಸರ್ಕಾರದ ನಿರ್ದೇಶನ ಏನು ಇದೆ, they must be directly involved in the implementation of the welfare measures of the people. How for they are involved ? Whether these directions are being implemented ? Whether the peoples sufferings are aleviated ? ಇದು ಏನಾಗುತ್ತದೆ ? ನಾನು ಹೇಳುತ್ತಿದ್ದೇನೆ, ಈ ಜನತಾ ಸರ್ಕಾರ ಏನು ಇದೆ, ಇವರಿಗೆ ಜನಗಳ ಬಗ್ಗೆ ವ್ಯಾಮೋಹ ಇಲ್ಲ ಅವರ ಪಾರ್ಟಿಯೇ ಇದ್ದುಕೊಂಡು ಹೋಗಲಿ. ನನಗೆ ಅಭ್ಯಂತರವೇನೂ ಇಲ್ಲ. ಎಲ್ಲಿಯವರೆಗೂ ಜನರು ನಮಗೆ ಪುರಸ್ಕಾರ ಮಾಡುವುದಿಲ್ಲವೋ, ಅಲ್ಲಿಯವರೆಗೂ ನಾವು ಇಲ್ಲಿಯೇ ಇರುತ್ತೇವೆ. ನಿಮಗೆ ಒಳ್ಳೆಯ ನಿಲುವು ಇಲ್ಲ ಎಂದು ಹೇಳುವುದಕ್ಕೆ ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. This is what has appeared in the Deccan Herald dated 27th August, 1987. It reads thus :

"Hegde Visualies a new Party"

The Karnataka Chief Minister Ramakrishna Hegde to-day visualised a new political party comprising congressmen believing in Nehruvian values and other "like-minded" groups in the opposition. Asked specially, if he would support a "new Congress", Mr. Hegde said : "What we want is an alternative. How it emerges is not of much consequence" Mr. Hegde observed that it would be a good idea if these Congressmen, together with Mr. V. P. Singh and his followers and other like-minded parties, could come together.

The Chief Minister who has had a series of discussions with Mr. Singh in the past few week on the unfolding political scenaria, said he considered himself to be a Congressman. "I consider myself to be a Congressman".

this shows that he is not a Janatha Party man.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಅವರು......

ಅಧ್ಯಕ್ಷರು.—ಮಾನ್ಯ ದೊಡ್ಡಮೇಟಿಯವರೇ, ತಾವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿಮಿಷ ಮಾನ್ಯ ಬಸವಲಿಂಗಪ್ಪನವರೇ......

ಶ್ರೀ ಬಿ. ಬಸವಲಿಂಗಪ್ಪ.—ನಾನು ಆ ರೀತಿ ಹೇಳಿದ್ದು ನಿಮಗೆ ಹೊಟ್ಟೆ ಉರಿಯೇನು ?

ಶ್ರೀ ಎ ಲಕ್ಷ್ಮೀಸಾಗರ್.—ಸನ್ಮಾನ್ಯ ಬಸವಲಿಂಗಪ್ಪನವರು ತುಂಬಾ ಅನುಭವಸ್ಥರು ರಾಜಕೀಯದಲ್ಲಿ ಪಳಗಿದವರು. ಅವರು ತುಂಬಾ ತಿಳುವಳಿಕಸ್ಥರು. ಅವರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏನನ್ನು ನಾವು ಇಲ್ಲಿ ವಿಚಾರ ಮಾಡುತ್ತಿದ್ದೇವೆ, ನಮ್ಮ ಪಕ್ಷದ ರಾಜಕೀಯದ ಬಗ್ಗೆ, ನಮ್ಮ ಪಕ್ಷದ ಆಡಳಿತದ ಬಗ್ಗೆ, ಇದಕ್ಕಿಂತಲೂ ಹೆಚ್ಚಿನದಾಗಿ ಕಟು ಟೀಕೆ ಮಾಡುವುದಕ್ಕೆ ನಿಮಗೆ ಶಕ್ತಿ ಉಂಟು ಅಧಿಕಾರ ಉಂಟು. ಆದರೆ ನಾವು ಯಾವವಿಷಯವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಅದರ ಬಗ್ಗೆ ನೋಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಲಕ್ಷ್ಮೀಸಾಗರ್‌ರವರು......

ಅಧ್ಯಕ್ಷರು.—ವಿಷಯಾಂತರ ಬೇಡ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ,.. ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದಾರೆಂದರೆ. ಈ ರಾಜ್ಯದ ಮುಖ್ಯಮಂತ್ರಿಗಳು ಈಗ ಇರುವಂಥ ಪಕ್ಷದಲ್ಲಿ ನಂಬಿಕೆ ಕಳೆದುಕೊಂಡು ಬೇರೆ ಪಕ್ಷ ಕಟ್ಟಬೇಕು ಎಂದು ಓಡಾಡುತ್ತಿದ್ದಾರೆ. ಈ ರಾಜ್ಯದ ಬಗ್ಗೆ ಅವರಿಗೆ ಚಿಂತನೆ ಇಲ್ಲ, ವಿಶ್ವಾಸ ಇಲ್ಲ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಾನ್ಯ ಯಡಿಯೂರಪ್ಪನವರಿಗೆ ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. "ನೋಣಕ್ಕೆ ಏಕೆ ಕಬ್ಬಿಣದ ಅಂಗಡಿಯ ವಿಚಾರ'' ನಮ್ಮ ಕೆಲಸ ನಮಗೆ ಗೊತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಅವರು ಇದನ್ನು ಮರೆಯಬಾರದು, ಇಡೀ ದೇಶದಲ್ಲಿ ನಮ್ಮ ಕರ್ನಾಟಕದಲ್ಲಿ ೧೮ ಜನ ಬೆಂಬಲ ಕೊಡದಿದ್ದರೆ, ಅವರು ಇವತ್ತು ಅಡ್ರೆಸ್‌ಗೆ ಇರುತ್ತಿರಲಿಲ್ಲ, ನಾವು ಬೇಷರತ್ ಬೆಂಬಲ ಕೊಟ್ಟಿದ್ದರಿಂದ, ಅವರು ಇವತ್ತು ಉಳಿದುಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬೆಂಬಲ ಕೊಟ್ಟಿದ್ದರಿಂದಲೇ ಇವರು ಇಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಇವರುಗಳಿಗೆ ಜನರ ಬಗ್ಗೆ ಯಾವುದೇ ಚಿಂತನೆ ಇಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ನಮಗೆ ತುಂಬಾ ಸಹಾಯ ಮಾಡಿದ್ದಾರೆ, ನಾನು ಇಲ್ಲಾ ಅಂತ ಹೇಳುವುದಿಲ್ಲ, ಆದರೆ ಅವರು ಹೇಳಿದ ಹಾಗೆ ಕುಣಿಯುವುದಕ್ಕೆ ಸಾಧ್ಯವಿಲ್ಲ. ಅವರು ಬೆಳಿಗ್ಗೆ ಒಂದು ವೇಷ, ಹಾಗೂ ಸಾಯಂಕಾಲ ಒಂದು ವೇಷ ವನ್ನು ಹಾಕುತ್ತಾರೆ. ಆದರೆ ಮಾನ್ಯ ಯಡಿಯೂರಪ್ಪನವರು ಟೀಕೆ ಮಾಡಲಿ ನಾನು ಒಪ್ಪಿಕೊಳ್ಳು ತ್ತೇನೆ. ಆದರೆ ಅವರು ನಮ್ಮ ರಾಜಕೀಯದ ಬಗ್ಗೆ ಮಾತನಾಡುವುದು ಬೇಡವೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಇನ್ನು ಕೆಲವೇ ದಿವಸಗಳಲ್ಲಿ ಅವರ ಬಣ್ಣ, ವೇಷ ಎಲ್ಲಾ ಅವರ ಮುಖ್ಯಮಂತ್ರಿಗಳ ಮೂಲಕವೇ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಮುಖ್ಯ ಮಂತ್ರಿಗಳ ವಿಷಯ ನಮಗೆ ತಿಳಿದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ತಮ್ಮ ಲಾಯರ್‌ಗಿರಿಯನ್ನು ಇಲ್ಲಿ ಪ್ರದರ್ಶನ ಮಾಡುತ್ತಿದ್ದಾರೆ. ನಾನು ಅವರಿಗಿಂತ ಮುಂಚೆ ಲಾಯರ್ ಆಗಿ ಇಲ್ಲಿ ಬಂದವನು ನಾನು ಅವರಿಂದ ಕಲಿಯುವಂತಾದ್ದು ಏನೂ ಇಲ್ಲಾ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ನಿಮಗೆ ಪಾಠವನ್ನು ಕಲಿಸತಕ್ಕಂತಹ ಅವಿವೇಕತನದ ಕೆಲಸಕ್ಕೆ ಹೋಗುವುದಿಲ್ಲ, ಇದಕ್ಕಿಂತ ಅವಿವೇಕತನ ಇನ್ನೊಂದಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಅವರ ತಲೆಯಲ್ಲಿ ಇಂತಕ್ಕಂತಹ ವಿಷಯಗಳನ್ನು ಅವರದೇ ಅಲ್ಲದೆ ಬೇರೆ ಯಾರಿಗೂ ಸಂಬಂಧಪಡದ ರೀತಿಯಲ್ಲಿ ಮಾತನಾಡುತ್ತಾರೆ. ಅವರು ಹೇಳಿದ್ದೇ ಸರಿಯೆಂದು ಹೇಳುತ್ತಿದ್ದಾರೆ,

ಶ್ರೀ ಎ. ಲಕ್ಷ್ಮೀಸಾಗರ್.— ನಾನು ನನ್ನ ತಲೆಯನ್ನು ಬಾಡಿಗೆಗೆ ತಂದುಕೊಂಡಿಲ್ಲ ಅಥವಾ ಎರವಲಿಗೆ ತಂದುಕೊಂಡಿಲ್ಲ. ದೇವರು ಕೊಟ್ಟಂತಹ, ನಮ್ಮ ತಂದೆ ತಾಯಿಗಳು ಕೊಟ್ಟಂತಹ, ತಲೆಯನ್ನು ಆಧರಿಸಿ ನನ್ನ ಬುದ್ಧಿ ಶಕ್ತಿ ಆಧಾರದ ಮೇಲೆ ಮತ್ತು ನನ್ನ ತಿಳುವಳಿಕೆಯ ಆಧಾರದ ಮೇಲೆ ನಾನು ಮಾತನಾಡುತ್ತೇನೆ.

SRI. B. BASAVALINGAPPA,— Sir, I am bringing to the notice of this House as to how they implement their programmes and in that background, I am rising this before this House. I quote from the newspaper : "I consider myself to be a Congressman My back ground is that of the Congress My parents were in Congress. I must hasten to add that I am not a Congress-I man. ಮಾನ್ಯ

ಶ್ರೀ ರಾಮಕೃಷ್ಣ ಹೆಗಡೆಯವರು ನಾನು ಕಾಂಗ್ರೆಸಿನವನು ಎಂದು ಹೇಳಿಕೊಂಡಿದ್ದಾರೆ. ಈ ಒಂದು ಹೇಳಿಕೆಯಿಂದ ರಾಜ್ಯದ ಜನರ ಮೇಲೆ ಯಾವ ರೀತಿಯಾದ ಪರಿಣಾಮ ಆಗಬಹುದು ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. Sir, I am now quoting from "All the Janata Men" written by Sri Janardhan Thakur.

> "The question being asked all-round was "will she (Indira Gandhi) come back? "The fear got blown out of all proportions as new rulers dragged from one blunder to another with little concern for the getting on with the essential tasks they frittered their energies in ridiculous fripperies making, laughing stock of themselves. Even the mighty ones who had come trailing clouds of virtue and administrative acumen showed themselves to be hollow, stuffed men. Yes, it was time to get back to the Typewriter."

Now the position is same here also in Karnataka, as it then existed when Janata Party men frittered and dispersed to their home towns. ಈಗ ನಾನು ಹೇಳುವುದು ಇಷ್ಟೆ, ಸಂಪ್ಲಿಮೆಂಟರಿ ಬಜೆಟ್‌ನಲ್ಲಿ ನೀವು ಯಾವ ಯಾವ ವಿಷಯಗಳ ಮೇಲೆ ಜಾಸ್ತಿ ಹಣವನ್ನು ಕೇಳಿದ್ದೀರಿ, ಆ ವಿಷಯಗಳು ನಿಜವಾಗಿಯೂ ನೀವು ತೆಗೆದು ಕೊಂಡಂತಹ ನಿಲುವಿಗೆ ಅನುಗುಣವಾಗಿದೆಯೋ ಎಂಬುದನ್ನು ತಾವು ನೋಡಬೇಕು ಈ ಸಮಾಜದಲ್ಲಿ ಯಾರು ಹಿಂದುಳಿದ ಜನ ಇದ್ದಾರೆ ಅವರಿಗೆ ಏನು ಜಾಸ್ತಿ ಹಣವನ್ನು ನೀವು ಕೇಳಿದ್ದೀರಿ? ಯಾರು ಷೆಡ್ಯೂಲ್ ಕ್ಯಾಸ್ಟ್ ಜನ ಇದ್ದಾರೆ, ಯಾವ ಜನ ಸಾಯುತ್ತಿದ್ದಾರೆ ಆ ಜನಗಳಿಗೆ ಏನು ಒಂದು ಎಕನಾಮಿಕ್ ಪ್ರೋಗ್ರಾಂ ಅನ್ನು ನೀವು ಹಾಕಿ ಜಾಸ್ತಿ ಹಣವನ್ನು ಕೇಳಿದ್ದೀರಿ? ಆ ಜನಗಳನ್ನು ಉದ್ಧಾರ ಮಾಡುವುದಕ್ಕೆ ನಿಮಗೆ ಏನಾದರೂ ಮನಸ್ಸು ಇದೆಯೋ ? ನಾನು ಇದರ ಅಂಕಿಅಂಶಗಳನ್ನು ಕೇಳಿ ನಿಮ್ಮನ್ನು ಕಷ್ಟಕ್ಕೆ ಒಳಪಡಿಸುವುದಿಲ್ಲ, ಶ್ರೀಮಾನ್ ಮೊಯಿಲಿಯವರು ಈ ಕೆಲಸವನ್ನು ಸರಿಯಾಗಿ ಮಾಡಿದ್ದಾರೆ, ನೀವು ಏನಾದರೂ ಹಣ ಖರ್ಚು ಮಾಡಿ ಕಾರ್ಯಕ್ರಮ ಹಾಕಿದರೆ ಅದು ನ್ಯಾಯ ನಿಷ್ಠೆಯಿಂದ ಆಗಬೇಕು. ಸರ್ಕಾರಿ ನೌಕರರಿಗೆ ಛಾಟಿಯಿಂದ ಹೊಡೆದು ಅವರು ತಮ್ಮ ಕೆಲಸವನ್ನು, ಸರಿಯಾಗಿ ಮಾಡದಿದ್ದರೆ ಅವರಿಗೆ ಸಂಬಳ ಕೊಡುವುದಿಲ್ಲವೆಂಬ ದಿಟ್ಟ ನಿಲುವು ನಿಮ್ಮಲ್ಲಿ ಬರಬೇಕು. ಅವರು ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ನಿಮ್ಮ ಮುಖ್ಯಮಂತ್ರಿಗಳೇ ಹೇಳುತ್ತಿದ್ದಾರೆ. ಈಗ ೫೫೦ ಜನ ರಿಟೈರ್ಡ್ ಆಗಿದ್ದಾರೆ ಆದರೆ ಇಲ್ಲಿ ಸಾವಿರಾರು ಜನ ರಿಟೈರ್ಡ್ ಆಗಬೇಕು. ಶ್ರೀಮತಿ ನಾಗರತ್ನಮ್ಮನವರು ರಾಜಕೀಯವಾಗಿ ಇಂತಹ ವಿಷಯದ ಮೇಲೆ ಒಂದು ಅಭಿಪ್ರಾಯವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಈ ಸರ್ಕಾರಿ ನೌಕರರು ಏನು ಇದ್ದಾರೆ ಅವರಲ್ಲಿ ಅರ್ಧ ಭಾಗದಷ್ಟು ಜನ ರಿಟೈರ್ಡ್ ಆಗಬೇಕು. ಏಕೆಂದರೆ ರಿಟೈರ್ಡ್ ಏಜ್ ೫೫ರಿಂದ ೫೮ಕ್ಕೆ ಜಾಸ್ತಿ ಮಾಡಿದ್ದೀರಿ ಇದು ತಪ್ಪು. ಆದರೆ ಮಾಡಿದ್ದಾಯಿತು. ಆದ್ದರಿಂದ ಈಗ ಈ ಕೊನೆಯ ಅಸ್ತ್ರವನ್ನು ಪ್ರಯೋಗಿಸಿ ನಿಮ್ಮ ಸರ್ಕಾರಕ್ಕೆ ಬೆಲೆ ಬರುವಂತೆ ಮಾಡಬೇಕು, ಇಂತಹ ಕೆಲಸವನ್ನು ಮಾಡಿದರೆ ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಇಂತಹ ಕಷ್ಟಕಾಲದಲ್ಲಿ ಜನರ ಸೇವೆ ಮಾಡಿದರು ಎನ್ನುವ ಒಂದು ಒಳ್ಳೆಯ ಹೆಸರು ಬರುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಶ್ರೀ ಭೂಪತಿಯವರು ಮಾತನಾಡುತ್ತಾರೆ,

ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಅಧ್ಯಕ್ಷರೇ, ಈಗಾಗಲೇ ೬.೨೦ ಆಗಿದೆ. ಶಿಕ್ಷಕರ ವಿಚಾರವನ್ನು ಚರ್ಚೆ ಮಾಡುವುದಕ್ಕೆ ನಿನ್ನೆಯೂ ಆಗಲಿಲ್ಲ ಮತ್ತೆ ಐದು ಗಂಟೆ ಅಡ್ಜರ್ನ್ ಮಾಡುತ್ತೀರಿ ಈ ಶಿಕ್ಷಕರ ಬಗ್ಗೆ ಯಾವಾಗ ಚರ್ಚೆ ಮಾಡುವುದು ?

ಅಧ್ಯಕ್ಷರು.—ಮಾನ್ಯ ಭೂಪತಿಯವರೇ ನೀವು ಮಾತನಾಡಿ.

ಶ್ರೀ ಯು. ಭೂಪತಿ.—ಸನ್ಮಾನ್ಯ ಸಭಾಧ್ಯಕ್ಷರೇ, ಪೂರಕ ಅಂದಾಜುಗಳ ಬೇಡಿಕೆಯ ಈ ಚರ್ಚೆಯಲ್ಲಿ ಕೆಲವು ವಿಚಾರಗಳನ್ನು ಹೇಳಬೇಕೆಂದು.........

ಅಧ್ಯಕ್ಷರು.—ಯಾವ ವಿಷಯದ ಬಗ್ಗೆ ಮಾತನಾಡುತ್ತೀರಿ ?

ಶ್ರೀ ಯು. ಭೂಪತಿ.—ನಾನು ಇನ್ನೂ ವಿಷಯವನ್ನೇ ಪೂರ್ತಿಯಾಗಿ ಹೇಳಿಲ್ಲ, ಯಾವುದರ ಬಗ್ಗೆ ಎಂದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಚರ್ಚೆ ನಡೆಯುತ್ತಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಚರ್ಚೆಮಾಡಿ ಮುಗಿಸಲು ಹೇಗೆ ಸಾಧ್ಯ ? ಇದಕ್ಕಾಗಿ ನಾವು ಏಕೆ ಇಲ್ಲಿ ಸೇರಬೇಕು ? ತಮಗೆ ಗೊತ್ತಿರಬಹುದು, ತಮ್ಮ ಕಛೇರಿಯಲ್ಲಿ ಒಂದು ಚಾರ್ಟ್ ಇದೆ, ಅದರಲ್ಲಿ ಅಸೆಂಬ್ಲಿ ಎಷ್ಟು ದಿನ ಸೇರಿದ್ದೇವೆ, ಇತ್ಯಾದಿ ಎಲ್ಲದರ ಬಗ್ಗೆ ಲೆಕ್ಕ ಪತ್ರ ನೋಡಿ. ನಾವುಗಳು ಇಲ್ಲಿ ಸೇರುವುದು ಕೇವಲ ತಮಾಷೆ ಮಾಡುವುದಕ್ಕಾ ?

ಅಧ್ಯಕ್ಷರು.—೧೦೦ ದಿವಸ ಬೇಕಾದರೂ ಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗೆ ಕೊಡುವುದಾದರೆ ನಮ್ಮ ಬೆಂಬಲ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದ ಸಲ ಹೇಳಿದ್ದಿರಿ. ಮೊನ್ನೆ ನಾವು ಮಾತನಾಡುವುದಕ್ಕೆ ಮುಂದುವರಿಸುತ್ತಿರುವಾಗ ನೀವು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ ಎಂದು ಹೇಳಿದಿರಿ.

ಅಧ್ಯಕ್ಷರು.—ಕಳೆದ ವಾರ ತಾವುಗಳು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದಾಗ ೧೦ ದಿವಸ ನಡೆಸಬೇಕೆಂದು ಹೇಳಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೮-೧೦ ದಿನಗಳಲ್ಲಿ ಎಲ್ಲಾ ವಿಷಯ ಹೇಗೆ ಮುಗಿಸುವುದು ?

ಅಧ್ಯಕ್ಷರು.—ವಿಷಯ ಸಿಗಲಿಲ್ಲ ಎಂದರೆ ಏನು ಮಾಡಲಿಕ್ಕೆ ಆಗುತ್ತದೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇನ್ನೂ ಕಾಂಟ್ರಾಕ್ಟ್ ಟೀಚರ್ಸ್ ಬಗ್ಗೆ ಹಾಗೂ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಇದೆ.

ಶ್ರೀ ಯು. ಭೂಪತಿ.—ಐದು ಗಂಟೆಗೆ ಹೌಸ್ ಮುಗಿಯುತ್ತದೆ.

ಅಧ್ಯಕ್ಷರು.—ನಾನು ಬಿಸಿನೆಸ್ ನಡೆಸುವುದಕ್ಕೆ ಕುಳಿತಿರುವುದು. ೩೩೪ರ ಮೇರೆಗೆ ಚರ್ಚೆ ಆಗಬೇಕು, ಇನ್ನೂ ಬಿಲ್ ಪಾಸ್ ಆಗಬೇಕು.

ಶ್ರೀ ಬಿ. ಲಕ್ಕಪ್ಪ.—ಸಪ್ಲಿಮೆಂಟರಿ ಬಗ್ಗೆ ಸಾಕಷ್ಟು ಹೇಳುವುದು ಇದೆ. ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಮಾತನಾಡಲಿ. ಆಮೇಲೆ ಬೇರೆ ವಿಚಾರ ತೆಗೆದು ಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಸಾರ್, ನಿನ್ನೆಯಿಂದ ಇದು ಪೋಸ್ಟ್‌ಪೋನ್ ಆಗುತ್ತಿದೆ. ಬಹಳ ಮುಖ್ಯವಾದ ವಿಚಾರ ಇದೆ.

ಅಧ್ಯಕ್ಷರು.—ಬಿಲ್ ಪಾಸ್ ಮಾಡಬೇಕೆಂಬುದು ನಮ್ಮ ದೃಷ್ಟಿ.

ಶ್ರೀ ಯು. ಭೂಪತಿ.—ಅಲ್ಲಿ ೮-೧೦ ಸಾವಿರ ಜನ ಶಿಕ್ಷಕರು ಇದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಲವು ದಿನಗಳಿಂದ ಈ ಚರ್ಚೆ ಮುಂದೆ ಹೋಗುತ್ತಿದೆ. ಅವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆದುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಬಿಲ್ ಮೇಲೆ ಮಾತನಾಡಲಿ, ಮಾನ್ಯ ಬಂಗಾರಪ್ಪನವರೇ ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಕಾರ್ಯ ಪಟ್ಟಿಯಲ್ಲಿ ಸೂಚನೆ ಮಾಡಿರತಕ್ಕ ಎಲ್ಲಾ ವಿಷಯಗಳನ್ನು ಪರಿಪೂರ್ಣವಾಗಿ ಮುಗಿಸಬೇಕು ಎಂದು ತೀರ್ಮಾನ ಆಗಿದೆ. ಎಷ್ಟೇ ಹೊತ್ತು ಆಗಲಿ, ಅದನ್ನು ಮುಗಿಸುತ್ತೇವೆ. ಬಿಲ್ ವಿಧಾನ ಪರಿಷತ್ತಿಗೆ ಹೋಗಬೇಕು, ಫೈನಾನ್ಸ್ ಬಿಲ್ ಪಾಸ್ ಆಗಬೇಕು.

ಇದೆಲ್ಲಾ ಪಟ್ಟಿಯಲ್ಲಿರತಕ್ಕದ್ದು. ತಿದ್ದುಪಡಿ ಕೇವಲ ಕೆಲವು ಶಬ್ದಗಳು ಮಾತ್ರ ಬಿಲ್‌ನಲ್ಲಿ ಆಗಬೇಕಾಗಿದೆ. ನೀವು ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದರೂ ಖಂಡಿತ ಮಾಡೋಣ. ಉತ್ತರ ಕೊಡುವುದಕ್ಕೆ ಸಚಿವರೂ ಇದ್ದಾರೆ.

ಶ್ರೀ ಯು. ಭೂಪತಿ.—ನೀವು ೧೨ ಗಂಟೆಯವರೆಗೆ ಕುಳಿತರೆ ನಾವು ಕುಳಿತುಕೊಳ್ಳುವುದಕ್ಕೆ ತಯಾರು ಇದ್ದೇವೆ. ವಿರೋಧ ಪಕ್ಷದ ನಾಯಕಿಯವರು ೫ ಗಂಟೆಯ ಮೇಲೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಎನ್ನುತ್ತಾರೆ. ನೀವು ಹೀಗೆ ಹೇಳಿ ೫ ಗಂಟೆಗೆ ಅಡ್‌ಜರ್ನ್ ಮಾಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ, ರಷೀದ್ ಕೊಲೆ ಕೇಸ್ ಬಗ್ಗೆ ಹಾಗೂ ಇನ್ನೂ ಅನೇಕ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು.—ಈಗ ಮಾನ್ಯ ಭೂಪತಿಯವರು ತಮ್ಮ ಭಾಷಣವನ್ನು ಮುಂದುವರೆಸಬಹುದು.

ಶ್ರೀ ಯು. ಭೂಪತಿ.—ಇದರ ಮೇಲೆ ಇಲ್ಲಿ ವಿವರವಾಗಿ ಚರ್ಚೆ ಮಾಡಬೇಕಾದಂಥ ಅವಶ್ಯಕತೆ ಇಲ್ಲವೆಂಬ ಮಾತನ್ನು ನಾನು ಕೂಡ ಒಪ್ಪಿಕೊಂಡು ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಮೊದಲನೆಯದಾಗಿ, ಕರ್ನಾಟಕ ರಾಜ್ಯದ ಬೀಜ ನಿಗಮವು ಯಾವ ರೀತಿ ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಕಳೆದ ವರ್ಷ ಸರ್ಕಾರ ಇದಕ್ಕೆ ಕೊಟ್ಟ ಹಣದಿಂದ ರಾಜ್ಯದ ರೈತರಿಗೆ ಯಾವ ಅನುಕೂಲವೂ ಆಗಲಿಲ್ಲವೆಂದು ಮಾನ್ಯ ಸದಸ್ಯರುಗಳು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಕೃಷಿ ಸಚಿವರು ಈಗ ತಾನೇ ರಾಜ್ಯದ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಸೂರ್ಯಕಾಂತಿ ಬೀಜವನ್ನು ಪೂರೈಕೆ ಮಾಡುವುದಕ್ಕೆ ಆಗಲಿಲ್ಲವೆಂದು ಹೇಳಿದರು. ಇದೇ ವಿಚಾರದಲ್ಲಿ ನಾನು ಕೇಳಿದ ಪ್ರಶ್ನೆಗೆ ಉತ್ತರ ಬಂದಿದೆ. ಇವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ಈ ಬೀಜ ನಿಗಮದವರು ಏನು ಬೀಜಗಳನ್ನು ಉತ್ಪಾದನೆ ಮಾಡಿದ್ದಾರೆ, ಅದನ್ನು ಈ ರಾಜ್ಯದ ಅರ್ಧ ಭಾಗದ ರೈತರಿಗೂ ಸಹ ಪೂರೈಕೆ ಮಾಡಲು ಸಾಧ್ಯವಾಗುವುದಿಲ್ಲವೆಂದು ನನಗನಿಸುತ್ತದೆ. ಈ ಸೂರ್ಯಕಾಂತಿ ಬೀಜ ಮಹಾರಾಷ್ಟ್ರ, ಆಂಧ್ರ ಮತ್ತು ಗುಜರಾತ್ ರಾಜ್ಯಗಳಲ್ಲಿಯೂ ಸಹ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲವೆಂದು ಈಗತಾನೆ ಮಾನ್ಯ ವ್ಯವಸಾಯ ಮಂತ್ರಿಗಳು ಹೇಳಿದರು.

ಶ್ರೀ ಆರ್ ವಿ. ದೇಶಪಾಂಡೆ.—ರಾಜ್ಯದ ಎಲ್ಲಾ ರೈತರಿಗೂ ನಾವೇ ಬೀಜಗಳನ್ನು ಪೂರೈಸುತ್ತೇವೆಂದು ನಾನು ಹೇಳಲಿಲ್ಲ. ಸೂರ್ಯಕಾಂತಿ ಬೀಜ ಬಿಟ್ಟರೆ ಬೇರೆ ಬೀಜಗಳ ಕೊರತೆ ಇಲ್ಲ ಎಂದು ನಾನು ಹೇಳಿದ್ದು. ಬೀಜಗಳನ್ನು ರಾಷ್ಟ್ರೀಯ ಬೀಜ ನಿಗಮದವರು ಮತ್ತು ಖಾಸಗಿ ಕಂಪನಿಯವರು ಉತ್ಪಾದನೆ ಮಾಡುತ್ತಿರುವುದರ ಜೊತೆಗೆ ನಮ್ಮ ರಾಜ್ಯದ ಬೀಜ ನಿಗಮದವರು ಸಹ ಉತ್ಪಾದನೆ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಪೂರಕ ಅಂದಾಜುಗಳ ಮೇಲಿನ ಚರ್ಚೆಗೆ ಯಾರು ಉತ್ತರ ಕೊಡುತ್ತಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಬೀಜಗಳಿಗೆ ಸಂಬಂಧಪಟ್ಟಂತೆ ಅವರು ಉತ್ತರ ಕೊಡುತ್ತಾರೆ

ಶ್ರೀ ಎಸ್. ಬಂಗಾರಪ್ಪ. ಇಲ್ಲಿ ಈ ಬಗ್ಗೆ ನಾನು ಬೇರೆ ಪದ 'ಬಳಸುವುದಿಲ್ಲ. ಆದರೆ ಈ ಸಂಬಂಧದಲ್ಲಿ ಒಂದು ಮಾತನ್ನು ಹೇಳುವುದಾದರೆ, ಈ ಬೀಜಗಳಿಗೂ ಮತ್ತು ನಿಮಗೂ ಸಂಬಂಧವಿಲ್ಲ ಎಂಬುದು ನನಗೆ ಈ ಹಿಂದೆಯೇ ಗೊತ್ತಾಗಿದೆ.

† ಯು. ಭೂಪತಿ.— ನಮ್ಮಲ್ಲಿರುವಂತಹ ಕರ್ನಾಟಕ ರಾಜ್ಯ ಬೀಜ ನಿಗಮವು ೧೯೮೪-೮೫ನೇ ಸಾಲಿನಲ್ಲಿ ಹೊಂದಿದ್ದ ಅಧಿಕ ದಾಸ್ತಾನಿನಿಂದಾಗಿ ನಿಗಮವು ಒಟ್ಟು ೨೪೧.೮೨ ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸಿತು ಎಂದು ಇಲ್ಲಿ ಹೇಳಿದ್ದೀರಿ. ನಮ್ಮಲ್ಲಿ ಎಣ್ಣೆಕಾಳು ಅಭಿವೃದ್ಧಿ ಮಹಾ ಮಂಡಲ ಎಂದು ಇದೆ. ಆದರೆ ನಮ್ಮ ರಾಜ್ಯದ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಬೀಜ ಪೂರೈಕೆ ಆಗಲಿಲ್ಲ. ಖಾಸಗಿ ವ್ಯಾಪಾರಿಗಳು ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ಬೀಜ ತಂದು ಬ್ಲ್ಯಾಕ್‌ನಲ್ಲಿ ಮಾರಾಟ ಮಾಡಿದ್ದಾರೆ. ಇದು ಎಲ್ಲಿಯವರೆಗೆ ಹೋಗಿತ್ತು ಎಂದರೆ ೮೦೦ ರೂಪಾಯಿಗಳನ್ನು ಕೊಟ್ಟರೂ ಸಹ ಪ್ಯೂಕಾ ಕಂಪನಿಯ ಒಂದು ಪಾಕೆಟ್ ಸಿಗದಂಥ ಪರಿಸ್ಥಿತಿ ಉಂಟಾಗಿತ್ತು. ನಮ್ಮ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಾಜ್ಯದಲ್ಲಿ ಹತ್ತಿ ಬೆಳೆಗೆ ತಗಲಿದ ರೋಗದ ಕಾರಣ ಪಕ್ಕದ ರಾಜ್ಯಗಳಿಂದ ಬೀಜಗಳನ್ನು ತರಿಸ ಬೇಕಾಯಿತು ಎಂದು ಹೇಳಿದ್ದೀರಿ. ನಮ್ಮ ಅಕ್ಕಪಕ್ಕದ ರಾಜ್ಯಗಳಿಂದ ಬರುವ ಬೀಜಗಳಿಗೆ ನಮ್ಮ ರಾಜ್ಯದಲ್ಲಿ ಬೇಡಿಕೆ ಇರುವಾಗ ಕರ್ನಾಟಕ ರಾಜ್ಯ ಬೀಜ ನಿಗಮದವರು ಮತ್ತು ಕರ್ನಾಟಕ ರಾಜ್ಯ ಎಣ್ಣೆಕಾಳು ಅಭಿವೃದ್ಧಿ ಮಹಾಮಂಡಲದವರು ಏತಕ್ಕೆ ಸಾಕಷ್ಟು ಪ್ರಮಾಣದಲ್ಲಿ ಬೀಜಗಳನ್ನು ಉತ್ಪಾದನೆ ಮಾಡಲಿಲ್ಲ ?

ಶ್ರೀ ಆರ್. ವಿ. ದೇಶಪಾಂಡೆ.— ಈಗ ಡಿಸಿಹೆಚ್ 32 ಹತ್ತಿ ಬೀಜದ ಉತ್ಪಾದನೆ ಒಂದನ್ನು ಬಿಟ್ಟು ಬೇರೆ ಬೀಜಗಳನ್ನು ಯಾರು ಬೇಕಾದರೂ ಉತ್ಪಾದನೆ ಮಾಡಬಹುದು. ಅದಕ್ಕೆ ಯಾವುದೇ ತರಹದ ನಿರ್ಬಂಧವಿಲ್ಲ. ಈಗ ಬೇರೆಬೇರೆ ಕಂಪನಿಯವರು ಮತ್ತು ಖಾಸಗಿಯವರು ಬೀಜಗಳನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದನ್ನು ನಿರ್ಬಂಧ ಮಾಡಲು ಬರುವುದಿಲ್ಲ.

ಶ್ರೀ ಯಮ್. ಭೂಪತಿ.— ಹಾಗಿದ್ದರೆ ಈಗ ನೀವು ಬೀಜಗಳ ಉತ್ಪಾದನೆಗೆಂದು ನೀವು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಮತ್ತು ಎಣ್ಣೆಕಾಳು ಅಭಿವೃದ್ಧಿ ಮಹಾಮಂಡಲಕ್ಕೆ ಲಕ್ಷಾಂತರ ರೂಪಾಯಿ ಗಳಷ್ಟು ಹಣವನ್ನು ಏತಕ್ಕೆ ಕೊಡುತ್ತಿದ್ದೀರಿ ?

ಶ್ರೀ ಆರ್. ವಿ ದೇಶಪಾಂಡೆ.— ನಾವು ಸಹ ಉತ್ಪಾದನೆ ಮಾಡಿದ್ದೇವೆ. ಆದರೆ ರಾಜ್ಯದ ಎಲ್ಲ ರೈತರಿಗೂ ನಾವೇ ಒದಗಿಸಲು ಸಾಧ್ಯವಾಗಿಲ್ಲ ಎಂದು ನಾನು ಹೇಳಿದ್ದು

ಶ್ರೀ ಯಮ್. ಭೂಪತಿ.— ನನ್ನ ಕಳಕಳಿ ಇಷ್ಟೆ. ಮುಂದಿನ ವರ್ಷ ಈ ರಾಜ್ಯದಲ್ಲಿ ಯಾವ ಬೆಳೆಗೆ ಬೀಜದ ಬೇಡಿಕೆ ಬರಬಹುದು ಎಂಬುದು ಈಗಿನಿಂದಲೇ ಅಂದಾಜು ಮಾಡಿ, ಮುಂದೆ ಬರಬಹುದಾಂಥ ಬೀಜದ ಬೇಡಿಕೆಗಳನ್ನು ಈಗಿನಿಂದಲೇ ಪೂರೈಕೆ ಮಾಡುವುದಕ್ಕೆ ಸಾಧ್ಯತೆ ಇದೆ. ಏಕೆಂದರೆ ಒಂದು ಸಾರಿ ಹತ್ತಿ ಬೆಳೆ ವಿಫಲವಾಯಿತು ಎಂದು ಗೊತ್ತಾದಮೇಲೆ ನಮ್ಮ ರಾಜ್ಯದಲ್ಲಿ ರೈತರು ಶಿಫ್ಟ್ ಆಗು ತ್ತಾರೆ ಎಂದು ಅಂದಾಜು ಮಾಡುವುದಕ್ಕೆ ಬರುತ್ತದೆ. ಎಣ್ಣೆಕಾಳಿಗೆ ಬೇಡಿಕೆ ಇದೆ ಇದನ್ನು ಬೆಳೆಯ ಬೇಕು ಅಂದರೆ ಪ್ರತಿಯೊಬ್ಬರೂ ಎಣ್ಣೆಕಾಳನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾ ಇರುತ್ತಾರೆ. ನಮ್ಮ ಕರ್ನಾಟಕ ರಾಜ್ಯದ ಬೀಜ ನಿಗಮ, ಎಣ್ಣೆಕಾಳಿನ ಅಭಿವೃದ್ಧಿ ನಿಗಮ, ಅದೇರೀತಿ ರಾಷ್ಟ್ರಮಟ್ಟದ ಬೀಜ ಅಭಿವೃದ್ಧಿ ನಿಗಮ ಮತ್ತು ಸ್ಟೇಟ್ ಅಂಡ್ ಸೆಂಟ್ರಲ್ ಫಾರಂಗಳು ಏನಿವೆ ಇಂತಹ ಫಾರಂಗಳನ್ನು ಉಪಯೋಗಿಸಿಕೊಂಡು ಬೆಳೆಯಿರಿ. ಇದನ್ನು ಕನ್‌ಸ್ಟ್ರಕ್ಟೀವಾಗಿ ಮಾಡುವುದಕ್ಕೆ ಪ್ರಯತ್ನ ಮಾಡ ಬೇಕು. ಬೀಜ ನಿಗಮ ಕೆಲಸ ಮಾಡುತ್ತಿದೆ, ಆದರೆ ಸಮರ್ಪಕವಾಗಿ ಮಾಡುತ್ತಾ ಇಲ್ಲ, ಅದರಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ನೀವು ಕೊಟ್ಟಂಥ ಹಣ ಸೋರಿ ಹೋಗುತ್ತಿದೆ. ಇದನ್ನು ಸರಿ ಮಾಡುವುದಕ್ಕೆ ಪ್ರಯತ್ನಮಾಡಿರಿ ಎಂದು ನಿಮ್ಮ ಗಮನಕ್ಕೆ ತರವುದಕ್ಕೆ ಇಷ್ಟಪಡುತ್ತೇನೆ,

ಇನ್ನು ಯುವಜನ ಸೇವೆಗೆ ಸಂಬಂಧಪಟ್ಟಹಾಗೆ ಇಲ್ಲಿ ೭-೫೦ ಲಕ್ಷ ರೂಪಾಯಿಗಳನ್ನು ಮೈಸೂರಿನ ಚಾಮುಂಡಿ ವಿಹಾರದಲ್ಲಿ ಕ್ರೀಡಾ ಒಕ್ಕೂಟಕ್ಕಾಗಿ ಈಗಾಗಲೇ ಬಿಡುಗಡೆ ಮಾಡಿದೆ ಮತ್ತು ೧೧.೦೧ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿದೆ, ಉಳಿದ ೧೫.೪೯ ಲಕ್ಷ ರೂಪಾಯಿಗಳನ್ನು ಕೊಡ ಬೇಕಾಗಿದೆ ಎಂದು ಹೇಳಿದ್ದಾರೆ. ನಾನು ಕೇಳುವುದಿಷ್ಟೆ. ನೀವು ಈ ಯುವಜನ ಖಾತೆಯಿಂದ ಬರ ತಕ್ಕಂಥ ಹಣವನ್ನು ಬೇರೆ ಬೇರೆ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ತಾಲ್ಲೂಕು ಕೇಂದ್ರಗಳಲ್ಲಿ ಉಪಯೋಗಿಸಿ ಎಲ್ಲೆಲ್ಲಿ ಸ್ಟೇಡಿಯಂಗಳ ಅವಶ್ಯಕತೆ ಇದೆ, ಮತ್ತು ಯುವಜನರಿಗೆ ಬೇಕಾಗಿರುವ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೇ ವಿನಹ ಎಲ್ಲಿಅಭಿವೃದ್ಧಿ ಮಾಡಿಕೊಂಡಿದ್ದಾರೋ ಅಲ್ಲಿಗೇ ಮತ್ತೆ ಹಣವನ್ನು ತೆಗೆದುಕೊಂಡು ಹೋಗಿ ಖರ್ಚು ಮಾಡುವುದು ಸರಿಯಲ್ಲ. ಮೈಸೂರಿಗೆ ಕೊಡಕೂಡದು ಎನ್ನುವ ಪ್ರಶ್ನೆಯಲ್ಲ ಒಂದೇ ಏರಿಯಾಗೆ ಈ ಹಣವನ್ನು ಒದಗಿಸುವುದರಿಂದ ಡೆವಲಪ್‌ಮೆಂಟ್ ಇಂಬ್ಯಾಲೆನ್ಸ್ ಆಗುತ್ತದೆ ಹೈದರಾಬಾದ್ ಕರ್ನಾಟಕವನ್ನು ಮಾತ್ರ ತೆಗೆದ್ದರೆ ಹಿಂದುಳಿದುದು ಎಂದು ಹೇಳುತ್ತೇವೆ, ಇದರ ಬಗ್ಗೆ ಗಮನಹರಿಸುವುದಿಲ್ಲ. ಸಾಮಾನ್ಯವಾಗಿ ಮಂತ್ರಿಗಳಿಗೆ ಬೇರೆ ಕಡೆ ಚಿಂತೆ ಇರುವುದಿಲ್ಲ, ಅವರ ಕ್ಷೇತ್ರದ ಬಗ್ಗೆಯೇ ಅವರಿಗೆ ಚಿಂತೆ, ಅಲ್ಲಿ ಏನು ಡೆವಲಪ್‌ಮೆಂಟ್ ಮಾಡಬೇಕು ಎಂದು. ಆದ್ದರಿಂದ ಈ ಮನೋಭಾವ ಹೋಗಬೇಕು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ, ಹಿಂದುಳಿದಿರತಕ್ಕ ಭಾಗಗಳಲ್ಲಿ ಯುವಜನ ಖಾತೆಯಿಂದ ಬರತಕ್ಕಂಥ ಹಣವನ್ನು ಹಂಚಬೇಕು ಎನ್ನು ವುದು ನನ್ನ ಪ್ರಶ್ನೆ.

ಇದಾದನಂತರ ೦ನೆಯ ಸ್ವಾತಂತ್ರ್ಯ ದಿನಾಚರಣೆ ಮತ್ತು ಪಂಡಿತ್ ಜವಹರಲಾಲ್ ನೆಹರೂರವರ ಜನ್ಮ ಶತಮಾನೋತ್ಸವವನ್ನು ರಾಜ್ಯಾದ್ಯಂತ ಆಚರಿಸುವ ಸಮಯವಾಗಿ ೩೧.೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು, ಜವಹರಲಾಲ್ ನೆಹರೂರವರ ಜನ್ಮ ಶತ ಮಾನೋತ್ಸವವನ್ನು ಆಚರಣೆ ಮಾಡಕೂಡದು ಎಂದು ಹೇಳುವುದಿಲ್ಲ, ಡೆಫನೆಟ್ಟಾಗಿ ಮಾಡ ಬೇಕು. ಆದರೆ ಸರ್ಕಾರ ಮಾಡಿದ್ದು ಏನು ? ಒಂದು ಅಧಿಕೃತವಾಗಿ ಸಭೆ ಕರೆದು ನಾಲ್ಕು ಜನರಿಂದ ಜವಹರಲಾಲ್ ನೆಹರೂರವರ ಬಗ್ಗೆ ಭಾಷಣ ಬಿಗಿದಿದ್ದು. ಇದಕ್ಕೆ ೩೧.೫೦ ಲಕ್ಷ ಖರ್ಚಾಯಿತು. ಆದರೆ ನೆಹರೂರವರ ಐಡಿಯಾಸ್ ಏನಿತ್ತು, ಸಾಮ್ರಾಜ್ಯಶಾಹಿ ವಿರುದ್ಧ ನೀತಿಗಳ ಬಗ್ಗೆ ಏನು ಹೇಳಿದ್ದಾರೆ ಮತ್ತು ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಏನೇನು ಹೇಳಿದ್ದಾರೆ ಅದರ ಬಗ್ಗೆ ಪುಸ್ತಕಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದರೇ, ಇಲ್ಲ. ಒಂದು ಕಡೆ ಮಾನ್ಯ ಮುಖ್ಯ ಮಂತ್ರಿಗಳು ನೆಹರೂರವರ ದಾರಿ ಸರಿ ಎಂದು ಭಾಷಣ ಮಾಡಿದರೆ ಮತ್ತೊಂದುಕಡೆ ಮಾನ್ಯ ಜೆ. ಹೆಚ್. ಪಟೇಲರು ಗಾಂಧಿಯವರ ದಾರಿ ಸರಿ, ಲೋಹಿಯಾ ದಾರಿ ಸರಿ ಎಂದು ಭಾಷಣ ಮಾಡಿದರೆ ನಮಗೆ ಏನು ಅರ್ಥವಾಗುತ್ತಿಲ್ಲ. ಬರೀ ನೆಹರೂ ರವರ ಬಗ್ಗೆ ಭಾಷಣ ಮಾಡಿದರೆ ಪ್ರಯೋಜನವಾಗುವುದಿಲ್ಲ. ನೆಹರೂರವರು ಸಾಮ್ರಾಜ್ಯಶಾಹಿ ವಿರುದ್ಧ ನೀತಿಗಳ ಬಗ್ಗೆ ಹಾಗೂ ಸಮಾಜವಾದಿ ವ್ಯವಸ್ಥೆ ಬಗ್ಗೆ ಹಲವಾರು ನೀತಿಗಳನ್ನು ಹೇಳಿದ್ದಾರೆ ಜೊತೆಗೆ ಪುಸ್ತಕಗಳನ್ನು ಕೂಡ ಬರೆದಿದ್ದಾರೆ.

ಇಂಥ ಸಂದರ್ಭಗಳಲ್ಲಿ ಅವರು ಬರೆದಿರುವಂಥ ಪುಸ್ತಕಗಳನ್ನು, ಕಿರುಹೊತ್ತಿಗೆಗಳನ್ನು ಪ್ರಕಟಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಅದನ್ನು ಬಿಟ್ಟು ಬರೀ ನಾಲ್ಕು ಜನ ಭಾಷಣ ಮಾಡಿ, ೩೦-೩೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇರಲಿಲ್ಲ, ಮತ್ತೆ ಧಾರವಾಡದ ವಿದ್ಯಾವರ್ಧಕ ಸಂಘದ ಶತಮಾನೋತ್ಸವದ ಕಟ್ಟಡಕ್ಕಾಗಿ ೨೫ ಲಕ್ಷ ರೂಪಾಯಿಗಳನ್ನು ಕೊಡಲು ತೀರ್ಮಾನ ಮಾಡಿ, ಮುಂಗಡವಾಗಿ ೫ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ವಿದ್ಯಾವರ್ಧಕ ಸಂಘ ಯಾರದ್ದು ? ಇದಕ್ಕೆ ಹೆಸರಿಲ್ಲವೇ ? ವ್ಯಕ್ತಿಗಳಿಗೋಸ್ಕರ, ಅವರಿಗೆ ಸಹಾಯ ಮಾಡು ವುದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಮಂಜೂರು ಮಾಡಿ, ವಿಧಾನ ಸಭೆಯೊಳಗೆ ಪೂರಕ ಅಂದಾಜುಗಳ ಮೇಲೆ ತಂದು ಚರ್ಚೆಮಾಡುವುದು ಸರಿಯೇ? ಪಟ್ಟಭದ್ರಹಿತಾಸಕ್ತಿಗಳಿಗೆ ಬೆಂಬಲ ಕೊಡುವ ದೃಷ್ಟಿಯಿಂದ ಲಕ್ಷಾಂತರ ರೂಪಾಯಿಗಳನ್ನು ಮಂಜೂರು ಮಾಡಿಕೊಡಿ ಎಂದು ಇದನ್ನು ತಂದಿರುವುದು ಸೂಕ್ತವಲ್ಲ. ಯಾರಿಗೆ ಕೊಟ್ಟಿದ್ದೀರಿ? ಇದರ ಮಾಲೀಕರು ಯಾರು ಎಂಬುದನ್ನು ಹೇಳಬೇಕು. ಈ ಹಣವನ್ನು ಕೊಡಬೇಕಾದ ಅಗತ್ಯ ವಾದರೂ ಏನಿತ್ತು ?

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಐತಿಹಾಸಿಕ ಮಹತ್ವ ಇದೆ. ಕನ್ನಡ ಸಾಹಿತ್ಯ ಪರಿಷತ್ತಿಗಿಂತಲೂ ಹಿಂದಿನಿಂದ ಬೆಳೆದುಕೊಂಡು ಬಂದಂಥ ಸಂಸ್ಥೆ ಇದು. ಸಾಹಿತಿಗಳನ್ನು ನಿರ್ಮಾಣ ಮಾಡುವುದರಲ್ಲಿ, ಸಾಹಿತ್ಯ ಕ್ಷೇತ್ರದೊಳಗೆ ಸಾಕಷ್ಟು ಪ್ರಗತಿಯನ್ನು ಕೂಡ ಮಾಡುತ್ತಾ ಬಂದಿದೆ. ಇದಕ್ಕೆ ಅಧ್ಯಕ್ಷರು ಯಾರೇ ಇರಲಿ, ಕನ್ನಡದ ಹಿತರಕ್ಷಣೆ ಮಾಡಿಕೊಂಡು ಬರುತ್ತಿದೆ. ಇದು ಖಾಸಗೀ ಸಂಸ್ಥೆಯಲ್ಲ.

ಶ್ರೀ ಯು. ಭೂಪತಿ.—ಕರ್ನಾಟಕದಲ್ಲಿ ಸಾಹಿತಿಗಳನ್ನು, ಬುದ್ಧಿಜೀವಿಗಳನ್ನು ಉತ್ಪತ್ತಿ ಮಾಡತಕ್ಕ ಸಂಸ್ಥೆಗಳು ಬಹಳ ಇವೆ. ಯಾವ ಸಂಸ್ಥೆಗೂ ಹಣಕಾಸಿನ ನೆರವು ಕೊಡಬಾರದೆನ್ನುವುದು ನನ್ನ ವಾದ, ಇನ್ನು ನವದೆಹಲಿಯಲ್ಲಿ ವಿಜಯನಗರ ಮಾದರಿಯಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಮಾಡಲು ೨೫ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಇದಕ್ಕೆ ಬೃಂದಾವನ ಸಮಿತಿ ಎಂದು ಕರೆಯಲಾಗಿದೆ. ರಾಷ್ಟ್ರಮಟ್ಟದ ರಾಜಕಾರಣ ಮಾಡುವುದಕ್ಕೆ ತಮಗೆ ಪಬ್ಲಿಸಿಟಿ ಬೇಕಾದುದರಿಂದ ಇದನ್ನು ಮಾಡು ತ್ತಿದ್ದೀರೆಂದು ಹೇಳಬೇಕಾಗಿದೆ. ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇರುವಾಗ ಲಕ್ಷಾಂತರ ರೂಪಾಯಿ ಗಳನ್ನು ಈ ರೀತಿ ಖರ್ಚು ಮಾಡುವಂಥ ಅವಶ್ಯಕತೆ ಇರಲಿಲ್ಲ, ಇಂಥ ಕೆಲಸಗಳಿಗೆ ಸರ್ಕಾರ ಕೈಹಾಕ ಬಾರದು. ಶ್ರೀಲಂಕಾ ತಮಿಳರಿಗೆ ಪುನರ್ ವಸತಿಗಾಗಿ ೫೦ ಲಕ್ಷ ಮಂಜೂರು ಮಾಡಿದ್ದೀರಿ, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಿಗೆ ತಲಾ ೧೫ ಲಕ್ಷದಂತೆ, ೩೦ ಲಕ್ಷ ಸಹಾಯ ಮಾಡಿದ್ದೀರಿ, ನಿಜ ವಾಗಿಯೂ ಮಾನವೀಯ ದೃಷ್ಟಿಯಿಂದ ಇವುಗಳನ್ನು ಸ್ವಾಗತ ಮಾಡಬೇಕಾಗಿದೆ. ಇವುಗಳ ಜೊತೆಗೆ ಆಫ್ರಿಕಾ ದೇಶದಲ್ಲಿ ಕಳೆದ ೨೫ ವರ್ಷಗಳಿಂದ ಜೈಲಿನಲ್ಲಿದ್ದಂಥ ನೆಲ್ಸನ್ ಮಂಡೇಲಾ ಅವರಿಗೆ ಸಹಾಯ ಮಾಡುವಂತೆ ರಾಷ್ಟ್ರ ಮಟ್ಟದಲ್ಲಿ ಕರೆ ಬಂತು. ಇದಕ್ಕೆ ಸರ್ಕಾರದ ಕಾಂಟ್ರಿಬ್ಯೂಷನ್ ಏನು ? ಈ ರೀತಿಯ ಹೋರಾಟಗಳಿಗೆ ನಿಧಿ ಸಂಗ್ರಹಣೆ ಮಾಡಬೇಕಾದ ಅವಶ್ಯಕತೆ ಇದೆ. ಸರ್ಕಾರ ತನ್ನ ಕಾಂಟ್ರಿ

ಬ್ಯೂಷನ್ ಕೊಡುವುದಕ್ಕೆ ಮುಂದೆ ಮನಸ್ಸು ಮಾಡಬೇಕು. ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮತ್ತು ಮೈಸೂರು ನಡುವೆ ರಾಜ ಮಾರ್ಗವನ್ನು ಎಕ್ಸ್‌ಪ್ರೆಸ್ ಮಾರ್ಗವಾಗಿ ಕನ್‌ವರ್ಟ್ ಮಾಡಲಿಕ್ಕೆ ಕನ್‌ಸಲ್ಟೆಂಟ್ ಇಂಟರ್‌ನ್ಯಾಷನಲ್ ಎನ್ನುವಂಥ ಗ್ರೂಪಿಗೆ ಇವರು ಎಷ್ಟು ಕೊಟ್ಟಿದ್ದಾರೆ ಅಂದರೆ ೧೫ ಲಕ್ಷ ರೂಪಾಯಿ ಬರೀ ಇನ್‌ವೆಸ್ಟಿಗೇಷನ್‌ಗೆ ಬೇರೆ ಕೆಲಸ ಏನೂ ಇಲ್ಲ, ಸ್ಥಳ ಪರೀಕ್ಷೆ ಮಾಡಲಿಕ್ಕೆ ೧೫ ಲಕ್ಷ ರೂಪಾಯಿ ನಿಗದಿಮಾಡಿ ೧೦ ಲಕ್ಷ ರೂಪಾಯಿ ಈಗಾಗಲೇ ಕೊಟ್ಟಿದ್ದಾರೆ. ಸ್ವಾಮಿ, ತಮ್ಮ ಮೂಲಕ ಸರ್ಕಾರವನ್ನು ಒಂದು ಪ್ರಶ್ನೆ ಕೇಳುತ್ತೇನೆ, ಬೆಂಗಳೂರಿನಿಂದ ಮೈಸೂರಿಗೆ ಒಂದು ಮಾರ್ಗವನ್ನು ಪರಿವರ್ತನೆ ಮಾಡಲಿಕ್ಕೆ, ಅಲ್ಲಿಯ ಸ್ಥಳ ಪರೀಕ್ಷೆ ಮಾಡಲಿಕ್ಕೆ ಯೋಗ್ಯತೆ ಇರತಕ್ಕ ಇಂಜಿನಿಯರ್‌ಗಳು ನಮ್ಮ ರಾಜ್ಯದಲ್ಲಿರಲಿಲ್ಲವೇ ? ಕೇಂದ್ರದ ಒಂದು ಸಂಸ್ಥೆ ಅದಕ್ಕಾಗಿಯೇ ಇದೆ. ಹೈವೇ ರೋಡ್ ರಿಸರ್ಚ್ ಮಾಡತಕ್ಕ ಸಂಸ್ಥೆ ಇದೆ. ಆ ಸಂಸ್ಥೆಯಿಂದ ಸಹಾಯ ಪಡೆಯಬಹುದಾಗಿತ್ತು. ಅದನ್ನು ಬಿಟ್ಟು ತಮಗೆ ಬೇಕಾದ ಕೆಲವು ಖಾಸಗಿ ವ್ಯಕ್ತಿಗಳಿಗೆ, ಎಲ್ಲಿಂದಲೋ ಬಂದು ಒಂದು ಕಂಪನಿ ಮಾಡಿ ಕೊಂಡಿರತಕ್ಕ ಜನರಿಗೆ ಲಕ್ಷಾಂತರ ರೂಪಾಯಿ ಬರೀ ಮರ್ಜಿಗಾಗಿ ಮಂಜೂರು ಮಾಡಿ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಇಂಜಿನಿಯರ್‌ಗಳ ಜ್ಞಾನವನ್ನು ಬಳಸಿಕೊಳ್ಳಲಾರದಂಥ ಪ್ರದರ್ಶನವನ್ನು ಈ ಸರ್ಕಾರ ಮಾಡುತ್ತಿರುವುದು ವಿಚಿತ್ರ ಅನಿಸುತ್ತದೆ. ಪಟ್ಟಭದ್ರಹಿತಾಸಕ್ತಿಗಳಿಗೆ ಸರ್ಕಾರ ಯಾವರೀತಿ ಸಹಾಯ ಮಾಡುತ್ತಿದೆ ಎಂದರೆ ಇದಕ್ಕಿಂತಲೂ ಒಂದು ಜೀವಂತ ಉದಾಹರಣೆ ಇನ್ನು ಎಲ್ಲಿಯೂ ಸಿಕ್ಕುವುದಿಲ್ಲ. ಇಂಟರ್‌ನ್ಯಾಷನಲ್ ಕನ್ಸಲ್ಟೆಂಟ್ಸ್‌ನ ಅಧ್ಯಕ್ಷರು ಯಾರು ? ಇದರಲ್ಲಿ ಯಾರು ಇದ್ದಾರೆ ಹಾಗೂ ಇದರ ಮಾಲೀಕರು ಯಾರು ಎನ್ನುವುದನ್ನು ತಿಳಿಸಬೇಕು.

ಶ್ರೀ ಎ. ಲಕ್ಷ್ಮಿಸಾಗರ್.—ಡಿಮ್ಯಾಂಡ್ ನಂಬರ್ ಹೇಳಿ.

ಶ್ರೀ ಯು. ಭೂಪತಿ.—ಪೇಜ್ ನಂಬರ್ ೨೨ರಲ್ಲಿ ಇದೆ. ಕನ್‌ಸಲ್ಟೆಂಟ್ ಇಂಟರ್‌ನ್ಯಾಷನಲ್ ಎನ್ನುವ ಒಂದು ಸಂಸ್ಥೆ ಏನಿದೆ, ಈ ಸಂಸ್ಥೆಗೆ ೧೫ ಲಕ್ಷ ರೂಪಾಯಿಗಳನ್ನು ಬರೀ ರಸ್ತೆ ಇನ್‌ವೆಸ್ಟಿಗೇಷನ್‌ಗೆ ಕೊಡಬೇಕೆಂದು ತೀರ್ಮಾನ ಮಾಡಿ ೧೦ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಈ ಸಂಸ್ಥೆ ಯಾರದು, ಇದಕ್ಕೆ ಮಾಲೀಕರು ಯಾರು ? ನಮ್ಮ ಇಂಜಿನಿಯರ್ಸ್ ಬಿಟ್ಟು ಇವರಿಗೆ ಏತಕ್ಕೆ ದುಡ್ಡು ಕೊಡಬೇಕಾಗಿತ್ತು ? ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು. ಇನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್ ಸದಸ್ಯರುಗಳ ಒಂದು ದೊಡ್ಡ ಸಮಾವೇಶ ಬೆಂಗಳೂರಿನಲ್ಲಿ ನಡೆಯಿತು. ಆ ಸಮಾವೇಶಕ್ಕೆ ಭಾಗವಹಿಸಲು ಸಾರಿಗೆಗಾಗಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು, ಖಾಸಗಿ ಮಾಲೀಕರ ಬಸ್ಸುಗಳು ತೆಗೆದುಕೊಂಡಿದ್ದರ ಸಾರಿಗೆ ವೆಚ್ಚ ೬೪.೫೫ ಲಕ್ಷ, ಅಂದರೆ ಹೆಚ್ಚು ಕಡಿಮೆ ೬೫ ಲಕ್ಷ ಎಂದು ಇಟ್ಟುಕೊಳ್ಳೋಣ. ಬರೀ ಸಾರಿಗೆಗೆ ಈ ಸರ್ಕಾರ ಇಷ್ಟೊಂದು ಹಣ ಖರ್ಚು ಮಾಡಿದೆ. ಆ ಸಮಾವೇಶದಿಂದ ಏನು ಆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ತರಹದ ಸಮಾವೇಶಗಳನ್ನು, ಈ ರೀತಿಯ ಜಾತ್ರೆಗಳನ್ನು ಬೆಂಗಳೂರಿನಲ್ಲಿ ಮಾಡುವುದು ಬೇಡ. ಅವರಿಗೆ ನಿಜವಾಗಿ ತಿಳುವಳಿಕೆ ಕೊಡಬೇಕು ಎನ್ನುವ ತಮಗೆ ಇಚ್ಛೆ ಇದ್ದರೆ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ತರಬೇತಿ ಶಿಬಿರ ಏರ್ಪಡಿಸಿ ಸರಿಯಾದಂಥ ತಿಳುವಳಿಕೆಯನ್ನು ಎರಡು ಮೂರು ದಿವಸ ಕೊಟ್ಟರೆ ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಅವರು ಮುಂದೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಸೂಚನೆ ಕೊಟ್ಟು, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಜಿ.ಎಸ್. ಆಚಾರ್‌ರವರು ಸಭೆಯಲ್ಲಿಲ್ಲ ಶ್ರೀ ಯಡಿಯೂರಪ್ಪನವರೇ ನೀವು ಮಾತನಾಡಿ.

† ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ೧೯೮೭-೮೮ನೇ ಸಾಲಿಗೆ ಸೇರಿದಂಥ ಈ ಪೂರಕ ಅಂದಾಜು ಬಗ್ಗೆ ಸಾಕಷ್ಟು ಈಗಾಗಲೇ ಹಿರಿಯ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಈ ವರ್ಷ ೧೯೮೭-೮೮ರಲ್ಲಿ ೨೫ಕೋಟಿ ೧೧ ಲಕ್ಷ ಪೂರಕ ಬೇಡಿಕೆ ಇದ್ದರೆ. ೧೯೮೬-೮೭ರಲ್ಲಿ ೮೫ಕೋಟಿ ೩೨ ಲಕ್ಷ ರೂಪಾಯಿ ಪೂರಕ ಬೇಡಿಕೆ ಇತ್ತು. ಅಂದರೆ ಅದರ ಕಾಲುಭಾಗ ಇಳಿದಿದೆ. ಅಂದರೆ ಈ ರಾಜ್ಯದಲ್ಲಿ ಕಳೆದ ೬-೭ ತಿಂಗಳುಗಳಿಂದ ಯಾವುದೇ ಕೆಲಸಕಾರ್ಯಗಳು ನಡೆಯುತ್ತಿಲ್ಲಎಂಬುದು ಅರ್ಥವಾಗುತ್ತದೆ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಖರ್ಚು ಮಾಡಲಿಕ್ಕೆ ದುಡ್ಡು ಇಲ್ಲದೆ ಇರಬಹುದು. ಅಥವಾ ಕೆಲಸ ಮಾಡಬೇಕು ಎನ್ನುವ ಕಾಳಜಿ ಈ ಸರ್ಕಾರಕ್ಕೆ ಇಲ್ಲದೇ ಇರಬಹುದು. ಒಟ್ಟಿನಲ್ಲಿ ಪ್ರಗತಿ ದೃಷ್ಟಿಯಿಂದ ನೋಡಿದಾಗ, ಅಂಕಿಅಂಶಗಳನ್ನು ನೋಡಿದರೆ ಈ ರಾಜ್ಯದ ಜನತೆಯ ಸ್ಥಿತಿ ಏನು ಎಂದು ಇದರಿಂದ

ಅರ್ಥವಾಗುತ್ತದೆ. ಪೂರಕ ಬೇಡಿಕೆ ಬಗ್ಗೆ ಯಾವ ಯಾವ ಬಾಬಿನಲ್ಲಿ ಏನೇನು ಕೊಟ್ಟಿದ್ದಾರೆ ಏನೇನು ತಪ್ಪು ನೆಪ್ಪು ಆಗಿದೆ ಎನ್ನುವುದರ ಬಗ್ಗೆ ಕೆಲವು ಸದಸ್ಯರು ಹೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ನಾನು ಹೇಳಲಿಕ್ಕೆ ಇಚ್ಛಿಸುವುದಿಲ್ಲ. ಆದರೆ ಈ ಪೂರಕ ಬೇಡಿಕೆಗಳನ್ನು ಇಡುವಂಥ ಸಂದರ್ಭದಲ್ಲಿ, ಬಡ್ಜಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ಒಬ್ಬ ಶಾಸಕನಾಗಿ ನಾವು ಇಲ್ಲಿ ಏನು ಮಾಡಬೇಕು ಎಂದು ನನಗೆ ಇನ್ನೂ ಅರ್ಥವಾಗಿಲ್ಲ. ನಾನು ಶಾಸಕನಾಗಿ ನಾಲ್ಕು ವರ್ಷಗಳಾಯಿತು.

ಏಕೆಂದರೆ ಇವತ್ತು ನಿಮ್ಮ ಅಧಿಕಾರಿಗಳೂ ನೀವೂ ಸೇರಿ ಏನೋ ಒಂದು ಪುಸ್ತಕವನ್ನು ಪ್ರಿಂಟ್ ಮಾಡುತ್ತೀರಿ, ಯಾವ ಯಾವ ಬೇಡಿಕೆಗಳಿಗೆ ಬೇಕೆಂದು ನಿಶ್ಚಯ ಮಾಡುತ್ತೀರಿ. ಆದರೆ ಯಾವುದಾದರೂ ಆಡಳಿತ ಪಕ್ಷದಲ್ಲಿರುವವರು ಅಥವಾ ಈ ಕಡೆಯುವರು ನನ್ನ ಕ್ಷೇತ್ರದಲ್ಲಿ ಇಂಥ ಒಳ್ಳೆಯ ಕೆಲಸವಾಗ ಬೇಕೆಂದು ಹೇಳಿದರೆ ಅದಕ್ಕೆ ಅವಕಾಶ ಮಾಡಿಕೊಟ್ಟು, ಅದಕ್ಕೆ ಬಜೆಟಿನಲ್ಲಿ ಪೂರಕ ಬೇಡಿಕೆಗಳಲ್ಲಿ ಅವಕಾಶ ಮಾಡಿಕೊಡುವ ಪದ್ಧತಿ ನಿಮಗೆ ಏನಾದರೂ ಇದೆಯೆ ? ಬೇರೆ ಯಾವುದರ ಬಗ್ಗೆಯೂ ನಾನು ತಮಗೆ ಉದಾಹರಣೆಯನ್ನು ಕೊಡುವುದಿಲ್ಲ. ಇಲ್ಲಿ ಒಂದು ಮಾತು ಹೇಳುತ್ತೇನೆ. ಕಳೆದ ೫ ೬ ತಿಂಗಳಿಂದ ಯಾರೋ ಕೆಲವು ಮಂತ್ರಿಗಳ ಕ್ಷೇತ್ರವನ್ನು ಬಿಟ್ಟರೆ ಇದ ಒಳ್ಳೆಯ ಕೆಲಸ, ಎಂದು ಒಂದು ಬಜೆಟ್‌ನ್ನು ಮಂಡನೆ ಮಾಡಿದ ಮೇಲೆ ಬೇರೆ ಬೇರೆ ಕ್ಷೇತ್ರದಲ್ಲಿ ಅಲ್ಲಿನ ರೈತರಿಗೆ, ಬಡವರಿಗೆ, ಗ್ರಾಮೀಣ ಜನರಿಗೆ ಏನಾದರೂ ಒಳ್ಳೆಯ ಕೆಲಸ ಮಾಡಿದ್ದಾರೆಂಬ ಅಂಕಿ ಅಂಶಗಳನ್ನು ಕೊಡುವುದಕ್ಕೆ ತಮ್ಮಲ್ಲಿ ಏನಾದರೂ ಒಂದು ಪಟ್ಟಿ ಇದೆಯೋ ? ತಮಗೆ ಒಂದು ತಾಜ ಉದಾಹರಣೆಯನ್ನು ಕೊಡುತ್ತೇನೆ. ನಾನು ಶಾಸಕನಾಗಿ ಕೆಲಸ ಮಾಡುವುದಾದರೂ ಹೇಗೆ ? ಶಿಕಾರಿಪುರ ತಾಲ್ಲೂಕಿನಲ್ಲಿ ಕಳೆದ ೩ ವರ್ಷಗಳ ಹಿಂದೆ ಫಸ್ಟ್ ಗ್ರೇಡ್ ಕಾಲೇಜನ್ನು ಕಟ್ಟಬೇಕೆಂದು ಬಹಳ ಜನಗಳಿಂದ ಭಿಕ್ಷೆ ಬೇಡಿ ೧ ಲಕ್ಷ ರೂಪಾಯಿ ಗಳನ್ನು ಸರ್ಕಾರಕ್ಕೆ ಕಟ್ಟಿದೆ. ೧೯–೨೦ ಎಕರೆ ಜಮೀನನ್ನು ಒಂದು ಪೈಸೆಯ ತೊಂದರೆಯೂ ಇಲ್ಲದಂತೆ ಪುಕ್ಕಟೆಯಾಗಿ ಈ ಕಾಲೇಜಿಗೋಸ್ಕರ ಕೊಡಿಸಿದೆ. ೩ ವರ್ಷ ಕಳೆದು ಹೋಯಿತು. ಬಜೆಟ್‌ನ ಹಣವನ್ನು ತೆಗೆದಿಟ್ಟಿರಾ ? ನಾನು ಬಹಳ ಜನರಿಂದ ಸಂಗ್ರಹ ಮಾಡಿ ಕೊಟ್ಟಂಥ ೧ ಲಕ್ಷ ರೂಪಾಯಿ ಕೂಡ ಪೂರ್ತಿಯಾಗಿ ಇದುವರೆಗೆ ಖರ್ಚಾಗಿಲ್ಲ. ಅಂದಮೇಲೆ ನಾನು ಶಾಸಕನಾಗಿ ಇಲ್ಲಿ ಪೂರಕ ಬೇಡಿಕೆಯ ಬಗ್ಗೆಯಾಗಲಿ, ಬಜೆಟ್ ಬಗ್ಗೆಯಾಗಲಿ ಅಥವಾ ಬೇರೆ ವಿಚಾರಗಳ ಬಗ್ಗೆಯಾಗಲಿ ಏತಕ್ಕಾದರೂ ಚರ್ಚೆ ಮಾಡಬೇಕು ; ನನಗೆ ಇದು ಅರ್ಥವಾಗುತ್ತಿಲ್ಲ. ಸ್ವಾಮಿ, ನಿಮ್ಮ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯತಿಯ ವ್ಯವಸ್ಥೆ ಆಯಿತು. ಬಹುಶಃ ಈ ವ್ಯವಸ್ಥೆ ಆದಮೇಲೆ ಮಂತ್ರಿಗಳನ್ನು ಬಿಟ್ಟು ಶಾಸಕರಾದ ನಾವು ನಾಮಕಾವಸ್ತೆ ಪಟೇಲರಾಗಿದ್ದೇವೆ. ಸ್ವಾಮಿ, ಯಾರಾದರೂ ಬಡವರು ಒಂದು ಒಂದೆರಡು ಜನತಾ ಮನೆಗಳನ್ನು ಕೇಳಿದರೆ, ಸ್ಥಳದಲ್ಲಿ ಆ ಮನೆಗಳನ್ನು ಕೊಡಿಸತಕ್ಕ ಶಕ್ತಿ, ಆ ಅಧಿಕಾರವನ್ನು ನಮಗೆ ಕೊಟ್ಟಿದ್ದೀರಾ ? ಇವತ್ತಿನ ದಿವಸ ಒಂದು ರಸ್ತೆ ಆಗಬೇಕಾದರೆ, ಒಂದು ಜನತಾ ಮನೆ ಆಗಬೇಕಾದರೆ ನಾನು ಆ ಮಂಡಲ ಪಂಚಾಯಿತಿಯ ಪ್ರಧಾನ ಯಾರಿದ್ದಾನೆ ಅವನನ್ನು ನಾನು ಹುಡುಕಿಕೊಂಡು ಹೋಗಬೇಕೇ ? ನಾನು ಹೋಗಬಾರದೆಂದು ಹೇಳುತ್ತಿಲ್ಲ. ಶಾಸಕನಾಗಿ ನಾನು ಏನು ಮಾಡಬೇಕು ? ನನ್ನ ಕೆಲಸವಾದರೂ ಏನು ? ಈ ವ್ಯವಸ್ಥೆ ಏತಕ್ಕೆ ? ಕೋಟ್ಯಂತರ ರೂಪಾಯಿ ಖರ್ಚುಮಾಡತಕ್ಕ ಈ ಶಾಸನ ಸಭೆಯ ವ್ಯವಸ್ಥೆಯ ಬದಲು ನಿಮ್ಮ ಮುಖ್ಯ ಮಂತ್ರಿಗಳು ಮೇಲ್ಮನೆಯ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಬದಲಾಗಿ ಈ ವಿಧಾನ ಸಭೆಯ ಸದಸ್ಯರ ಸಂಖ್ಯೆಯನ್ನು ೫೦ ಕ್ಕೋ ೬೦ ಕ್ಕೋ ಇಳಿಸಿ, ಆ ಮನೆಯ ಸದಸ್ಯರ ಸಂಖ್ಯೆಯನ್ನು ೨೫ ಕ್ಕೋ ೩೦ ಕ್ಕೋ ಇಳಿಸಿದ್ದರೆ ಸಾಕಾಗಿತ್ತು. ಇಲ್ಲಿ ಏನಾದರೂ ಈ ರಾಜ್ಯದ ಜನತೆಯ ಬಗ್ಗೆ ಸರಿಯಾದ ರೀತಿಯಲ್ಲಿ ಪ್ರತಿಯೊಂದು ಕ್ಷೇತ್ರದ ಬಗ್ಗೆ ಚರ್ಚೆಯಾಗಬೇಕು, ಶಾಸಕನಾಗಿ ನಾನು ಹೇಳುವಂಥ ಕೆಲಸ ಆಗಬೇಕೆಂಬ ಒಂದು ವ್ಯವಸ್ಥೆ ಇದ್ದಿದ್ದರೆ ಮಾತ್ರ ಪ್ರಯೋಜನ ವಾಗುತ್ತಿತ್ತು. ಆದರೆ ಇವತ್ತು ಶಾಸಕರಾದ ನಮಗೆ ಏನು ಕೆಲಸ ಇದೆಯೆಂಬುದನ್ನು ಹೇಳಿ. ಅಲ್ಲಿ ಮಾಡಿದಂತ ಕಾಲೇಜು ೩ ವರ್ಷವಾದರೂ ಪ್ರಾರಂಭ ಆಗಿಲ್ಲ. ಜಮೀನನ್ನು ಕೊಟ್ಟಿದ್ದೇವೆ, ಹಣವನ್ನು ಕೊಟ್ಟಿದ್ದೇವೆ, ಸರ್ಕಾರದಿಂದ ಹಣ ಬಿಡುಗಡೆ ಆಯಿತು, ನಿಮ್ಮ ಅಧಿಕಾರಿಗಳು ಆ ಹಣವನ್ನು ಖರ್ಚುಮಾಡಲಿಲ್ಲ. ಫೌಂಡೇಷನ್‌ನಿಂದ ಮೇಲಕ್ಕೆ ಕಟ್ಟಡ ಇದುವರೆಗೂ ಬಂದಿಲ್ಲ. ನಾನು ಶಾಸಕನಾಗಿ ಬಂದಮೇಲೆ ೪ ವರ್ಷಗಳ ಹಿಂದೆ ೪ ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಚಿಲ್ಲಿಂಗ್ ಪ್ಲಾಂಟ್‌ನ್ನು ಕಟ್ಟಿದ್ದಾಗಿದೆ. ಹಣವನ್ನು ಕೊಟ್ಟು ಮೆಷಿನ್‌ನನ್ನು ತಂದಿಟ್ಟುಕೊಂಡು ಆ ಚಿಲ್ಲಿಂಗ್ ಪ್ಲಾಂಟ್‌ನ್ನು ಇದುವರೆಗೂ ಉಪಯೋಗ ಮಾಡಿಕೊಂಡಿಲ್ಲ. ಅಲ್ಲಿಯ ಬಡವರಿಗೆ ಐ. ಆರ್. ಡಿ. ಪಿ. ಅಂತ್ಯೋದಯದಲ್ಲಿ ಎಮ್ಮೆಗಳನ್ನು ಬಡವರಿಗೆ ಏನು ಮಾಡಿಕೊಟ್ಟಿದ್ದೀರಿ ಅವರಿಂದ

ಹಾಲನ್ನು ಕಲೆಕ್ಟ್ ಮಾಡಿ ಆ ಚಿಲ್ಲಿಂಗ್ ಪ್ಲಾಂಟ್‌ನ್ನು ಉಪಯೋಗವನ್ನು ಇದುವರೆಗೂ ಮಾಡಿಕೊಡುವುದಕ್ಕೆ ನಿಮ್ಮಿಂದಾಗಿಲ್ಲ ಜನರು ಸಾಯುತ್ತಿದ್ದಾರೆ, ಸ್ವಾಮಿ, ತಮಗೆ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಇದೆ. ಕಟ್ಟಡದ ಕೆಲಸ ಪ್ರಾರಂಭವಾಗಿ ೫ ವರ್ಷವಾದರೂ ಅದು ಇನ್ನೂ ಮುಗಿದಿಲ್ಲ. ಜನರೂ, ರೋಗಿಗಳೂ ಆಸ್ಪತ್ರೆಯಲ್ಲಿ ಜಾಗವಿಲ್ಲದೆ ಫುಟ್‌ಪಾತ್‌ಮೇಲೆ ಮಲಗಿಕೊಳ್ಳುತ್ತಿದ್ದಾರೆ. ಇದುವರೆಗೂ ಕಟ್ಟಡ ಪೂರ್ತಿ ಆಗಿಲ್ಲ. ಹೀಗಾದರೆ ಇಲ್ಲಿ ಈ ಪೂರಕ ಬೇಡಿಕೆಗಳನ್ನು ಏನು ಚರ್ಚೆ ಮಾಡುವುದು ? ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಒಮ್ಮೆ ಹೇಳಿದರು. ಈಗ ಕೇವಲ ಟೀಕೆ ಮಾಡುವುದಕ್ಕೋಸ್ಕರ ಕೆಲವು ವಿಷಯಗಳನ್ನು ಹೇಳತಕ್ಕ ಅಗತ್ಯವಿಲ್ಲ. ಸ್ವಾಮಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಚುನಾವಣೆಯಾದಮೇಲೆ ಆ ಸದಸ್ಯರನ್ನು ಬೆಂಗಳೂರಿಗೆ ಕರೆದುಕೊಂಡು ಬರುವುದಕ್ಕೆ ಸಾರಿಗೆ ವ್ಯವಸ್ಥೆಗೋಸ್ಕರ ೬೫ ಲಕ್ಷ ರೂಪಾಯಿಗಳನ್ನು ನೀವು ಖರ್ಚುಮಾಡಿರತಕ್ಕದ್ದನ್ನು ಮಾನ್ಯ ಸದಸ್ಯರಾದ ಭೂಪತಿಯವರು ಹೇಳಿದ್ದಾರೆ ಸ್ವಾಮಿ ನಾನು ತಮ್ಮನ್ನು ಕೇಳುತ್ತೇನೆ, ಆ ಸಮ್ಮೇಳನದ ಅಗತ್ಯವಾದರೂ ಏನಿತ್ತು? ಯಾರ ದುಡ್ಡಿನಲ್ಲಿ, ಯಾರ ಪ್ರಚಾರಕ್ಕೆ ಇದನ್ನು ಮಾಡಿದಿರಿ ಎಂಬುದನ್ನು ತಾವು ಹೇಳಬೇಕು. ನಾವು ಎಲ್ಲರನ್ನೂ ಕರೆದಿದ್ದೆವು ಎಂದು ತಾವು ಹೇಳಬಹುದು. ಆದರೆ ಇಂಥ ಬಡ ರಾಜ್ಯಕ್ಕೆ ರಾಜ್ಯದಲ್ಲಿ ಬರಗಾಲ ತಾಂಡವಾಡುತ್ತಿರುವ ಸಂದರ್ಭದಲ್ಲಿ ಇಂಥ ಮೋಜಿನ ಕಾರ್ಯಕ್ರಮದ ಅಗತ್ಯ ಇತ್ತೇ ? ಅಲ್ಲಿ ನೀವು ಒಂದು ದಿವಸದಲ್ಲಿ ಮಾಡಿದ್ದಾದರೂ ಏನು? ಬಂದಿದ್ದ ಜನರಿಗೆ ದಿನ ಪೂರ್ತಿ ಊಟ ಸಿಕ್ಕಲಿಲ್ಲ. ಸುಮಾರು ೬೫ ಲಕ್ಷ ರೂಪಾಯಿ ಕೇವಲ ಸಾರಿಗೆಗೋಸ್ಕರ ಖರ್ಚುಮಾಡಿದಿರಿ ಎಂದರೆ ಇನ್ನು ಬೇರೆ ಬೇರೆ ಬಾಬುಗಳಿಗೆ ಎಷ್ಟೆಷ್ಟು ಖರ್ಚು ಮಾಡಿದಿರಿ ಎಂಬುದನ್ನು ತಾವು ಹೇಳಬೇಕು. ಇದಕ್ಕೆ ಬದಲಾಗಿ ಜಿಲ್ಲೆಗಳಲ್ಲಿ ಅಥವಾ ಶಾಸಕರ ಕ್ಷೇತ್ರಗಳಲ್ಲಿ ಜನರಿಗೆ ಅನುಕೂಲವಾದ ಕೆಲಸಗಳನ್ನು ಮಾಡಬಹುದಿತ್ತು. ನಿಮ್ಮ ಮುಖ್ಯ ಮಂತ್ರಿಗಳು ಹೇಳಿದರು, ಈ ಒಂದು ಮಹಾ ಸಮ್ಮೇಳನದಲ್ಲಿ ೬೨ ಸಾವಿರ ಜನ ಸೇರಿದ್ದರು, ಅವರ ಕಣ್ಣಿನಲ್ಲಿ ಬೆಳಕನ್ನು ಕಂಡೆ. ಅವರ ಮುಖದಲ್ಲಿ ಹೊಳಪನ್ನು ಕಂಡೆ ಅಂತ. ಸ್ವಾಮಿ, ನಾನು ಕೇಳುತ್ತೇನೆ, ನಾವು ಶಾಸಕರಾಗಿ ಬಂದಮೇಲೆ ಚುನಾವಣೆಯಲ್ಲಿ ಗೆದ್ದುಬಂದಮೇಲೆ ನಮ್ಮ ಕಣ್ಣಲ್ಲಿ ಬೆಳಕು ಬಂದಿಲ್ಲವೇ ? ಮುಖದಲ್ಲಿ ಹೊಳಪು ಬಂದಿಲ್ಲವೇ ?—

ಅಧ್ಯಕ್ಷರು.—ನೀವು ಈ ಕಡೆ ನೋಡಿ...

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ಮುಖದಲ್ಲಿ ಬಣ್ಣ ಬಂದಿಲ್ಲವೇ ? ನಾವು ಶಾಸಕರಾಗಿ ಬಂದಮೇಲೆ ಆರಾಮವಾಗಿಲ್ಲವೇ ? ಸ್ವಾಮಿ, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳು ಕೆಂಪಗಾದರು, ಕಣ್ಣಲ್ಲಿ ಬೆಳಕು ಬಂತು, ಹೊಳಪನ್ನು ಕಂಡೇ ಕಂಡರು; ಆದರೆ ಆ ಬಡವನ ಕಣ್ಣಲ್ಲಿ ಹೊಳಪು ಕಾಣತಕ್ಕ ಕಾರ್ಯಕ್ರಮಗಳು ಏನೇನಾಗಬೇಕೆಂದು ನಾವು ಜನರ ಪರವಾಗಿ ಹೇಳುತ್ತೇವೆ ಅವುಗಳನ್ನು ಮಾಡುವುದಕ್ಕೆ ನೀವು ತಯಾರಿಲ್ಲ ಏಕೆ ಅದರ ಅಗತ್ಯ ಇಲ್ಲವೇ ? ಇಂಥ ಅಗತ್ಯವಿಲ್ಲದ ಕಾರ್ಯಕ್ರಮಗಳು ಏಕೆ ? ಇದಕ್ಕಾಗಿಯೇ ನಾನು ತಮಗೆ ಒಂದು ತಾಜಾ ಉದಾಹರಣೆಯನ್ನು ಕೊಟ್ಟಿದ್ದು ತಾವು ನನ್ನ ಊರಿನ ಆಸ್ಪತ್ರೆ, ಚಿಲ್ಲಿಂಗ್ ಪ್ಲಾಂಟ್, ಫಸ್ಟ್ ಗ್ರೇಡ್ ಕಾಲೇಜ್ ಇವುಗಳನ್ನೆಲ್ಲಾ ಮೊದಲು ನೋಡಿಕೊಂಡು ಬನ್ನಿ ಆಮೇಲೆ ಈ ಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಮಾಡೋಣ. ಈ ಪೂರಕ ಬೇಡಿಕೆಯ ಬಗ್ಗೆ ನಾನು ಹುಡುಕುತ್ತಿದ್ದೇನೆ. ಈ ಗಳಿಗೆ ಶಿಕ್ಷಕರು ಸುಮಾರು ೧೦ ಸಾವಿರ ಚಿಲ್ಲರೆ ಜನ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರ ಮೂಲ ವೇತನಕ್ಕಿಂತ ೧೦ ರೂಪಾಯಿ ಕಡಿಮೆ ಸಂಬಳ ಕೊಡಬೇಕಾಗಿತ್ತು ೧-೧-೧೯೮೭ ರಿಂದ ಳನೇ ವೇತನ ಆಯೋಗದ ಶಿಫಾರಸಿನ ಪ್ರಕಾರ ಎಲ್ಲ ನೌಕರರಿಗೂ ನೀವು ಹೊಸ ಸಂಬಳ ಶ್ರೇಣಿಯನ್ನು ಕೊಟ್ಟಮೇಲೆ ಹಿಂದೆ ಇದ್ದ ಪೇಸ್ಕೇಲ್‌ನಲ್ಲಿ ಮೂಲ ವೇತನದಲ್ಲಿ ೧೦ ರೂ. ಕಡಿಮೆ ಮಾಡಿ ಕೊಡಬಹುದಿತ್ತು. ೧೦ ಸಾವಿರ ತರುಣ ವಿದ್ಯಾವಂತ ಜನ ತಮ್ಮ ಮುಂದಿನ ಭವಿಷ್ಯದ ಚಿಂತನೆಯನ್ನು ಮಾಡುತ್ತಿದ್ದಾರೆ. ಮುಂದಿನ ಭಾವೀ ಪ್ರಜೆಗಳನ್ನು ನಿರ್ಮಾಣ ಮಾಡತಕ್ಕ ಪ್ರಾಮಾಣಿಕ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಈ ಸದನದಲ್ಲಿ ಕಾರ್ಯಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ, ಈ ಸರ್ಕಾರ ಬದುಕಿದ್ದಿದ್ದರೆ, ಅವರು ಬಹಿಷ್ಕಾರ ಮಾಡಬೇಕಾಗಿತ್ತೇ ?

ಇದಕ್ಕೆ ಒಂದು ಸತ್ಯಾಗ್ರಹ ಮಾಡಬೇಕಾದ ಅಗತ್ಯ ಇತ್ತೇ ಎಂದು ನಾನು ಕೇಳುತ್ತಿದ್ದೇನೆ. ಈ ಸರ್ಕಾರ ಯಾವರೀತಿ ನಡೆಯುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಯಾರು ವಿದ್ಯಾವಂತ ತರುಣರು ತಮ್ಮ ಮುಂದಿನ ಭವಿಷ್ಯಕ್ಕೋಸ್ಕರವಾಗಿ ಸತ್ಪ್ರಜೆಗಳನ್ನು ಈವತ್ತು ತಯಾರು

ಮಾಡುತ್ತಿದ್ದಾರೆ ಅವರಿಗೆ ಕಾನೂನು ಬದ್ಧವಾಗಿ ಕೊಡಬೇಕಾದ ಸಂಬಳವನ್ನು ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಅವರು ಸತ್ಯಾಗ್ರಹ ಮಾಡಬೇಕೇ ? ಚಳುವಳಿಯನ್ನು ಮಾಡಬೇಕೇ ? ಇದು ಸರಿಯೇ ಸ್ವಾಮಿ. ಇದನ್ನು ನೀವು ಅಪೇಕ್ಷೆ ಪಡುತ್ತೀರಾ ? ಕಾಂಗ್ರೆಸ್ ಸರ್ಕಾರ ಇದ್ದಂತ ಸಂದರ್ಭದಲ್ಲಿ ಏನೋ ಕೆಲವು ಕೆಲಸಗಳು ಆಗಲಿಲ್ಲವೆಂದು ಸಿಟ್ಟಿದ್ದ ಜನ ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟವೇಳೆ ಯಾವ ವಿದ್ಯಾವಂತ ತರುಣ ರೈತ ಹಳ್ಳಿಗಳಲ್ಲಿ ಇದ್ದಂಥ ರೈತ ನಿಮ್ಮನ್ನು ಈ ಕುರ್ಚಿಯ ಮೇಲೆ ಕೂಳಿಸುವುದಕ್ಕೆ ಕಷ್ಟಪಟ್ಟನೋ. ಅವನ ಬಗ್ಗೆ ಚಿಂತನೆ ಮಾಡಿ. ನಿಮ್ಮ ಒಳಜಗಳ ಕಿತ್ತು ಒಗೆಯಿರಿ ಎಂದು ನಾನು ಹೇಳಿದೆ. ಸನ್ಮಾನ್ಯ ದೇವೇಗೌಡರು, ಸನ್ಮಾನ್ಯ ಬೊಮ್ಮಾಯಿಯವರ ಹತ್ತಿರ ಕುಳಿತುಕೊಂಡು ಸನ್ಮಾನ್ಯ ಮುಖ್ಯ ಮಂತ್ರಿಗಳು ರೂಮಿನ ಒಳಗಡೆ ಕುಳಿತುಕೊಂಡು ಚರ್ಚೆ ಮಾಡಿ. ಸುದ್ದಿ ಹೊರಗಡೆ ಬರಬಾರದು ಎಂದು ಹೇಳಿದೆ. ಏನಾಗುತ್ತಿದೆ ಸ್ವಾಮಿ ? ಈ ರೀತಿ ಬಡವಾಗುತ್ತಿರುವ ಸಂದರ್ಭದಲ್ಲಿ ಜನರ ಹಿತವನ್ನು ಕಾಪಾಡುವುದಕ್ಕೆ ಸಾಧ್ಯವೇ ? ನಾನು ರಾಜಕೀಯ ಮಾಡುತ್ತಿಲ್ಲ. ನನ್ನ ಅಪೇಕ್ಷೆ ಇದು. ದಯವಿಟ್ಟು ಇದನ್ನು ಮಾಡಿ. ನಾಲ್ಕು ಗೋಡೆಗಳ ಒಳಗೆ ಕುಳಿತುಕೊಂಡು ಸಮಸ್ಯೆಯನ್ನು ಬಗೆಹರಿಸಿಕೊಂಡು ರಾಜ್ಯದ ಜನತೆಯ ಹಿತವನ್ನು ಕಾಪಾಡಿ ಎಂದು ಹೇಳಿದರೆ ಸುಮ್ಮನೆ ಪ್ರಚಾರಕ್ಕೆ ಬಡಿದಾಡಿಕೊಂಡು ಇದ್ದರೆ ರಾಜ್ಯ ಉಳಿಯುತ್ತದೆಯೇ ? ನಿಮ್ಮನ್ನೇ ನಂಬಿಕೊಂಡಿರುವ ಜನರು ಬದುಕುವುದಕ್ಕೆ ಸಾಧ್ಯ ಇದೆಯೇ ?

ಇನ್ನು ಬರದ ಬಗ್ಗೆ ಹೇಳುವುದಾದರೆ ಸ್ವಾಮಿ, ಬರದ ಬಗ್ಗೆ ತಾವು ಪೇಜ್ ನಂಬರ್ ೪ರಲ್ಲಿ ಬರಪೀಡಿತ ಪ್ರದೇಶಗಳಿಗೆ ಪರಿಹಾರ ಕಾರ್ಯಕ್ರಮಗಳಿಗಾಗಿ ಜಿಲ್ಲಾ ಪರಿಷತ್ತಿಗೆ ಎರಡು ಕೋಟಿ ಎಂಟು ಲಕ್ಷ ರೂಪಾಯಿಗಳನ್ನು ವಿತರಣೆ ಮಾಡಿದೆ ಎಂದು ತಾವು ಹೇಳಿದ್ದೀರಿ. ಅಧಿಕಾರಿಗಳು ಇದರಲ್ಲಿ ಏನಾದರೂ ವ್ಯತ್ಯಾಸ ಮಾಡುತ್ತಿದ್ದಾರೆಯೋ ಅಥವಾ ನಮಗೆ ಇದನ್ನು ಅರ್ಥ ಮಾಡಿಕೊಳ್ಳಲು ಶಕ್ತಿ ಇಲ್ಲವೋ ಎಂದು ನನಗನಿಸುತ್ತದೆ. ಇದರ ಬಗ್ಗೆ ಸ್ವಾಮಿ ಸನ್ಮಾನ್ಯ ಬೊಮ್ಮಾಯಿಯವರು ಹೇಳಿಕೆ ಕೊಟ್ಟಂತ ಸಂದರ್ಭದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎರಡನೇ ಬೆಳೆ ತೆಗೆಯಲು ಅನುಕೂಲಕ್ಕಾಗಿ ಅನುವು ಮಾಡಿಕೊಡುವುದಕ್ಕೆ ಬೀಜ ಮತ್ತು ಗೊಬ್ಬರಗಳಿಗೆ ಕ್ರಿಮಿಕೀಟ ನಾಶಕ್ಕಾಗಿ ೨ ಕೋಟಿ ೮ ಲಕ್ಷ ರೂಪಾಯಿ ಎಂದು ಇದೆ. ಮತ್ತೆ ಇನ್ನೊಂದು ಕಲಮ್ ಇದೆ. ಇದನ್ನು ತೆಗೆದುಹಾಕಿ ಅದಕ್ಕೆ ಸೇರಿಸಿದರೋ ಏನೋ ನನಗೆ ಅರ್ಥವಾಗುತ್ತಿಲ್ಲ. ಯಾವುದಕ್ಕೆ ೨ ಕೋಟಿ ೮ ಲಕ್ಷ ಎಂಬುದನ್ನು ತಿಳಿಸಬೇಕು. ತಾವು ಈವತ್ತಿನವರೆಗೂ ಸುಮಾರು ೧೪–೧೫ ಕೋಟಿ ರೂಪಾಯಿಗಳನ್ನು ಬರಗಾಲಕ್ಕೆ ಖರ್ಚು ಮಾಡಿದ್ದೇವೆಂದು ಹೇಳುತ್ತೀರಿ. ಪೂರಕ ಬೇಡಿಕೆಗಳಲ್ಲಿ ಇದರ ವಿವರ ಬರಬೇಕಾಗಿತ್ತು. ೨ ಕೋಟಿ ೮ ಲಕ್ಷ ಮಾತ್ರ ಪೇಜ್ ಎರಡರಲ್ಲಿ ಹೇಳುತ್ತಿದ್ದೀರಿ. ಇದು ಯಾವುದು ೨ ಕೋಟಿ ೮ ಲಕ್ಷ ? ಇದನ್ನು ತೆಗೆದು ಅದರಲ್ಲಿ ಬರೆದಿರುವಂತಿದೆ. ಇದನ್ನು ಹೇಳತಕ್ಕಂಥ ಅಗತ್ಯ ಇಲ್ಲವೇ ? ಶಾಸಕರು ಇದನ್ನು ಅರ್ಥ ಮಾಡಿಕೊಳ್ಳತಕ್ಕಂಥ ಅಗತ್ಯ ಇಲ್ಲವೇ ? ಈವತ್ತು ಏನು ವ್ಯವಸ್ಥೆ ಇದೆ. ನೀವು ಇಲ್ಲಿ ಹೇಳುತ್ತೀರಿ, ಬರಪೀಡಿತ ಪ್ರದೇಶಗಳಿಗೆ ಪರಿಹಾರ ಕಾರ್ಯಕ್ರಮಗಳಿಗೆ, ಮೇವು ಕಳುಹಿಸಲು ೨೦ ಲಕ್ಷ ರೂಪಾಯಿ ಅವಶ್ಯಕತೆ ಇದೆ ಎಂದು, ಯಾವಾಗ ಅವಶ್ಯಕತೆ ಇದೆ? ಮಳೆಯೆಲ್ಲಾ ಹೋಗಿದೆ. ಸ್ವಾಮಿ, ವಿಧಾನ ಸಭೆಯ ಕಾರ್ಯಕಲಾಪಗಳು ಶುರುವಾದಾಗಿನಿಂದ ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಮಳೆ ಬಿದ್ದಿರುವುದು ಕಂಡುಬಂದಿದೆಯೇ ? ಯಾವಾಗ ಬೀಜ ಕೊಡುತ್ತೀರಿ ? ಯಾವಾಗ ಮೇವನ್ನು ಬೆಳೆಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಿ? ಮುಂದಿನ ೮–೯ ತಿಂಗಳು ರಾಜಕೀಯ ಬಿಡೋಣ. ಇದರ ಬಗ್ಗೆ ಚಿಂತನೆ ನಡೆದಿದೆಯೇ ನಿಮ್ಮ ಸರ್ಕಾರದಲ್ಲಿ ? ಸ್ವಾಮಿ, ನಿನ್ನೆ ನಮ್ಮ ಊರಿಗೆ ಹೋಗಿದ್ದೆ. ಈ ರಾಜ್ಯದಲ್ಲಿರತಕ್ಕಂಥ ಯಾವದೇ ಬಡವ ಕೆಲಸ ಕೇಳಿದರೆ ಅವನಿಗೆ ಕೆಲಸ ಕೊಡುವ ವ್ಯವಸ್ಥೆ ನನ್ನದು ಎಂದು ಸನ್ಮಾನ್ಯ ಸಚಿವರು ಹೇಳಿದರು. ಸ್ವಾಮಿ ನಾನು ಕೇಳುತ್ತಾ ಇದ್ದೇನೆ ನಮ್ಮ ಕ್ಷೇತ್ರದಲ್ಲಿ ಕಳೆದ ಒಂದು ವಾರದಲ್ಲಿ ಕೆಲಸ ಮಾಡಿ ಕೂಲಿ ಸಿಗದೆ ಕೈಕಟ್ಟಿಕೊಂಡು ಕುಳಿತಿದ್ದಾರೆ. ಅಧಿಕಾರಿಗಳು ದುಡ್ಡಿಲ್ಲವೆಂದು ಹೇಳಿ ಕೈ ಕಟ್ಟಿಕೊಂಡು ಕೆಲಸ ನಿಲ್ಲಿಸಿದ್ದಾರೆ. ಇದನ್ನು ನಾನು ಏನೆಂದು ಹೇಳಲಿ? ಇದನ್ನು ಇಲ್ಲಿ ಹೇಳಿದರೆ ಶಾಸಕರು ನಗುತ್ತಾರೆ, ನಾನು ಸತ್ಯಸಂಗತಿಯನ್ನು ತಮಗೆ ಹೇಳಿದಾಗ ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಗಳನ್ನು, ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಛೀಮಾರಿ ಹಾಕುತ್ತೀರಿ. ದುಡ್ಡು ಕೊಡದೆ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡಲು ಸಾಧ್ಯವಾಗುತ್ತದೆ ? ನೀವು ಕೊಟ್ಟಿರತಕ್ಕಂಥ ೧೪–೧೫ ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿರುತ್ತೀರೆಂದು ಹೇಳುತ್ತೀರೋ ಅದಕ್ಕೆ ಲೆಕ್ಕ ಇಟ್ಟಿದ್ದೀರೋ ಇಲ್ಲವೋ ? ಇದಂತೂ ಸತ್ಯಕ್ಕೆ ದೂರವಾದಂತ ಲೆಕ್ಕ. ಯಾವುದೋ ಹೇಳಿ ಬಿಲ್ ಕೊಟ್ಟಿದ್ದಾರೆ ಇಲ್ಲಿ ಬರೆದಿದ್ದೀರಿ. ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಸ್ಕೀಮ್ ಏನು ಇದೆ ಇದೆಲ್ಲಾ

ನೀವು ಬರಗಾಲಕ್ಕೆ ಬರೆಯುತ್ತಿದ್ದೀರೇ ಹೊರತು ಇನ್ನು ಏನಾದರೂ ಹೊಸ ಕಾರ್ಯಕ್ರಮಗಳು ಇದೆಯೇ ಸ್ವಾಮಿ. ಕಾಂಗ್ರೆಸ್‌ನವರು ಇದ್ದಾಗ ಶಿಕಾರಿಪುರದಿಂದ ಮಾಸೂರಿಗೆ ಹೋಗುವಂಥ ಒಂದು ರಸ್ತೆ ಇದೆ. ಸನ್ಮಾನ್ಯ ಅಧ್ಯಕ್ಷರು ಹೋಗುವಂಥ ದಾರಿ. ಸ್ವಾಮಿ, ತಾವು ಬಸ್ಸಿನಲ್ಲಿ ಕುಳಿತುಕೊಂಡು ಯಾರಾದರೂ ಒಬ್ಬ ಸಿ. ಐ. ಡಿ. ಯನ್ನು ಕಳುಹಿಸಿಕೊಡಿ. ಬಸ್‌ನಲ್ಲಿ ಕುಳಿತುಕೊಂಡು ಪ್ರಯಾಣ ಮಾಡತಕ್ಕಂಥ ಜನರು ಯಾರೋ ಶಾಸಕನಂತೆ, ಇವನ ಮನೆ ಹಾಳಾಗ ಎಂದು ಪ್ರತಿಯೊಬ್ಬರು ಬಸ್‌ನಲ್ಲಿ ಪ್ರಯಾಣ ಮಾಡತಕ್ಕಂಥ ಜನರು ಮಾತನಾಡಿಕೊಳ್ಳುತ್ತಾರೆ. ಏನಾಗಿದೆ ಎಂದರೆ ಟಾರ್ ರೋಡ್ ಹೋಗಿ ಗುಂಡಿಗಳಾಗಿದೆ. ಇದು ಮಣ್ಣಿನ ರೋಡ್ ಆಗುತ್ತದೆಯೋ ಏನೋ. ನಿಮ್ಮ ಕಾಲದಲ್ಲಿ ಹೊಸ ರಸ್ತೆ ಆಗಲಿಲ್ಲ. ನಿಮ್ಮ ಪ್ರಚಾರ ಕಾರ್ಯಕ್ರಮಗಳನ್ನು ಯಾರು ಕೇಳಿದ್ದರು ? ಈಗ ಹಣಕಾಸಿನ ಸ್ಥಿತಿ ಬಹಳ ಚೆನ್ನಾಗಿಲ್ಲದೇ ಇರುವಾಗ ತಾಳಿ ಪುಕ್ಕಟೆ, ಪುಸ್ತಕ ಪುಕ್ಕಟೆ, ಯೂನಿಫಾರಂ ಪುಕ್ಕಟೆ, ಇದನ್ನೆಲ್ಲಾ ಮಾಡಬಾರದಾಗಿತ್ತು, ಆದರೆ ಇದನ್ನು ನಮ್ಮ ಅಪ್ಪ ಅಮ್ಮ ಯಾರೂ ಕೇಳಲಿಲ್ಲ. ನಮ್ಮ ಹಳ್ಳಿಯಲ್ಲಿರುವ ರೈತರು ನನಗೆ ಕೂಲಿ ಕೆಲಸಬೇಕು, ನಮಗೆ ಕುಡಿಯುವುದಕ್ಕೆ ನೀರು ಕೊಡಿ, ನಮಗೆ ಸ್ವಲ್ಪ ಹತ್ತಿರದಲ್ಲೇ ನೀರಿನ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳುತ್ತಾರೆಯೋ ಹೊರತು ಇನ್ನೇನನ್ನು ಕೇಳುವುದಿಲ್ಲ. ಅವರಿಗೆ ಅನುಕೂಲವಾಗುವಂತೆ ಸಾಮೂಹಿಕವಾಗಿ ಬೋರ್‌ವೆಲ್‌ಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೀರಾ ? ಆ ರೀತಿಯಾದ ಯಾವುದೇ ಕಾರ್ಯಕ್ರಮ ಏನೇನೂ ಇಲ್ಲ.

ನೀರಾವರಿ ಬಗ್ಗೆ ಲೋಕೋಪಯೋಗಿ ಇಲಾಖೆ ಬಗ್ಗೆ ಗ್ರಾಮೀಣ ರೈತರಿಗೆ ಸಂಬಂಧಪಟ್ಟ ಹಾಗೆ ಯಾವುದೇ ಬೇಡಿಕೆ ಇಲ್ಲ ಈ ಪೂರಕ ಬೇಡಿಕೆಗಳಲ್ಲಿ. ಸರ್ಕಾರ ಅಂದರೆ ಏನು? ಜನತೆ ಬಹುಮತ ನೀಡಿ ಮುಖ್ಯಮಂತ್ರಿ ಸರ್ಕಾರ ಆದ ಮೇಲೆ ಈ ಕಡೆ ಶಾಸಕರನ್ನು ಕೇಳುವುದು ಬೇಡವೇ? ತಮಗೆ ಖುಷಿ ಬಂದ ಹಾಗೆ ಮಾಡುತ್ತಿದ್ದಾರೆ ಆಡಳಿತದಲ್ಲಿ ತಪ್ಪಾದ ಮೇಲೆ ಜನತೆ ಶಾಸಕರನ್ನು ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಇವತ್ತು ಎಲ್ಲಿಗೆ ಹೊರಟಿದ್ದಾರೆಂದರೆ ಅಧಿಕಾರಿಗಳ ಸುಧಾರಣೆ ಕಡೆಗೆ ಹೊರಟಿದ್ದಾರೆ. ಇದು ಏನಾಯಿತೆಂದು ಕೇಳುತ್ತೇನೆ. ಎಲ್ಲಿಯಾದರೂ ಹೆಚ್ಚು ಕಡಿಮೆ ಆದರೆ ಶಾಸಕರ ಜವಾಬ್ದಾರಿ ಎಂದು ನಮ್ಮ ಮೇಲೆ ಹೇಳಿ ಆಯಿತು. ಈಗ ಎಲ್ಲಿಗೆ ಬಂದಿದೆ ಎಂದರೆ ಆಡಳಿತ ಪಕ್ಷದವರು ಎದ್ದುನಿಂತು ನೀವು ಮಾಡುತ್ತಿರುವುದು ಸರಿಯಲ್ಲವೆಂದು ಹೇಳುವ ಮಟ್ಟಕ್ಕೆ ಬಂದಿದೆ. ದಯಮಾಡಿ, ಇನ್ನೂ ಕಾಲ ಮಿಂಚಿಲ್ಲವೆಂದು ಪ್ರಾರ್ಥಿಸುತ್ತೇನೆ. ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಭಿನ್ನಾಭಿಪ್ರಾಯವನ್ನು ತೊಡೆದು ಹಾಕಿ, ಮಂತ್ರಿಮಂಡಲದ ಬಗ್ಗೆ ಜಿಲ್ಲಾ ಪರಿಷತ್ತು ಆದ ಮೇಲೆ ತಮಗೆ ಅಭಿಪ್ರಾಯ ತಿಳಿಸುವುದಕ್ಕೆ ಸಂಕೋಚವಾಗುತ್ತದೆ. ಮಾನ್ಯ ನಜೀರ್ ಸಾಬ್‌ರನ್ನು ಬಂಧಿ ಪಂಕ್ತಿಕೆಯಿಂದ ಕಾಂಗ್ರೆಸ್ಸಿನವರು ಜನತಾ ಪಕ್ಷಕ್ಕೆ ಕಳುಹಿಸಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡಿ ಶಾಸಕರು ಹಳ್ಳಿಯ ಜನರ ಹತ್ತಿರ ಹೋಗದಂತೆ ಮಾಡಿ ಎಂದು ಹೇಳಿಕೊಟ್ಟು ಮಾಡಿದ ಹಾಗೆ ಇದೆ. ನಾಳೆ ದಿವಸ ಚುನಾವಣೆಗೆ ನಿಂತರೆ ಖಂಡಿತ ನಾವು ಗೆಲ್ಲುತ್ತೇವೆ ಅವರು ಸೋಲುತ್ತಾರೆ ಎಂಬ ಭಾವನೆ ಇರುವ ಹಾಗೆ ಕಾಣುತ್ತದೆ. ಇವರು ಮಂಡಲ್ ಪಂಚಾಯಿತಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ದುಡ್ಡಿನ ಅನುಕೂಲತೆ ಬಗ್ಗೆ ಯೋಚನೆ ಮಾಡಿಲ್ಲ. ಹೀಗಾಗಿ ಇವತ್ತು ಜನರು ಛೀಮಾರಿ ಹಾಕುವಂತಹ ಪರಿಸ್ಥಿತಿ ಇದೆ ಎಂದು ಮಾನ್ಯ ನಜೀರ್ ಸಾಬ್‌ರಿಗೆ ಹೇಳುತ್ತಿದ್ದೇನೆ.

ಶ್ರೀ ಎಂ. ರಘುಪತಿ — ತಾವು ಹಳ್ಳಿಗಾಡಿನಲ್ಲಿದ್ದವರು.

ಶ್ರೀ ಬಿ.ಎಸ್. ಎಡಿಯೂರಪ್ಪ.— ನಾನು ಇರಲಿಲ್ಲ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಹೊಸ ವ್ಯವಸ್ಥೆ ಸರಿಯಲ್ಲವೆಂದು ಅಲ್ಲ. ನಿಮ್ಮ ಆಡಳಿತ ಪಕ್ಷದ ಶಾಸಕರ ಅನುಭವವನ್ನು ಕೇಳಿದ ಬಳಿಕ ಊರಿಗೆ ಹೋಗುವ ಹಾಗೆ ಇಲ್ಲ ಅನ್ನಿಸಿತು. ಹೀಗಾಗಿ ಈಗ ಏನೂ ಮಾಡುವ ಹಾಗೆ ಇಲ್ಲ. ಇಂಥ ಒಂದು ಪರಿಸ್ಥಿತಿ ಉಂಟಾಗಿದೆ. ಈಗಲಾದರೂ ಪ್ರಾಮಾಣಿಕವಾಗಿ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಯಾರು 10 ಸಾವಿರ ಜನ ಸತ್ಯಾಗ್ರಹ ಮಾಡುತ್ತಿದ್ದಾರೆ ಅವರನ್ನು ಜಾಗ್ರತೆ ಖಾಯಂ ಮಾಡುವ ವ್ಯವಸ್ಥೆ ಮಾಡಿ. ಅಗತ್ಯ ಬಂದರೆ ಅವರ ಸಲುವಾಗಿ ನಾವು ಇಲ್ಲಿ ಧರಣಿ ಮಾಡುವುದಕ್ಕೆ ಅವಕಾಶ ಕೊಡದೆ ಅವರ ನ್ಯಾಯಬದ್ಧವಾದ ಬೇಡಿಕೆ ಏನಿದೆ, ಮೂಲವೇತನಕ್ಕೆ 10 ರೂಪಾಯಿ ಕಡಿಮೆ ಕೊಡಬೇಕೆಂಬುದನ್ನು ಈಡೇರಿಸಿಕೊಡಿ. 4ನೇ ವೇತನ ಆಯೋಗದ ಪ್ರಕಾರ ಪೂರ್ವಾನ್ವಯವಾಗುವಂತೆ ಹಣ ಪಾವತಿ ಮಾಡಬೇಕೆಂಬ ಬೇಡಿಕೆ ಏನಿದೆ ಅದು

ನ್ಯಾಯಯುತವಾದುದಾಗಿದೆ. ತರುಣರು, ರೈತರು ತಿರುಗಿ ಬಿದ್ದರೆ ಸರ್ಕಾರ ಉಳಿಯುವುದಿಲ್ಲ. ಅವರು ನಿಮಗಾಗಿ ಕೆಲಸ ಮಾಡಿದ್ದಾರೆ. ರಾಜ್ಯದ ವಿದ್ಯಾವಂತ ತರುಣರನ್ನು, ರೈತರನ್ನು ಮರೆಯುವ ಕೆಲಸವನ್ನು ಸರ್ಕಾರ ಮಾಡಬಾರದು. ಅವರ ಬೇಡಿಕೆಗಳನ್ನು ಈಡೇರಿಸುವ ಮೂಲಕ ಒಳ್ಳೆಯ ಕೆಲಸ ಮಾಡಿ ಎಂದು ಪ್ರಾರ್ಥಿಸಿಕೊಂಡು ನಾಲ್ಕು ಮಾತುಗಳನ್ನು ಆಡಲು ಅವಕಾಶ ಕಲ್ಪಿಸಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಅಧ್ಯಕ್ಷರೇ, ಈ ದಿನ ಇಲ್ಲಿ ಮಂಡಿಸಿರತಕ್ಕ ಪೂರಕ ಬೇಡಿಕೆಗಳ ಬಗ್ಗೆ ನಾಲ್ಕು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ತೋಟಗಾರಿಕೆ ಇಲಾಖೆ ಮೇಲೆ ಬೇಡಿಕೆ ಇದೆ. ತೋಟಗಾರಿಕೆ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎಂದರೆ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆ ಅಭಿವೃದ್ಧಿಗೋಸ್ಕರ ಕೋಟಿಗಟ್ಟಲೆ ಹಣವನ್ನು ಈ ಇಲಾಖೆಯ ವತಿಯಿಂದ ಖರ್ಚು ಮಾಡಲಾಗುತ್ತಿದೆ. ಒಂದು ಕಡೆ ಹಣ ಖರ್ಚು ಮಾಡಿ ಮತ್ತೊಂದು ಕಡೆ ಯಾರು ತೆಂಗಿನ ಬೀಜಗಳನ್ನು ಕೊಂಡು ನರ್ಸರಿ ಮಾಡಿದ್ದಾರೆ ಅವುಗಳನ್ನು ಜನರಿಗೆ ಹಂಚುವ ಬದಲು ಅವುಗಳನ್ನು ಕಿತ್ತು ಬೆಂಕಿಗೆ ಹಾಕಿ ಸುಡುವ ಕಾರ್ಯಕ್ರಮ ಹಾಕಿಕೊಂಡಿದೆ. ಅದಕ್ಕೋಸ್ಕರ ದೊಡ್ಡ ಬೇಡಿಕೆಯನ್ನು ಈ ಇಲಾಖೆ ಸದನದ ಮುಂದೆ ತಂದಿದೆ. ತೋಟಗಾರಿಕೆ ಇಲಾಖೆಯ ತಜ್ಞರು ಒಂದು ಸಾರಿ ಉತ್ತಮವಾದ ಬೀಜವನ್ನು ಆಯ್ಕೆ ಮಾಡಿದ ಮೇಲೆ ಸಸಿ ಮಾಡಿ ಬೆಳಸಿ ಬಡವರಿಗೆ ಅಥವಾ ಉತ್ತಮ ತಳಿಯ ತೆಂಗಿನ ಸಸಿಗಳನ್ನು ನಿರೀಕ್ಷೆ ಮಾಡುವವರಿಗೆ ಹಂಚತಕ್ಕದ್ದು ಸರ್ಕಾರದ ಉದ್ದೇಶ. ಆದರೆ ಏನಾಗುತ್ತಿದೆ ಎಂದರೆ. ಬೀಜವನ್ನು ಆಯ್ಕೆ ಮಾಡುವಾಗ ಕಳಪೆ ಬೀಜಗಳನ್ನು ಆಯ್ಕೆ ಮಾಡುವುದು. ಅಂಥ ಬೀಜಗಳನ್ನು ಹಾಕಿ ಸಸಿ ಮಾಡಿದ ಮೇಲೆ ಬೀಜ ಸರಿಯಿಲ್ಲವೆಂದು ಅವುಗಳನ್ನು ಕಿತ್ತು ಬೆಂಕಿಗೆ ಹಾಕಿ ಸುಡತಕ್ಕದು ನಡೆಯುತ್ತಿದೆ, ಬಡ್ಜೆಟ್ಟಿನಲ್ಲಿ ಹಣ ಮಂಜೂರಾಗಿರುವ ಸಾರ್ವಜನಿಕ ಹಣವನ್ನು ವ್ಯರ್ಥ ಮಾಡುವುದಕ್ಕೆ ಕೊಡುತ್ತಾರೆಯೇ? ಕೆಟ್ಟ ಬೀಜವನ್ನು ಆಯ್ಕೆ ಮಾಡಿ ಸಸಿ ಬೆಳೆದು ನಂತರ ತಜ್ಞರಿಂದ ಪರೀಕ್ಷಿಸಿದ ಮೇಲೆ ಸರಿಯಿಲ್ಲವೆಂದು ತೀರ್ಮಾನವಾಗಿ ಎಷ್ಟು ಸಸಿಗಳನ್ನು ಬೆಂಕಿಯಲ್ಲಿ ಸುಟ್ಟಿದ್ದೀರಿ? ಕೆಟ್ಟ ಬೀಜಗಳನ್ನು ಆಯ್ಕೆ ಮಾಡುವ ಅಧಿಕಾರಿಗಳ ಮೇಲೆ ಮತ್ತು ಹಣವನ್ನು ವ್ಯಯ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೆ, ಇನ್ನು ಮೂರನೆಯ ಬೇಡಿಕೆಯಾಗಿ......

೫-೦೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ ಈ ಸದನದಲ್ಲಿ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದೆ ಕೂಡುವವರಿಗೆ ಹಿಂದೆ ಕೂಡುವ ಆಸಕ್ತಿ ಇದೆ. ಹಿಂದೆ ಕೂಡುವವರಿಗೆ ಮುಂದೆ ಕೂಡುವ ಆಸಕ್ತಿ ಇದೆ. ಇದಕ್ಕೇನಾದರೂ ಬದಲಾವಣೆ ಮಾಡಿಕೊಡುತ್ತೀರಾ? ಮಾನ್ಯ ಮಂತ್ರಿಗಳಾದ ಚಂದ್ರಶೇಖರ್ ಅವರು ಡಾ|| ಜೀವರಾಜ ಆಳ್ವ ಅವರು ಆ ಕಡೆ ಕೂತಿದ್ದಾರೆ. ಶ್ರೀಮತಿ ಲೀಲಾದೇವಿ ಪ್ರಸಾದ್ ಅವರಿಗೆ ಮುಂದೆ ಕೂಡುವ ಆಸೆ. ಆದರೆ ಅವರಿಗೆ ಹಿಂದೆ ಕೂಡಿಸಿದ್ದೀರಿ. ಮುಂದಿನ ಜಾಗಗಳು ಪೂರ್ತಿ ಖಾಲಿ ಇದೆ.

ಶ್ರೀ ಎ. ಲಕ್ಷ್ಮೀಸಾಗರ್,— ನೀವು ಅವಸರ ಪಡಬೇಡಿ.

ಶ್ರೀ ಬಿ. ಲಕ್ಕಪ್ಪ.— ಇದೇ ಇಲಾಖೆ ಅಡಿಯಲ್ಲಿ ೧೦ ಸಾವಿರ ತೆಂಗಿನ ಸಸಿಗಳನ್ನು ಧರ್ಮವೀರ ಹಾರ್ಟಿಕಲ್ಚರಲ್ ಫಾರಂನಲ್ಲಿ ಬೆಳೆಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಅದು ನೀರಿಲ್ಲದೆ ಹಾಳಾಗಿದೆ. ಆ ಫಾರಮ್ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ೧೨ ಲಕ್ಷ ರೂಪಾಯಿ ಹಣ ಕೊಟ್ಟಿದೆ. ಅದನ್ನು ಸದುಪಯೋಗ ಮಾಡಿಕೊಂಡು ಡ್ರಿಪ್ ಇರಿಗೇಷನ್ ಮೂಲಕ ಫಾರಂ ಅಭಿವೃದ್ಧಿ ಮಾಡಿ ಚೆನ್ನಾಗಿ ಬೆಳೆ ಆಗುವಂತೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿತ್ತು. ಅದನ್ನು ಮಾಡದಿರುವುದರಿಂದ ಫಾರಂ ಹಾಳಾಗಿದೆ, ಈ ಬಗ್ಗೆ ಸರ್ಕಾರ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪಶುವೈದ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಇಲ್ಲಿ ಆ ಇಲಾಖೆ ಮಂತ್ರಿಗಳಿದ್ದಾರೆ. ಇವರನ್ನು ಪಶುವೈದ್ಯ ಆಸ್ಪತ್ರೆ ಬಗ್ಗೆ ಕೇಳಿದರೆ ಜಿಲ್ಲಾ ಪರಿಷತ್ತನ್ನು ತೋರಿಸುತ್ತಾರೆ. ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಒಂದು ಪಶುವೈದ್ಯ ಆಸ್ಪತ್ರೆಯನ್ನು ಕೂಡ ೧೯೮೭-೮೮ನೇ ಸಾಲಿನಲ್ಲಿ ಮಂಜೂರು ಮಾಡತಕ್ಕ ಶಕ್ತಿ ನಿಮಗೆ ಬಂದಿಲ್ಲ. ಕಳೆದ ಎರಡು ವರ್ಷದಿಂದಲೂ ಪಶುವೈದ್ಯ ಶಾಲೆ ಪ್ರಾರಂಭವಾಗಲಿಲ್ಲ. ಎಲ್ಲಿ ಪಶುವೈದ್ಯ ಶಾಲೆಗಳಿಗೆ ಕಟ್ಟಡಗಳಿಲ್ಲ ಅಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಸರ್ಕಾರದಿಂದ ಸಾಧ್ಯ

ವಾಗಿಲ್ಲ. ನಾನು ಇಲ್ಲಿಗೆ ಬಂದಾಗಿನಿಂದ ಚಿಕ್ಕನಾಯ್ಕನಹಳ್ಳಿಯಲ್ಲಿ ಆಸ್ಪತ್ರೆ ಮಾಡುವ ಬಗ್ಗೆ ಈ ಇಲಾಖೆ ಮಂತ್ರಿಗಳನ್ನು ಮತ್ತು ಅಧಿಕಾರಿಗಳನ್ನು ಕೇಳುತ್ತಿದ್ದೇನೆ ಆದರೆ ಹಣ ಇಲ್ಲ ಎಂಬ ಉತ್ತರ ಬರುತ್ತಿದೆ, ಎಲ್ಲದಕ್ಕೂ ಹಣ ಇಲ್ಲ ಎಂದು ಉತ್ತರ ಹೇಳುತ್ತಾ ಹೋದರೆ, ಎಲ್ಲದಕ್ಕೂ ಇಲ್ಲದಪ್ಪನ ಸರ್ಕಾರ ಆದರೆ ಇದರಿಂದ ಉಪಯೋಗ ಏನಾಗುತ್ತದೆ? ಈ ಬೇಡಿಕೆಗಳಿಗೆ ಹಣ ಕೊಟ್ಟರೆ ಇದು ಎಲ್ಲಿಗೆ ಹೋಗುತ್ತದೆ?

ಶ್ರೀ ರಮೇಶ್ ಕುಮಾರ್.— ಸನ್ಮಾನ್ಯ ಅಧ್ಯಕ್ಷರು ಪಶುಸಂಗೋಪನಾ ರಾಜ್ಯ ಮಂತ್ರಿಯಾಗಿದ್ದರು ಅಲ್ಲಿಂದೀಚೆಗೆ ಯಾವುದೇ ಪಶುವೈದ್ಯ ಆಸ್ಪತ್ರೆಗಳು ಆಗಿಲ್ಲ, ನೀವು ಎರಡು ವರ್ಷಗಳಿಂದೀಚೆಗೆ ಆಸ್ಪತ್ರೆ ಆಗಿಲ್ಲ ಎಂದು ಹೇಳುತ್ತಿದ್ದೀರಿ ೧೯೭೭ರಿಂದಲೇ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ನೀವು ವಿಷಯ ಚೆನ್ನಾಗಿ ಹೇಳುತ್ತಿದ್ದೀರಿ. ಹೇಳಿ.

† ಶ್ರೀ ಬಿ. ಲಕ್ಕಪ್ಪ.—ಉಚ್ಚ ಶಿಕ್ಷಣದ ಬಗ್ಗೆ ೧೦ನೇ ಬೇಡಿಕೆಯಲ್ಲಿ ಹೇಳಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಸರ್ಕಾರದ ಅನುದಾನದ ಮೂಲಕ ಜೂನಿಯರ್ ಕಾಲೇಜುಗಳನ್ನು ತೆರೆಯುವುದಕ್ಕೆ ಅನುಮತಿ ಕೊಟ್ಟಿಲ್ಲ. ಕಾರಣ ಹಣ ಇಲ್ಲದಿರುವುದು. ಪ್ರಥಮ ದರ್ಜೆ ಕಾಲೇಜು ಕೊಡಿ ಎಂದರೆ ಹಣ ಇಲ್ಲ. ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಅದೂ ಎಂಥ ಶಿಕ್ಷಣ ಸಂಸ್ಥೆಗಳಿಗೆ ಮಂಜೂರು ಮಾಡಿದ್ದಾರೆ ಎಂದರೆ ಯಾರಿಗೆ ಸರ್ಕಾರದ ಅನುದಾನ ಪಡೆಯದೆ ನಡೆಸುವುದಕ್ಕೆ ಶಕ್ತಿ ಇಲ್ಲವೋ ಅಂಥವರಿಗೆ ಮಂಜೂರು ಮಾಡಿದ್ದಾರೆ. ಲೈಫ್‌ಲಾಂಗ್ ಅನುದಾನ ಕೇಳದೆ ಸರ್ಕಾರದ ಯಾವುದೇ ಅನುದಾನವನ್ನು ಅಪೇಕ್ಷೆ ಮಾಡದೇ ಇರುವ ಕಂಡೀಷನ್ ಮೇಲೆ ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಕೋಟಿಗಟ್ಟಲೆ ಬಂಡವಾಳ ಇರತಕ್ಕ ವಿದ್ಯಾಸಂಸ್ಥೆಗಳಿಗೆ ಕೊಟ್ಟಿದ್ದರೆ ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ, ನಡೆಸುತ್ತಾರೆ ಎಂದು ಹೇಳಬಹುದಾಗಿತ್ತು. ಆದರೆ ಈಗ ಎಂಥವರಿಗೆ ಕೊಟ್ಟಿದ್ದಾರೆಂದರೆ, ಜೂನಿಯರ್ ಕಾಲೇಜಿನ ಬೋರ್ಡ್ ಬರೆಸಲೂ ಶಕ್ತಿ ಇಲ್ಲದೇ ಇರತಕ್ಕ ವಿದ್ಯಾ ಸಂಸ್ಥೆಗಳಿಗೆ ಮಂಜೂರು ಮಾಡಿದ್ದಾರೆ. ಹೀಗೆ ಮಾಡುವುದರಿಂದ, ಸಾರ್ವಜನಿಕರ ದೃಷ್ಟಿಯಲ್ಲಿ ಈ ಇಲಾಖೆಯನ್ನು ಬಹಳ ಅಸಡ್ಡೆಯಿಂದ ನೋಡುವ ಪರಿಸ್ಥಿತಿ ಬರುತ್ತದೆ. ಇದು ಹಾಸ್ಯಕ್ಕೆ ಈಡಾಗುತ್ತದೆ ನೀವು ೨೦ ಕೊಡುವ ಬದಲು ೪ ಸಂಸ್ಥೆಗಳಿಗೆ ಕೊಡಿ. ಅನುದಾನದ ನೀತಿ ನಿಯಮಗಳನ್ನು ಅನುಸರಿಸಿ ಸರಿಯಾದ ರೀತಿ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಿ ಉಪಾಧ್ಯಾಯರಿಗೆ ಉದ್ಯೋಗ ಕೊಡತಕ್ಕ ರೀತಿಯಲ್ಲಿ ಅದು ನಡೆಯಬೇಕು.

ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ, ಗುತ್ತಿಗೆ ಆಧಾರದ ಮೇಲೆ ಕಾಲೇಜುಗಳಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ೧೦ ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಗುತ್ತಿಗೆ ಆಧಾರದ ಮೇಲೆಯೇ ನೇಮಕ ಮಾಡಿದ್ದಾರೆ. ಅವರು ಇದುವರೆಗೂ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆ ರೀತಿಯಲ್ಲಿ ಕೆಲಸ ಮಾಡಿಕೊಂಡು ಬರತಕ್ಕ ಇವರಿಗೆ ಉಪಾಧ್ಯಾಯರನ್ನು ನೇಮಕಾತಿ ಮಾಡತಕ್ಕ ಸಂದರ್ಭದಲ್ಲಿ ಇವರನ್ನು ಖಾಯಂ ಮಾಡತಕ್ಕ ನಿರ್ಣಯವನ್ನು ತೆಗೆದುಕೊಂಡಿಲ್ಲ. ಇದರಿಂದ ಇವತ್ತು ಏನಾಗಿದೆ ಎಂದರೆ ೧೦ ಸಾವಿರ ಜನ ಬೆಂಗಳೂರಿಗೆ ಬಂದಿದ್ದಾರೆ. ಕಬ್ಬನ್ ಪಾರ್ಕಿನಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರನ್ನು ಖಾಯಂ ಮಾಡುವಂತಹ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂಬುದನ್ನು ತಿಳಿಸಬೇಕು.

ಪ್ರಾಥಮಿಕ ಶಾಲೆಗೆ ಸಂಬಂಧಪಟ್ಟಂತೆ ಬೇಡಿಕೆ ನಂ. ೧೩. ಇದರ ಬಗ್ಗೆ ಹೇಳುವುದಕ್ಕೆ ಹೋದರೆ ದೊಡ್ಡ ಕಥೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಮಕ್ಕಳಿಗೆ ಎಷ್ಟರಮಟ್ಟಿಗೆ ವಿದ್ಯಾಭ್ಯಾಸವನ್ನು ಕೊಡುತ್ತಿದ್ದೇವೆಂದರೆ, ಅಲ್ಲಿರತಕ್ಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ. ಉಪಾಧ್ಯಾಯರು ಇರತಕ್ಕ ಅನೇಕ ಶಾಲಾ ಕಟ್ಟಡಗಳು ಅನೇಕ ವರ್ಷಗಳಿಂದ ರಿಪೇರಿ ಇಲ್ಲದೆ, ಶಾಲಾ ಕಟ್ಟಡ ಸೋರುತ್ತಿವೆ. ಶಾಲಾ ಕಟ್ಟಡದ ಗೋಡೆಗಳು ಬಿರುಕು ಬಿಟ್ಟಿರುವಂತಹವುಗಳು ನನ್ನ ಕ್ಷೇತ್ರದಲ್ಲೇ ಎಷ್ಟೋ ಇವೆ. ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿದರೆ ಹಣ ಇಲ್ಲ ಅಂತ ಹೇಳುತ್ತಾರೆ. ಆ ರೀತಿಯಲ್ಲಿರತಕ್ಕ ಶಾಲಾ ಕಟ್ಟಡಗಳಲ್ಲಿ ವ್ಯಾಸಂಗ ಮಾಡುವ ಸಲುವಾಗಿ ತಮ್ಮ ಮಕ್ಕಳನ್ನು ತಂದೆ ತಾಯಿಗಳು ಕಳುಹಿಸದೆ ಶಾಲೆಗಳನ್ನು ಮುಚ್ಚಿರುವಂತಹ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ಉಪಾಧ್ಯಾಯರ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ. ಏಕೆಂದರೆ ಎಷ್ಟೋ

ಕಡೆ ಉಪಾಧ್ಯಾಯರು ಇಲ್ಲ. ಕೆಲವು ಕಡೆ ಇರುವಂತಹ ಏಕೋಪಾಧ್ಯಾಯರನ್ನು ಬೇರೆ ಕಡೆಗೆ ಡೆಪ್ಯುಟೇಷನ್ ಮೇಲೆ ಕಳುಹಿಸಿ ಆ ಶಾಲೆಗಳನ್ನೂ ಕೂಡ ಮುಚ್ಚಿದ್ದಾರೆ. ಉದಾಹರಣೆಗೆ ಹೇಳುವುದಾದರೆ. ನನ್ನ ಪಕ್ಕದ ಕ್ಷೇತ್ರವಾದ ತಿಪಟೂರು ತಾಲ್ಲೂಕಿನಲ್ಲಿ ಕಿಬ್ಬನಹಳ್ಳಿ ಎಂಬ ಹೋಬಳಿ ಇದೆ. ಅಲ್ಲಿ ಜಯಂತಿ ಗ್ರಾಮವೆಂಬುದು ಒಂದು ಇದೆ. ಅಲ್ಲಿರತಕ್ಕವರೆಲ್ಲರೂ ಯಾದವರು. ಬಹಳ ಹಿಂದುಳಿದಿರತಕ್ಕಂತಹ ಜನಾಂಗ ಅದು. ಆ ಒಂದು ಜಯಂತಿ ಗ್ರಾಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಳೆದ ೧೫ ವರ್ಷಗಳಿಂದ ಅಲ್ಲೊಂದು ಪ್ರಾಥಮಿಕ ಶಾಲೆ ನಡೆದುಕೊಂಡು ಬಂತು. ಆ ಒಂದು ಪ್ರಾಥಮಿಕ ಶಾಲೆಯಲ್ಲಿ ೩೮ ಜನ ವ್ಯಾಸಂಗ ಮಾಡತಕ್ಕ ಹುಡುಗರು ಇದ್ದಾರೆ. ಆದರೆ ಅಲ್ಲಿರತಕ್ಕ ಉಪಾಧ್ಯಾಯರು ಮತ್ತು ಆ ತಾಲ್ಲೂಕಿನ ಎ.ಇ.ಓ. ಬಹಳ ಉತ್ತಮ ಜಾತಿಗೆ ಸೇರಿರತಕ್ಕಂತಹವರು. ಬಹುಶಃ ಆ ಗ್ರಾಮದಲ್ಲಿರುವಂತಹ ಮಕ್ಕಳೆಲ್ಲರೂ ವಿದ್ಯಾವಂತರಾದರೆ, ಮೇಲೆ ಬಂದು ಬಿಡುತ್ತಾರೆ ಎಂಬುದಾಗಿ ತಿಳಿದುಕೊಂಡು ೧೯೭೭–೭೮ನೇ ಸಾಲಿನಲ್ಲಿ ಆ ಶಾಲೆಯನ್ನು ಪ್ರಾರಂಭ ಮಾಡಿಯೇ ಇಲ್ಲ. ಮುಚ್ಚಿದ್ದಾರೆ. ಇದರಿಂದ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ.

ಶ್ರೀ ರಮೇಶ್‌ಕುಮಾರ್.—ಅವರು ಬ್ರಾಹ್ಮಣರಾ

ಶ್ರೀ ಬಿ. ಲಕ್ಕಪ್ಪ.—ಅದು ಗೊತ್ತಿಲ್ಲ.

ಅಧ್ಯಕ್ಷರು.—ಅವರು ನಿಮ್ಮನ್ನು ದಾರಿ ತಪ್ಪಿಸುತ್ತಾರೆ. ತಾವು ಮಾತನಾಡಿ.

ಶ್ರೀ ಬಿ. ಲಕ್ಕಪ್ಪ.—ಆ ಗ್ರಾಮದ ಪೋಷಕರು ಆ ಗ್ರಾಮದಿಂದ ಸುಮಾರು ೨೦ ಮೈಲಿ ದೂರದಲ್ಲಿರತಕ್ಕ ನನ್ನ ಊರಿಗೆ ಬಸ್ಸಿನಲ್ಲಿ ಬಂದು, ಶಾಲೆಯನ್ನು ಪ್ರಾರಂಭ ಮಾಡಿಲ್ಲ, ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ, ಬೇಗ ಆ ಶಾಲೆಯನ್ನು ತೆರೆಯುವುದಕ್ಕೆ ಅವಕಾಶ ಮಾಡಿ ಕೊಡಿ ಅಂತ ಹೇಳಿದರು. ಆ ವಿಚಾರವನ್ನು ನಾನು ಮಾನ್ಯ ಸಚಿವರಲ್ಲಿ ಹೇಳಿದೆ. ಅವರು ತಕ್ಷಣವೇ ಆ ಶಾಲೆಯನ್ನು ತೆರೆಯಬೇಕೆಂದು ಬರೆದು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟರು. ಆದರೆ ಇದುವರೆವಿಗೂ ಆ ಶಾಲೆಯನ್ನು ಪ್ರಾರಂಭ ಮಾಡಿಲ್ಲ. ಸರ್ಕಾರಿ ಅಧಿಕಾರಿಗಳು ಮಂತ್ರಿಗಳ ಆದೇಶವನ್ನು ಯಾವ ರೀತಿ ಪಾಲನೆ ಮಾಡುತ್ತಾರೆಂಬುದಕ್ಕೆ ಇದೊಂದು ನಿದರ್ಶನ. ಆ ಗ್ರಾಮದ ಪೋಷಕರು ಸಂಬಂಧಪಟ್ಟ ಎ. ಇ. ಓ. ಅವರ ಹತ್ತಿರ ಹೋಗಿ ಮಂತ್ರಿಗಳು ಶಾಲೆಯನ್ನು ಪ್ರಾರಂಭ ಮಾಡಿ ಅಂತ ಬರೆದಿದ್ದಾರೆ. ಅದರಂತೆ ಶಾಲೆಯನ್ನು ಪ್ರಾರಂಭ ಮಾಡಿ ಎಂದು ಕೇಳಿದಾಗ ಅವರು ಮಂತ್ರಿಗಳು ಹೇಳಿರಲಿ. ಯಾರೇ ಹೇಳಿರಲಿ, ಆ ಶಾಲೆಯನ್ನು ಪ್ರಾರಂಭ ಮಾಡುವುದಿಲ್ಲವೆಂದು ಹೇಳಿದುದೇ ಅಲ್ಲದೆ ಇದುವರೆವಿಗೂ ಆ ಶಾಲೆಯನ್ನೂ ಪ್ರಾರಂಭ ಮಾಡಿಲ್ಲ, ಹೀಗಾದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸ ಯಾವ ರೀತಿ ಮುಂದುವರಿಯಬೇಕು ? ಆದರೆ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಬಿಡುಗಡೆ ಮಾಡುವಂತಹ ಹಣವನ್ನು ಸರ್ಕಾರ ವ್ಯಯ ಮಾಡುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ಆ ಶಾಲೆಯನ್ನು ತಕ್ಷಣವೇ ಪ್ರಾರಂಭ ಮಾಡಬೇಕೆಂದು ಕೇಳುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ನೀರಾವರಿಯ ಬಗ್ಗೆ ಮೊದಲಿನಿಂದಲೂ ಹೇಳುತ್ತಿದ್ದೇನೆ. ಸತತವಾಗಿ ಬರಗಾಲಕ್ಕೆ ಒಳಗಾಗುತ್ತಿರುವಂತಹ ನಮ್ಮ ರಾಜ್ಯದಲ್ಲಿ ನೀರಾವರಿಗೆ ಆದ್ಯತೆಯನ್ನು ಕೊಡದಿದ್ದರೆ ಅದು ನಿಜವಾಗಿಯೂ...

ಶ್ರೀ ಎ. ಲಕ್ಷ್ಮೀಸಾಗರ್.—ಏನು ಸ್ವಾಮಿ. ಇದು ಸಾಮಾನ್ಯ ಚರ್ಚೆಯೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೪ ಡಿಮ್ಯಾಂಡ್‌ಗಳನ್ನು ಇಟ್ಟಿದ್ದೀರಿ. ಪ್ರತಿಯೊಂದು ಡಿಮ್ಯಾಂಡ್ ಬಗ್ಗೆಯೂ ಹಣವನ್ನು ಕೇಳಿದ್ದೀರಿ. ಅದರ ಬಗ್ಗೆ ಮಾತನಾಡಬೇಕಲ್ಲಾ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ದಯಮಾಡಿ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ನೀರಾವರಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಸತತವಾಗಿ ಬರಗಾಲಕ್ಕೆ ತುತ್ತಾಗತಕ್ಕ ತಾಲ್ಲೂಕುಗಳು ಇವೆ. ಆ ಪ್ರದೇಶದಲ್ಲಿ ಇರತಕ್ಕ ರೈತರ ಸ್ಥಿತಿಯನ್ನು ನೋಡಿದರೆ ಬಹುಶಃ ಮಳೆ ಬಂದರೆ ಉಂಟು ಇಲ್ಲದಿದ್ದರೆ ಇಲ್ಲ ಹಾಗಾಗಿದೆ. ಸಕಾಲದಲ್ಲಿ ಮಳೆ ಬರದಿದ್ದರೆ ಹಾಕಿದ ಬೀಜ, ಗೊಬ್ಬರಕ್ಕೆ ಬೆಲೆಯಿಲ್ಲದೇ ಅವರ ಆರ್ಥಿಕ ಪರಿಸ್ಥಿತಿ ಬಹಳ ದುಃಸ್ಥಿ

ತಿಗೆ ಹೋಗುತ್ತದೆ. ಈ ಪ್ರಯುಕ್ತ ನೀರಾವರಿಗೆ ಹೆಚ್ಚು ಆದ್ಯತೆ ಕೊಡಬೇಕು. ಅಪ್ಪರ್ ಭದ್ರಾ ಯೋಜನೆಯಿಂದ ಚಿತ್ರದುರ್ಗ, ತುಮಕೂರು, ಬಳ್ಳಾರಿ ಹಾಗೂ ಕೋಲಾರ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಸದಾ ಬರಗಾಲಕ್ಕೆ ತುತ್ತಾಗುವ ಪ್ರದೇಶದ ನೀರಾವರಿಗೋಸ್ಕರ ಪ್ರಾಜೆಕ್ಟ್ ತಯಾರು ಮಾಡಿ ಕೇಂದ್ರಕ್ಕೆ ಕಳುಹಿಸಬೇಕೆಂದು ಮಾನ್ಯ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಿಯೋಗಬಂದು ಎರಡು ವರ್ಷಗಳಾದವು. ಇದುವರೆವಿಗೂ ಈ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ ಕೇಂದ್ರದ ಅನುಮತಿಗಾಗಿ ಕಳುಹಿಸಿರುವುದಿಲ್ಲ ಈ ಬಗ್ಗೆ ರಿಪೋರ್ಟ್ ತಯಾರು ಮಾಡುವ ಕಳಕಳಿಯೇ ಇಲ್ಲ ಎಂದಮೇಲೆ ಬರಗಾಲಕ್ಕೆ ಸದಾ ತುತ್ತಾಗುವ ಪ್ರದೇಶದ ರೈತರ ಕಾಪಾಡುವ ಬಗ್ಗೆ ಕಳಕಳಿಯಿಲ್ಲವೆಂದಾಗುತ್ತದೆ. ಆ ಭಾಗದ ರೈತವರ್ಗದವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಈ ಬಗ್ಗೆ ಒಂದು ರಿಪೋರ್ಟ್ ಮಾಡಿ ಕೇಂದ್ರ ಸರ್ಕಾರಕ್ಕೆ ಅನುಮತಿಗಾಗಿ ಕಳುಹಿಸದೇ ಇದ್ದರೆ ಕೇವಲ ಒಂದು ತಿಂಗಳಲ್ಲಿ ಆ ನಾಲ್ಕು ಜಿಲ್ಲೆಯ ಸುಮಾರು ಒಂದು ಕೋಟಿ ಜನ ರೈತರು ಚಳುವಳಿಯ ಮಾರ್ಗವನ್ನು ಹಿಡಿಯುತ್ತಾರೆಂದು ಹೇಳುತ್ತೇನೆ. ಇನ್ನು ಹರಿಜನಗಿರಿಜನ ಹಾಗೂ ಹಿಂದುಳಿದ ವರ್ಗದವರ ಯೋಗಕ್ಷೇಮದ ಬಗ್ಗೆ ಮಾತನಾಡುವುದಕ್ಕೆ ಈ ಸರ್ಕಾರಕ್ಕೆ ಯಾವ ನೈತಿಕ ಹಕ್ಕೂ ಇಲ್ಲವೆಂದು ಹೇಳುತ್ತೇನೆ. ವೆಂಕಟಸ್ವಾಮಿ ಆಯೋಗದ ವರದಿಯನ್ನು ಕಸದಬುಟ್ಟಿಗೆ ಹಾಕಿ ತಮ್ಮದೇ ಆದ ಹಿಂದುಳಿದ ವರ್ಗದವರ ಡೆಫನಿಷನ್‌ನು ಕೊಟ್ಟಿರತಕ್ಕದ್ದನ್ನು ನೋಡಿದರೆ ಮಂಡಲ ಪಂಚಾಯಿತಿಯಲ್ಲಿ ನಾಮಕರಣ ಮಾಡುವ ಕಾಲದಲ್ಲಿ ಹಿಂದುಳಿದ ವರ್ಗದವರಿಗೆ ನೇಮಕ ಮಾಡುವ ಸಮಯದಲ್ಲಿ ಸರಿಯಾದ ಡೆಫನಿಷನ್ ಇಲ್ಲದಿದ್ದರಿಂದ ಮೇಲ್ವರ್ಗದವರೂ ಹಿಂದುಳಿದ ವರ್ಗಗಳ ಹೆಸರಿನಲ್ಲಿ ಸೌಲಭ್ಯ ಪಡೆದುಕೊಂಡಿರುತ್ತಾರೆ. ವೆಂಕಟಸ್ವಾಮಿ ಆಯೋಗದ ವರದಿ ರದ್ದು ಮಾಡತಕ್ಕ ಸಮಯದಲ್ಲಿ ಆದಷ್ಟು ಬೇಗ ೩ನೇ ಆಯೋಗ ರಚನೆ ಮಾಡಿ ಹಿಂದುಳಿದ ವರ್ಗದವರು ಯಾರು ಎಂಬುದನ್ನು ಗುರ್ತಿಸಿ ಅವರಿಗೆ ಸೌಲಭ್ಯ ಕೊಡುವ ಕೆಲಸ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಆದರೆ ಇದುವರೆವಿಗೂ ೩ನೇ ಆಯೋಗವನ್ನು ರಚನೆ ಮಾಡಿರುವುದಿಲ್ಲ. ಈ ಒಂದು ಬೇಜವಾಬ್ದಾರಿ ವರ್ತನೆಯಿಂದಲೇ ಇವರಿಗೆ ಹಿಂದುಳಿದ ವರ್ಗದವರ ಮೇಲೆ ಕಳಕಳಿ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿ ನ್ಯಾಯವಾಗಿ ಹಿಂದುಳಿದ ವರ್ಗದವರಿಗೆ ಸಿಗಬೇಕಾದ ಸೌಕರ್ಯವನ್ನು ಒದಗಿಸಿಕೊಡುವುದರ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳಿ ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ಒತ್ತಾಯ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಂತ್ರಿಗಳಿಂದ ಉತ್ತರ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಪೂರಕ ಬೇಡಿಕೆಗಳ ಮೇಲೆ ಸನ್ಮಾನ್ಯ ಸದಸ್ಯರು...

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ. ಇದೇನಿದು ?

ಅಧ್ಯಕ್ಷರು.—ಮುಗಿಸೋಣ. ಈಗಾಗಲೇ ಐದೂಕಾಲು ಗಂಟೆ ಆಯಿತು. ನಾಳೆ ಬೇರೆ ವಿಷಯಗಳ ಮೇಲೆ ಪ್ರಸ್ತಾಪ ಮಾಡುವ ಸಮಯದಲ್ಲಿ ತಮಗೆ ನಾನು ಸಾಕಷ್ಟು ಅವಕಾಶ ಕೊಡುತ್ತೇನೆ. ತಾವು ದಯವಿಟ್ಟು ಸಹಕಾರ ಕೊಡಿ. ಇದು ನನ್ನ ಕಳಕಳಿಯ ನಮ್ರತೆಯ ಒಂದು ರಿಕ್ವೆಸ್ಟ್.

ಶ್ರೀ ಎಸ್. ಬಂಗಾರಪ್ಪ.—ಅಲ್ಲಾ ಅಧ್ಯಕ್ಷರೇ...

ಅಧ್ಯಕ್ಷರು.—ತಮಗೆ ಅಪಾರವಾದ ಅನುಭವ ಇದೆ. ತಾವು ಇದುವರೆವಿಗೂ ಸಹಕಾರ ಕೊಟ್ಟುಕೊಂಡು ಬಂದಿದ್ದೀರಿ. ಅದಕ್ಕೆ ನಾನು ಧನ್ಯವಾದ ಅರ್ಪಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕಿಲಿಕಿಲಿ ನಗುತ್ತಿದ್ದೀರಲ್ಲಾ, ಏನು ಸಮಾಚಾರಾ ? (ನಗು) ಇಂತಹ ಸಂದರ್ಭ ಬಂದಾಗ ನಗುತ್ತೀರಿ. ಬೇರೆ ಸಮಯದಲ್ಲಿ ಗಂಟೆ ಹೊಡೆದು ಸಿಡಿಸಿಡಿ ಎನ್ನುತ್ತೀರಿ.

ಅಧ್ಯಕ್ಷರು.—ಹಾಗೇನಿಲ್ಲ. ನಾನು ನಗುತ್ತಲೇ ಇರುತ್ತೇನೆ. ನಾನು ಎಲ್ಲರಿಗೂ ಮಾತನಾಡಲು ಅವಕಾ ಮಾಡಿಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಸದಾ ನಗುತ್ತಲೇ ಇರಬೇಕು. ಬೈದರೂಕೂಡಾ ಕೋಪ ಮಾಡಿಕೊಳ್ಳುವುದಕ್ಕೆ ಹೋಗಬಾರದು.

ಅಧ್ಯಕ್ಷರು.—ತಾವು ಬೈದರೂ ನಾನು ನಗುತ್ತಾ ಇರುತ್ತೇನೆ. ಆಯಿತೇ ?

ಶ್ರೀ ಎಸ್. ಬಂಗಾರಪ್ಪ.—ನಾವು ಇಷ್ಟೆಲ್ಲಾ ಓದಿಕೊಂಡು ಬಂದು ರೆಡಿ ಇದ್ದೇವೆ. ಈಗ ಮಾತ ನಾಡುವುದು ಬೇಡ ಎಂದರೆ ಚೆನ್ನಾಗಿರುತ್ತದೆಯೇ ?

ಅಧ್ಯಕ್ಷರು.—ಎಕ್ಸ್‌ಟೆಂಪರಾಗಿಯೇ ತಾವು ಚೆನ್ನಾಗಿ ಮಾತನಾಡುತ್ತೀರಿ. ಇನ್ನು ಸಿದ್ಧತೆ ಏಕೆ ಬೇಕು ? ಮುಂದೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮಾತಿಗೆ ಬೆಲೆ ಇಲ್ಲವೆ ? ಈಗ ಏನು ಮಾಡೋಣ ಹೇಳಿ ?

ಅಧ್ಯಕ್ಷರು.—ಸಹಕಾರ ಕೊಡಿ, ಸದನದ ಪತಿಯಿಂದ ಕೇಳಿಕೊಳ್ಳುತ್ತೇನೆ ನೀವು ಸಹಕಾರ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಸದನದ ಮೂಲಕ ತಮ್ಮ ಮೂಲಕ ಕೇಳುತ್ತಿದ್ದೇನೆ ನನಗೆ ಸಹಕಾರ ಕೊಡಿ. ನಾನು ಇಷ್ಟೆಲ್ಲಾ ಓದಿಕೊಂಡು ಬಂದು......

ಅಧ್ಯಕ್ಷರು.—ನೀವು ಓದಿಕೊಂಡು ಬಂದಿದ್ದರೆ, ಆ ಜ್ಞಾನಭಂಡಾರ ನಿಮ್ಮ ಹತ್ತಿರ ಇರುತ್ತದೆ. ನಾನು ಈಗಾಗಲೇ ಮಂತ್ರಿಗಳನ್ನು ಉತ್ತರ ಹೇಳಲಿಕ್ಕೆ ಕರೆದಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರಿಗೆ ಮಾತನಾಡಲಿಕ್ಕೆ ಬೇಕಾದಷ್ಟು ಅವಕಾಶವಿದೆ.

ಶ್ರೀ ಯು. ಭೂಪತಿ.—ಮಾನ್ಯ ಬಂಗಾರಪ್ಪನವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಿಮ್ಮ ಅಭಿಪ್ರಾಯವನ್ನು, ಬಹಳ ಸಲ ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಭಾಷಣ ಬೇಡವೆಂದು ಇಡೀ ಸದನದ ಅಭಿಪ್ರಾಯವಾದರೆ ಹಾಗೂ ನನ್ನ ಭಾಷಣ ಕೇಳುವುದು ಬೇಡವೆಂದರೆ ನಾನು ಕುಳಿತುಕೊಳ್ಳುತ್ತೇನೆ:

ಶ್ರೀ ಎಸ್. ಆರ್. ಬೊಮ್ಮಾಯಿ.—ಸದನದ ಅಭಿಪ್ರಾಯ, ಯಾವ ವಿಷಯಕ್ಕೆ ಎಷ್ಟು ಸಮಯ ಕೊಡಬೇಕೆಂದು ಸಮಯ ನಿಗದಿ ಮಾಡಿದ್ದೇವೆ. ಒಂದು ಬಿಲ್ಲೂ ಪಾಸ್ ಮಾಡುವುದು ಬೇಡ ವೆಂದು ಸದನದ ಅಭಿಪ್ರಾಯವಿದೆಯೇ ? ಬಿಲ್ಲುಗಳು ಇವೆ. ಒಂದೆರಡು ಗಂಟೆಗಳಲ್ಲಿ ಮಾಡಬಹು ದಾದನ್ನು ಒಂದು ದಿವಸ ಮಾಡಿದರೆ ಬಿಲ್‌ಗಳು ಹಾಗೆಯೇ ಉಳಿಯುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಬಿಲ್‌ಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ನಿನ್ನೆ ಇದು ಪ್ರಾರಂಭವಾಗಿದೆ, ಬಿಲ್‌ಗಳು ಪಾಸ್ ಆಗಿಲ್ಲ. ಇದು ಒಂದೇ ವಿಷಯದ ಮೇಲೆ ಚರ್ಚೆಯಾಗಿದೆ. ನಿನ್ನೆ ವಿರೋಧಪಕ್ಷದ ನಾಯಕರವರು ೪ ಗಂಟೆಗೆ ತಮ್ಮ ಭಾಷಣ ಪ್ರಾರಂಭ ಮಾಡಿ ೫ ಗಂಟೆಗೆ ಮುಗಿಸಿ, ಇನ್ನೂ ಮಾತನ ಡುತ್ತೇನೆಂದು ಹೇಳಿದ್ದರು. ಇವತ್ತು ಇಡೀ ದಿವಸ ಚರ್ಚೆಯಾಗಿದೆ. ಮಾನ್ಯ ಬಂಗಾರಪ್ಪನವರಿಗೆ ಬೇಕಾದಷ್ಟು ಅವಕಾಶವಿದೆ. ಸಮಯವನ್ನು ಕಸಿದುಕೊಳ್ಳತಕ್ಕ ಅವಕಾಶವಿದೆ. ನಿಮಗೆ ಆ ಕೆಪಾಸಿಟಿ ಇದೆ. ಈಗ ಕಾನೂನು ಮಂತ್ರಿಗಳು ಮಾತನಾಡಲಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರು ಸಹಕಾರ ಕೊಟ್ಟಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಮಾನ್ಯ ಮೊಯಿಲಿಯವರು, ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಯಡಿಯೂರಪ್ಪನವರು, ಹಾಗೂ ಮಾನ್ಯ ಲಕ್ಕಪ್ಪನವರು ಮಾತನಾಡಿದ್ದಾರೆ. ನಿಮ್ಮ ಪರವಾಗಿ ಮಾನ್ಯ ಬಸವಲಿಂಗಪ್ಪನವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಮಾತನಾಡಬಾರದೆಂದು ನಿಮ್ಮ ಅಭಿಪ್ರಾಯವೇ ? ಆ ಕಡೆ ಯವರು ಸಹ ನಾನು ಮಾತನಾಡಬಹುದೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ನೀವು ಮಾತನಾಡಬಾರದೆಂದು ಹೌಸ್‌ನ ಅಭಿಪ್ರಾಯವಲ್ಲ. ನೀವು ನನಗೆ ಸಹಾಯ ಮಾಡಿ.

ಶ್ರೀ ರಾಜವರ್ಧನ್.—ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರ ಪ್ರಾರಂಭ ಮಾಡಿದ್ದಾರೆ.

ಅಧ್ಯಕ್ಷರು.—ನಾನೇ ಮಾತನಾಡುತ್ತೇನೆಂದು ಹೇಳಿದ್ದರೆ, ಮಾನ್ಯ ಬಸವಲಿಂಗಪ್ಪನವರಿಗೆ ಅವಕಾಶ ಕೊಡುತ್ತಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ಕಡೆಯ ಸದಸ್ಯರುಗಳು ಸಹ ನನ್ನನ್ನು ಮಾತನಾಡಿ ಎಂದು ಹೇಳಿದ್ದಾರೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಪ್ರಪ್ರಥಮವಾಗಿ ಪೂರಕ ಬೇಡಿಕೆಗಳ ಮೇಲೆ ನನ್ನ ತಿಳುವಳಿಕೆ ಪ್ರಕಾರ ಈ ಸಭೆಯು 6 ಜನ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ, ನಾನು ವಿರೋಧ ಪಕ್ಷದಲ್ಲಿದ್ದಾಗ ಪೂರಕ ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದೆ. ಮತ್ತು ಆಯವ್ಯಯ ಪಟ್ಟಿಯ ಮೇಲೆ ಭಾಷಣ ಮಾಡುತ್ತಿದ್ದೆ. ಈ ಸರ್ಕಾರಕ್ಕೆ ಬಂದ ಮೇಲೆ ಪೂರಕ ಬೇಡಿಕೆಗಳ ಮೇಲೆ ಪ್ರತಿವರ್ಷವೂ ನಾನೇ ಉತ್ತರ ಕೊಡುತ್ತಿದ್ದೆ. ಒಂದೊಂದು ವರ್ಷ ಇದರ ಮೇಲೆ ಚರ್ಚೆ ಇಲ್ಲದೆಯೇ ಪೂರಕ ಬೇಡಿಕೆಗಳಿಗೆ ಅಂಗೀಕಾರ ಈ ಸಭೆಯಲ್ಲಿ ಸಿಕ್ಕಿದೆ. ಮಾನ್ಯ ಮೊಯಿಲಿಯವರಿಗೆ ನಾನೆ ನೆನಪು ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಹೋದವರ್ಷ ಅವರೊಬ್ಬರೇ ಮಾತನಾಡಿದ್ದರು. ನನಗೆ ನೆನಪು ಚೆನ್ನಾಗಿ ಇದೆ. ವಕೀಲರಿಗೆ ನೆನಪು ಚೆನ್ನಾಗಿ ಇರಬೇಕು. ಬುದ್ಧಿ ಇಲ್ಲದಿದ್ದರೂ ನೆನಪು ಚೆನ್ನಾಗಿ ಇರಬೇಕು. ಇದು ನನ್ನ ಅನುಭವದಿಂದ ಬಂದಿರತಕ್ಕದ್ದು.........

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಯಾವಾಗ ಗೊತ್ತಾಯಿತು?

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಮೊದಲೇ ಗೊತ್ತಾಯಿತು. ಅದಕ್ಕೋಸ್ಕರ ನಾನು ಹೇಳುತ್ತಿರುವುದು.

ಅಧ್ಯಕ್ಷರು.—ಅವರಿಗೆ ಬುದ್ಧಿ ಶಕ್ತಿ ಕಡಿಮೆ ಇದ್ದರೂ ನೆನಪಿನ ಶಕ್ತಿ ಜಾಸ್ತಿ ಇದೆ. ಅವರು ಸರ್ವಜ್ಞ ಇದ್ದ ಹಾಗೆ. ಯಾವಾಗಲೂ ಇದ್ದುದನ್ನು ಇದ್ದ ಹಾಗೆ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಊರಿನ ಪಕ್ಕದಲ್ಲಿ ಇದ್ದ ಅವನು. ಸರ್ವಜ್ಞ ಹೇಳಿದ್ದು ಏನೆಂದರೆ.........ಸರ್ವಜ್ಞನೆಂಬುವನು......

ಶ್ರೀ ಎಸ್. ಬಂಗಾರಪ್ಪ.—ಅವರ ಊರಿನ ಪಕ್ಕದಲ್ಲಿ ಸರ್ವಜ್ಞ ಒಬ್ಬನೇ ಅಲ್ಲ, ಕನಕದಾಸರೂ ಇದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ವಜ್ಞ ಹೇಳಿದ್ದಾನೆ—

ಸರ್ವಜ್ಞನೆಂಬುವನು ಗರ್ವದಿಂದಾದವನೇ?
ಸರ್ವರೊಳಗೊಂದೊಂದು ನುಡಿಗಲಿತು
ವಿದ್ಯೆಯ ಪರ್ವತವೇ ಆದ ಸರ್ವಜ್ಞ

ನಾನು ಇನ್ನೂ ಆ ಮಟ್ಟಕ್ಕೆ ಬಂದಿಲ್ಲ. ಆ ಕಡೆಗೆ ಹೋಗುತ್ತಿದ್ದೇನೆ. ನೋಡೋಣ ಹೋಗುತ್ತೇನೋ ಇಲ್ಲವೋ ಎಂದು. ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ವಿಷಯಗಳ ಮೇಲೆ ಬಹುಶಃ ಈ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಮೇಲೆ ವಿಫುಲವಾಗಿ ತಮ್ಮ ಮಾತಿನ, ಅನುಭವದ ಬೆಳಕನ್ನು ಚೆಲ್ಲಿದ್ದಾರೆ ಇವುಗಳನ್ನೆಲ್ಲಾ ನಾವು ನೆನಪಿನಲ್ಲಿಟ್ಟುಕೊಂಡಿರುತ್ತೇವೆ ಎಂದು ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಪೂರಕ ಬೇಡಿಕೆಗಳ ಮೇಲೆ ಮಾತನಾಡತಕ್ಕಂಥ ಸಮಯದಲ್ಲಿ ಕೆಲವು ನಿಬಂಧನೆಗಳು ಇವೆ ಈಗಾಗಲೇ ಇವುಗಳ ಬಗ್ಗೆ ಸನ್ಮಾನ್ಯ ಮೊಯಿಲಿಯವರಿಗೆ ಭಾಗಶಃ ಉತ್ತರ ಹೇಳುವಾಗ ಹೇಳಿದ್ದೇನೆ. ಈಗ ಅನುಪೂರಕ ಬೇಡಿಕೆಗಳ ಒಟ್ಟು ಸೀಮಾರೇಖೆ ಏನು? ಎಷ್ಟು ಅನುಪೂರಕ ಬೇಡಿಕೆಗಳಿಗೆ ಸಭೆಯ ಅನುದಾನ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ. Of the total sum of Rs 23.11 Crores included in the supplementary estimates, a sum of Rs. 7 90 Crores is from the Central Govt. and a sum of Rs. 3.13 Crores is for accounting adjustments. The net outgo from the general revenue is Rs. 12.07 Crores only. ಒಟ್ಟು ಖರ್ಚಾಗತಕ್ಕಂಥಾದ್ದು 12 ಕೋಟಿ 07 ಲಕ್ಷ ರೂಪಾಯಿ

ಅದು ಸಪ್ಲಿಮೆಂಟರಿ ಎಕ್ಸಪೆಂಡಿಚರ್ ತೋರಿಸಿರುವುದು ಆದರೆ ಸರ್ಕಾರ ಖರ್ಚು ಮಾಡಿರತಕ್ಕಂಥಾದ್ದು ೧೨ ಕೋಟಿ ೭ ಸಾವಿರ ರೂಪಾಯಿಗಳು ಮಾತ್ರ. ಈ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳ ಬೇಕೆಂದು ಸನ್ಮಾನ್ಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಈಗಾಗಲೇ ಈ ಸಭೆ ಆಯವ್ಯಯ ಪಟ್ಟಿಗೆ ಮಂಜೂರಾತಿಯನ್ನು ಕೊಟ್ಟಿದೆ. ಆಯವ್ಯಯ ಪಟ್ಟಿ ಪ್ರಕಾರ ಒಟ್ಟು ಖರ್ಚಾಗ ತಕ್ಕದ್ದು ೪೪೩೦ ಕೋಟಿ ರೂಪಾಯಿ. ಇದರಲ್ಲಿ ೧೨ ಕೋಟಿ ೭ ಸಾವಿರ ಎಷ್ಟು ಭಾಗ ಆಗುತ್ತದೆ. ಎಂದರೆ ೦.೨೭ ಪರ್ಸೆಂಟ್ ಮಾತ್ರ ಆಗುತ್ತದೆ. ಅತ್ಯಂತ ಕಡಿಮೆ ಪ್ರಮಾಣದ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಹಣ ಖರ್ಚಾಗತಕ್ಕದ್ದನ್ನು ತೋರಿಸಿದ್ದೇವೆ. ಇದು ಬಹಳ ಎಚ್ಚರಿಕೆಯಿಂದ, ವಿಚಕ್ಷಣತೆಯಿಂದ ಸರ್ಕಾರ ಆರ್ಥಿಕ ಪರಿಸ್ಥಿತಿಯನ್ನು ನಡೆಸಿಕೊಂಡು ಹೋಗುತ್ತಿದೆ ಎನ್ನುವುದಕ್ಕೆ ಇದು ಒಂದು ಕುರುಹು. ಅದಕ್ಕೆ ಗುರುತು ಬೇಕಾದರೆ, ಮಾಹಿತಿ ಬೇಕಾದರೆ ಈ ಒಂದು ಅಂಶ ಸಾಕು ಎಂದು ಬಹಳ ಸೂಚ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಪ್ಲಾನ್ ಎಕ್ಸ್‌ಪೆಂಡಿಚರ್ ೧೮ ಕೋಟಿ ೪೪ ಲಕ್ಷ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ೪ ಕೋಟಿ ೬೭ ಲಕ್ಷ ರೂಪಾಯಿಗಳು. ಇದೂ ಕೂಡ ಕಡಿಮೆ ಪ್ರಮಾಣದ್ದು. ಒಂದು ಅಂಶವನ್ನು ಮಾನ್ಯ ಸದಸ್ಯರು ನೆನಪಿಗೆ ತಂದುಕೊಳ್ಳ ಬೇಕೆಂದು ಪ್ರಾಸ್ತಾವಿಕವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅನುಪೂರಕ ಬೇಡಿಕೆಗಳ ಮೇಲೆ ಚರ್ಚೆ ಮಾಡತಕ್ಕಂಥ ಸಮಯದಲ್ಲಿ ಈಗಾಗಲೇ ಪಾರ್ಲಿಮೆಂಟ್‌ನಲ್ಲಿ ಹೇಳಿರುವ ಹಾಗೆ, ಆಯಾ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ತಮ್ಮ ಸಲಹೆಗಳನ್ನು ಹೇಳಬೇಕೇ ಹೊರತು, ಒಟ್ಟು ಸರ್ಕಾರದ ಆರ್ಥಿಕ ಪರಿಸ್ಥಿತಿ ಬಗ್ಗೆ, ಸರ್ಕಾರ ಮಾಡದೇ ಇರತಕ್ಕ ಕೆಲಸಗಳ ಬಗ್ಗೆ, ಮಾಡಿರತಕ್ಕ ಕೆಲಸಗಳ ಬಗ್ಗೆ, ಮಾಡಿರು ವಂಥ ಕೆಲಸಗಳು ಸರಿಯಾಗಿರುವುದಿಲ್ಲ ಎನ್ನುವ ಬಗ್ಗೆ ಪೂರಕ ಬೇಡಿಕೆಗಳ ಮೇಲೆ ಮಾತನಾಡುವಾಗ ಈ ವಿಷಯಗಳನ್ನು ತರಬಾರದು ಎಂದು ಶಕ್ದರ್ ಅಂಡ್ ಕೌಲ್‌ನಲ್ಲಿ ಹೇಳಿದ್ದಾರೆ. ಮಾನ್ಯ ಮೊಯಿಲಿ ಯವರೂ ಕೂಡ ಹೇಳಿದ್ದಾರೆ. ನಾನು ಹಿಂದೆ ವಿರೋಧ ಪಕ್ಷದಲ್ಲಿದ್ದಾಗ, ಅವರು ಅರ್ಥ ಮಂತ್ರಿ ಗಳಾಗಿದ್ದರು. ಅನುಪೂರಕ ಬೇಡಿಕೆಗಳಲ್ಲಿ ೨-೩ ಮುಖ್ಯವಾದ ಅಂಶಗಳನ್ನು ಸೇರಿಸಬೇಕೆಂದು ಹೇಳಿದ್ದೆ. ನ್ಯೂ ಸರ್ವೀಸಸ್ ಬಗ್ಗೆ, ಎಲ್ಲವನ್ನೂ, ಎಲ್ಲ ಸಮಯದಲ್ಲೂ ಗಮನದಲ್ಲಿಟ್ಟುಕೊಂಡು ಹಣವನ್ನು ಒದಗಿಸಿಕೊಳ್ಳುವುದಕ್ಕಾಗುವುದಿಲ್ಲ. ಹೊಸ ವಿಷಯಗಳಿಗೆ ಹಣ ಖರ್ಚು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ ೨೦೫ (೧)ರಲ್ಲಿ ಹೊಸ ವಿಷಯಗಳಿಗೆ ಖರ್ಚಾಗ ತಕ್ಕ ಸಂದರ್ಭದಲ್ಲಿ ಅನುಪೂರಕ ಹಣವನ್ನು ಶಾಸನಸಭೆಗಳಿಂದ ಮಂಜೂರಾತಿ ಪಡೆಯುವುದಕ್ಕೆ ಅವಕಾಶ ಇದೆ. ಅದಕ್ಕೋಸ್ಕರ ಇದನ್ನು ಸೇರಿಸಿದ್ದೇವೆ. ಈ ಅನುಪೂರಕ ಹಣವನ್ನು ಹೇಗೆ ಖರ್ಚು ಮಾಡಬೇಕೆಂಬ ಬಗ್ಗೆ ನಾನು ೧೯೭೮ರಲ್ಲಿ ವಿರೋಧ ಪಕ್ಷದ ಉಪನಾಯಕನಾಗಿದ್ದಾಗ ಹೇಳಿದ್ದೆ. ಇದರ ಮೇಲೆ ಕಡಿವಾಣ ಹಾಕತಕ್ಕಂಥ ಕೆಲವು ಸೂಚನೆಗಳನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಕೊಟ್ಟಿ ದ್ದಾರೆ, ಆ ಪ್ರಕಾರ ಮಾಡಬೇಕಾಗುತ್ತದೆ. ಇದರಿಂದ ಹಣ ಎಲ್ಲೋ ಹೋಗುತ್ತದೆ ಎನ್ನುವ ಸಂಶಯ ವಿಲ್ಲ. ಎಲ್ಲದಕ್ಕೂ ಕಡಿವಾಣ ಇದೆ. ಸೂತ್ರಗಳ ಸೀಮಾರೇಖೆಯೊಳಗೇ ಖರ್ಚಾಗಬೇಕು. ಇದು ಒಂದು ಅಂಶ. ಇನ್ನು ಅಡ್ಜಸ್ಟಬಲ್ ಆಫ್ ಅಕೌಂಟ್. ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇಲಾಖೆಯವರೈ ಹಣವನ್ನು ಒಂದು ಹೆಡ್‌ನಿಂದ ಇನ್ನೊಂದು ಹೆಡ್‌ಗೆ ಬದಲಾಯಿಸುವ ಅವಕಾಶ ಇತ್ತು. ಈ ರೀತಿ ಬದಲಾವಣೆ ಮಾಡಿಕೊಳ್ಳುವುದಕ್ಕೆ ಅಡ್ಡಿ ಇರಲಿಲ್ಲ. ಆದರೆ ಸುಪ್ರೀಂ ಕೋರ್ಟ್ ತೀರ್ಮಾನದಿಂದ ಒಂದು ಹೆಡ್‌ನಿಂದ ಇನ್ನೊಂದು ಹೆಡ್‌ಗೆ ಈ ರೀತಿ ಬದಲಾಯಿಸುವ ಅವಕಾಶ ಇಲ್ಲ.

ಇನ್ನು ಸಾಮಾನ್ಯವಾಗಿ ನಾವು ಎಲ್ಲಿ ಹಣ ಖರ್ಚು ಮಾಡಿರಲಿಲ್ಲ ಅದಕ್ಕೆ ಕಾರಣಗಳನ್ನು ಕೊಟ್ಟಿದ್ದೇವೆ. ಏಕೆ ಖರ್ಚು ಮಾಡಲಿಲ್ಲ ಎನ್ನುವ ಬಗ್ಗೆಯೂ ಕಾರಣಗಳನ್ನು ಕೊಟ್ಟಿದ್ದೇವೆ. ಒಂದೊಂದು ಡಿಮ್ಯಾಂಡ್‌ಗಳ ಬಗ್ಗೆಯೂ ಪೂರಕವಾದ ಟಿಪ್ಪಣಿಗಳನ್ನು ಕೊಟಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರು, ಕೆಲವು ಉಲ್ಲೇಖಗಳನ್ನು ಮಾಡಿದ್ದಾರೆ. ಮಾನ್ಯ ಭೂಪತಿಯವರು ಆ ಶಾಲೆಗೆ ಏಕೆ ಹಣ ಕೊಟ್ಟಿದ್ದೀರಿ ಎಂದು ಕೇಳಿದರು ಇಂತಹ ಅನೇಕ ಸಂಸ್ಥೆಗಳಿಗೆ ಅನುದಾನವಾಗಿ ಕೊಡುತ್ತಾ ಬಂದಿದ್ದೇವೆ. ಶತಮಾನೋತ್ಸವ ಸಮಯದಲ್ಲಿ, ರಾಜ್ಯೋತ್ಸವ ಸಮಯದಲ್ಲಿ, ಸುವರ್ಣ ಮಹೋತ್ಸವ ಸಮಯದಲ್ಲಿ ಮತ್ತು ವಜ್ರಮಹೋತ್ಸವ ಸಮಯದಲ್ಲಿ ಕೊಟ್ಟಿದ್ದೇವೆ. ಅದೊಂದು ಹೆಸರಾಂತ ವಿದ್ಯಾಶಾಲೆ. ಇದರ ಬಗ್ಗೆ ಈಗಾಗಲೇ ಮಾನ್ಯ ದೊಡ್ಡಮೇಟಿಯವರು ಉತ್ತರ ಕೊಟ್ಟಿ ದ್ದಾರೆ. ಇದಲ್ಲದೆ ಬಾರ್ ಅಸೋಸಿಯೇಷನ್‌ಗೆ ಎಷ್ಟೋ ಸಲ ಹಣ ಕೊಟ್ಟಿದ್ದೇವೆ. ಆದುದರಿಂದ ಇದರ ಬಗ್ಗೆ ಸಂಶಯ ಬರುವುದಕ್ಕೆ ಅವಕಾಶ ಇಲ್ಲ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಹತ್ತಿರ ಇದ್ದರೆ ಕೊಡಿ. ಆದರೆ ಈಗಾಗಲೇ ನಿಮ್ಮ ಆರ್ಥಿಕ ಪರಿಸ್ಥಿತಿ ದಿವಾಳಿ ಎದ್ದುಹೋಗಿದೆ. ಇಷ್ಟೊಂದು ಹಣವನ್ನು ಎಲ್ಲಿಂದ ತಂದುಕೊಡುತ್ತೀರಿ...

ಶ್ರೀ ಎ. ಲಕ್ಷ್ಮೀಸಾಗರ್.—ಇದು ನಿಮ್ಮ ಮಾನಸಿಕ ಭ್ರಮಣೆ. ನೀವು ಎಲ್ಲಿ ಹೋದರೂ ಇದೇ ದೆವ್ವ ನಿಮ್ಮನ್ನು ಪೀಡಿಸುತ್ತದೆ. ಸರ್ಕಾರಕ್ಕೆ ಯಾವ ವಿಧವಾದ ತೊಂದರೆ ಇಲ್ಲ. ಈ ವಿಚಾರದಲ್ಲಿ ಸರ್ಕಾರದವರು ಅಚ್ಚುಹಾಕಿಸಿ, ತಿಳುವಳಿಕೆಯ ಪತ್ರವನ್ನು ಸದಸ್ಯರಿಗೆಲ್ಲಾ ಕೊಟ್ಟಿದೆ. ೪ ವರ್ಷಗಳಿಂದ ಸತತ ಬರಗಾಲ ಬಂದ ಕಾರಣ ವಿಶೇಷವಾಗಿ ಬರಗಾಲದ ಪರಿಸ್ಥಿತಿ ಎದುರಿಸುವುದಕ್ಕೆ ಖರ್ಚು ಮಾಡುವ ಕಾರಣ ಕೆಲವು ತೊಂದರೆಗಳು ಇವೆ ಎನ್ನುವುದನ್ನು ಈ ಸಭೆಯ ಮಾನ್ಯ ಸದಸ್ಯರಿಗೆ ತಿಳಿಸಿದ್ದೇವೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಈ ನಿಮ್ಮ ವಾದ ಏನಾಗುತ್ತದೆ ಎಂದರೆ, ಪ್ರತಿಯೊಂದಕ್ಕೂ ದುಡ್ಡು ಇಲ್ಲ ಎಂದು ಹೇಳುತ್ತಿದ್ದೀರಿ. ಈ ವಾದದಲ್ಲಿ ಏನೂ ಹುರುಳಿಲ್ಲ. ಈ ನಿಮ್ಮ ವಾದವೆಲ್ಲಾ ಶುಷ್ಕವೇದಾಂತದ ಪರಮಾವಧಿ ಎಂದು ಸೂಚ್ಯವಾಗಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

5-30 P.M.

ಶ್ರೀ ಬಿ. ಬಸವಲಿಂಗಪ್ಪ.—ಜನ ಈ ಅಪ್ಪನ ಮಾತು ಕೇಳಿದರೆ ನಗುತ್ತಾರೆ. ಆಗಿರುವುದೇ ಒಂದು ಹೇಳುವುದು ಇನ್ನೊಂದು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ನನ್ನ ಕಡೆ ನೋಡಿ, ನಮ್ಮ ಪಕ್ಷದ ಕಡೆ ನೋಡಿ ಜನ ಓಟು ಕೊಟ್ಟಿದ್ದಾರೆಯೇ ಹೊರತು, ಸನ್ಮಾನ್ಯ ಬಂಗಾರಪ್ಪನವರ ಕಡೆ ನೋಡಿ ಅವರಿಗೆ ಓಟು ಕೊಡಲಿಲ್ಲ. ಇಷ್ಟೇ ವ್ಯತ್ಯಾಸ, ಇದನ್ನು ಜನರಿಗೇ ಬಿಡೋಣ. ನಮ್ಮ ಅಪ್ಪಂದಿರು ಹೊರಗಡೆ ಇದ್ದಾರೆ, ಅವರಿಗೇ ಇದನ್ನು ಬಿಡೋಣ...

ಶ್ರೀ ಬಿ. ಲಕ್ಕಪ್ಪ.—ಇವರು ಆಗಲೇ ತೀರ್ಮಾನ ಮಾಡಿಕೊಂಡು ಬಿಟ್ಟಿದ್ದಾರೆ ಎಂದು ಕಾಣುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಲಕ್ಕಪ್ಪನವರೇ, ಅವಸರ ಮಾಡಬೇಡಿ, ಚಿಕ್ಕನಾಯಕನಹಳ್ಳಿ ಪ್ರಯೋಗ ಇದೆಯಲ್ಲಾ, ಅದು ಯಾರಿಗೆ ಸಿಗುತ್ತದೆ ನೋಡೋಣ, ಅದು ಕೇವಲ ನಮಗೇ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಬಿ. ಲಕ್ಕಪ್ಪ.—ನಿಮಗೇನು ಸಿಗುತ್ತದೆ ಎಂದು ಮುಂದೆ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಜನಗಳಿಗೇ ಬಿಡೋಣ, ಜನರ ಅಭಿಮತದಲ್ಲಿ ಸಂಪೂರ್ಣವಾದ ನಂಬಿಕೆಯನ್ನು ಇಟ್ಟಿರುವವರು ನಾವು. ಜನಮತದಲ್ಲಿ ನಂಬಿಕೆಯನ್ನು ಸಂಪೂರ್ಣವಾಗಿ ಹತ ಮಾಡತಕ್ಕಂಥ, ಭೂಮಿಗೆ ತುಳಿಯತಕ್ಕಂಥ ಪ್ರಯತ್ನ ಮಾಡಿದವರು ನಿಮ್ಮ ಪಕ್ಷದವರು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸುಮ್ಮನೆ ಆನ್‌ನೆಸ್‌ಸರಿಯಾಗಿ ಡಿಫೆಂಡ್ ಮಾಡಬೇಡಿ. ನಿಮ್ಮ ಪರಿಸ್ಥಿತಿ ಹೇಗಿದೆ ಎಂದರೆ......

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಹಣೆಬರಹ ನಮಗೆ ಬಿಡಿ, ನಿಮ್ಮ ಜಾತಕ ಸರಿಯಾಗಿ ನೋಡಿಕೊಳ್ಳಿ.

ಅಧ್ಯಕ್ಷರು.—ನಿಮ್ಮ ನಿಮ್ಮ ವಿಚಾರ ನೀವು ಮಾಡಿ, ಬೇರೆಯವರ ವಿಚಾರ ಮಾಡಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರೇ ಇಲ್ಲವೇ ಎಂಬುದು ನಿಮ್ಮ ನಡತೆಯಿಂದ ಗೊತ್ತಾಗುತ್ತದೆ. ೧೯೬೭ನೇ ಇಸವಿಯಿಂದ ಚುನಾವಣೆಯೇ ನಡೆದಿಲ್ಲ, ನಮಗೆ ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಚುನಾವಣೆಯ ಬಗ್ಗೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಪಕ್ಷದ ಚುನಾವಣೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ನಿಮ್ಮದು ಕೇವಲ ಅರ್ಧಪರ್ಸೆಂಟ್ ಇದೆ ಎಲ್ಲಾ ಆಗಿಹೋಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಬಾಯಿಬಿಟ್ಟರೆ ಬಣ್ಣಗೇಡು ಎಂದು ಗಾದೆ ಇದೆ, ಬಾಯಿಬಿಟ್ಟು ಬಣ್ಣ ಕೆಡಿಸಿಕೊಳ್ಳಬೇಡಿ ಎಂದು ಮಾತು ಇದೆ, ಆದನ್ನು ಮಾಡಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಲಕ್ಷ್ಮೀಸಾಗರ್‌ರವರೇ, ಈ ಕೆಲಸ ಯಾರು ಮಾಡಿದವರು ನಿಮ್ಮ ಪಕ್ಷದ ಅಧ್ಯಕ್ಷರ ಚುನಾವಣೆಯಲ್ಲಿ, ನಿಮ್ಮ ಪಕ್ಷದ ಅಧ್ಯಕ್ಷರ ವಿರುದ್ಧ ಸ್ಪರ್ಧಿಸಿದ್ದ ಅಗ್ನಿವೇಷಾ ರವರನ್ನು ಪಾರ್ಟಿಯಿಂದಲೇ ತೆಗೆದುಹಾಕಿದಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಬೇರೆ ವಿಚಾರ, ನೀವು ಚುನಾವಣೆಯನ್ನೇ ನಡೆಸಲಿಲ್ಲವಲ್ಲಾ ? ಚುನಾವಣೆ ನಡೆಸುವುದು ನಿಮ್ಮ ಜಾತಕದಲ್ಲೇ ಬರೆದಿಲ್ಲ ನಿಮ್ಮ ಹಣೆಯಲ್ಲೇ ಬರೆದಿಲ್ಲ. ೧೯೬೯ ರಿಂದ ನಾಮನಿದೇಶನ, ನಾಮನಿರ್ದೇಶನ ಎಂದು ನಡೆದುಕೊಂಡು ಬರುತ್ತಿದೆ. ನಾನು ವಿಚಾರ ಮಾತ ನಾಡುವುದು ಬೇಡ ಎಂದಿದ್ದೆ, ಸನ್ಮಾನ್ಯ ಖರ್ಗೆಯವರು ಮಾತನಾಡದೇ ಇದ್ದಿದ್ದರೆ ನಾನು ನನ್ನ ವಿಚಾರಕ್ಕೆ ಸೀಮಿತವಾಗಿರುತ್ತಿದ್ದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾಲ್ಲೂಕ್ ಬೋರ್ಡ್, ಮುನಿಸಿಪಲ್ ಎಲೆಕ್ಷನ್ ೧೯೭೮ರಲ್ಲಿ ನಾವು ನಡೆಸಲಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ೧೯೭೨ ರಿಂದ ೮೩ ರವರೆಗೆ ಲೋಕಲ್ ಅಥಾರಿಟೀಸ್ ಚುನಾವಣೆಯನ್ನು ನಡೆಸದೇ ಸಂಪೂರ್ಣವಾಗಿ ನಾಶ ಮಾಡಿದವರು ನೀವು. ೭೨ ರಿಂದ ೮೩ನೇ ಇಸವಿ ವರೆಗಿನ ಲೋಕಲ್ ಅಥಾರಿಟೀಸ್ ಚುನಾವಣೆಗಳನ್ನು ಸಂಪೂರ್ಣವಾಗಿ ನಾಶ ಮಾಡಿದವರು ನೀವು. ನಾನೇ ಬೆಂಗಳೂರಿನಲ್ಲಿ ನೋಡಲಿಲ್ಲವೇ ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೧೯೭೮ ರಲ್ಲಿ ತಾಲ್ಲೂಕ್ ಬೋರ್ಡ್, ಮುನಿಸಿಪಲ್ ಎಲೆಕ್ಷನ ನಡೆಸಿದ್ದೇವೆ, ಈ ಚುನಾವಣೆಗಳನ್ನು ನಡೆಸಿಲ್ಲ ಎಂದರೆ ನಾನು ರಾಜೀನಾಮೆ ಕೊಡುತ್ತೇನೆ. ೭೮ ರಲ್ಲಿ ತಾಲ್ಲೂಕ್ ಬೋರ್ಡ್ ಚುನಾವಣೆಯಾಗಿದೆ, ಮುನಿಸಿಪಲ್ ಚುನಾವಣೆಯಾಗಿದೆ, ಪಂಚಾಯತ್ ಚುನಾವಣೆಯಾಗಿದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಹೇಳುತ್ತಿರುವುದು ಕಾರ್ಪೊರೇಷನ್ ಎಲೆಕ್ಷನ್ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಮುನಿಸಿಪಲ್ ಕಾರ್ಪೊರೇಷನ್ ಎಲೆಕ್ಷನ್ ವಿಚಾರ ನಾನು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಚುನಾವಣೆ ಎಂದು ಹೇಳಿದರೆ ಕಾರ್ಪೊರೇಷನ್ ಚುನಾವಣೆ. ಬೆಂಗಳೂರು ಬಿಟ್ಟು ಬೇರೆ ಕಡೆ ಬರುವುದಿಲ್ಲ ಬಾವಿಯೊಳಗಿನ ಕಪ್ಪೆಯ ಹಾಗೆ ಮಾತನಾಡಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಬಾವಿಯೊಳಗಿನ ಕಪ್ಪೆ, ಬಾವಿಯಲ್ಲಿ ಚೆನ್ನಾಗಿ ಈಜುವುದನ್ನು ಕಲಿತಿದ್ದೇನೆ. ನೀವು ಬಾವಿಯ ಒಳಗೂ ಇರುತ್ತೀರಿ, ಚರಂಡಿಯ ಒಳಗೂ ಇರುತ್ತೀರಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾತನಾಡುವಾಗ ಸ್ವಲ್ಪವಾದರೂ ಸತ್ಯ ಮಾತನಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮೊಯಿಲಿಯವರು ಎಲ್ಲಾ ಸತ್ಯವನ್ನೇ ಮಾತನಾಡಿದರು...

ಶ್ರೀ ಎಂ ವೀರಪ್ಪ ಮೊಯಿಲಿ.—ತಾವು ಇವತ್ತು ಏಕೆ ಇಷ್ಟೊಂದು ಏರಿದ ಧ್ವನಿಯಲ್ಲಿ ಮಾತನಾಡುತ್ತಿದ್ದಿರೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. ನಿಮ್ಮ ಪಕ್ಷದ ಧೋರಣೆ ನೋಡಿ ನಾನು ಆ ರೀತಿ ಮಾತನಾಡ ಬೇಕಾಗಿದೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಭಾಷಣ ಮಾಡುವಾಗ ನಾನು ಏನನ್ನೂ ಮಾತನಾಡಲಿಲ್ಲ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಭಾಷಣ ಮಾಡುವಾಗ ಎಂತೆಂತಹ ಪದಗಳನ್ನು ಬಳಸಿದರು

ಎನ್ನುವುದನ್ನು ತಾವೇ ಕೇಳಿದ್ದೀರಿ. ಆಗ ನಾನು ಏನೂ ಮಾತನಾಡಲಿಲ್ಲ. ಸನ್ಮಾನ್ಯ ವೀರಪ್ಪ ಮೊಯಿಲಿಯವರು ಪುಸ್ತಕವನ್ನು ಬಿಸಾಕಿದರು. ಆದ್ದರಿಂದ ನಾನು ಸಹ ಸ್ವಲ್ಪ ರಸವತ್ತಾಗಿ ಉತ್ತರ ಕೊಡುತ್ತೇವೆ, ಸ್ವಲ್ಪ ಚಿತ್ಕಾರರಾಗಿ ಕೇಳಿ. ಸೂಕ್ಷ್ಮವಾಗಿ ರಸವತ್ತಾಗಿ ಉತ್ತರ ಕೊಡುತ್ತೇನೆ ದಯವಿಟ್ಟು ಸಮಾಧಾನದಿಂದ ಕೇಳಿ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಲಕ್ಕಪ್ಪನವರು ಮಾತನಾಡುತ್ತಾ ಕೋಕನೆಟ್ ವಿಚಾರ ಪ್ರಸ್ತಾಪ ಮಾಡಿದರು. ಆದರೆ ಅಲ್ಲಿಗೆ ಹಣ ಕೊಟ್ಟಿರುವುದು ನ್ಯೂ ಸರ್ವೀಸ್‌ನಲ್ಲಿ ಸಾಂಬಾರ್ ಪದಾರ್ಥಗಳನ್ನು ಬೆಳೆಸುವುದಕ್ಕೆ ಹಣ ಕೊಟ್ಟಿರುವುದು. ಇನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಎಸ್.ಸಿ.ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಖರ್ಚು ಮಾಡಬೇಕಾಗಿದ್ದ ಹಣ ಏತಕ್ಕೆ ಖರ್ಚು ಮಾಡಿಲ್ಲವೆಂದು ಕೇಳಿದರು, ಆ ಬಗ್ಗೆ ನಾನು ಆಗಲೇ ಹೇಳಿದೆ. ಅದೇನೆಂದರೆ ಸುಮಾರು ೩೮.೪೩ ಲಕ್ಷ ರೂಪಾಯಿಗಳ ಬ್ಯಾಲೆನ್ಸ್ ಹಣ ೧೯೮೫-೮೬ನೇ ಸಾಲಿನದ್ದು ದಿನಾಂಕ ೪-೨-೧೯೮೭ರಲ್ಲಿ ಬಂದಿದೆ. ಆದ್ದರಿಂದ ಸ್ವಲ್ಪ ನಿಧಾನವಾಯಿತು. ಆ ಹಣವನ್ನು ನಾವು ಅಕೌಂಟ್‌ಗೆ ತೆಗೆದುಕೊಂಡು ಮುಂದಿನ ವರ್ಷದಿಂದ ಖರ್ಚು ಮಾಡುತ್ತೇವೆಂದು ಹೇಳಬಯಸುತ್ತೇನೆ, ಆ ಮೇಲೆ ಎಲ್ಲಾ ಮಾನ್ಯ ಸದಸ್ಯರು ಬರಗಾಲದ ಬಗ್ಗೆ ಮತ್ತು ಜಿಲ್ಲಾ ಪರಿಷತ್ತುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಜಿಲ್ಲಾ ಪರಿಷತ್ತುಗಳಿಗೆ ಮತ್ತು ಬರಗಾಲ ಪರಿಸ್ಥಿತಿ ನಿವಾರಣೆಗೆ ಏನೇನೂ ಹಣ ಖರ್ಚು ಮಾಡಿಲ್ಲವೆನ್ನುವ ಮಾತನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಬರಗಾಲದಿಂದ ಜನರಿಗೆ ಗ್ರಾಮಾಂತರ ಪ್ರದೇಶದಲ್ಲಿ ತೊಂದರೆ ಇದೆ. ಇಲ್ಲವೆಂದು ನಾನು ಹೇಳುತ್ತಿಲ್ಲ, ಆದರೆ ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ. ಈ ವಿಷಯವನ್ನು ಎಲ್ಲಾ ಮಾನ್ಯ ಸದಸ್ಯರು ತಿಳಿದುಕೊಳ್ಳಬಹುದು, ಆದರೆ ನಾವು ಏನೇನು ಕೆಲಸ ಕಾರ್ಯಗಳನ್ನು ಬರಗಾಲ ನಿವಾರಣೆಗಾಗಿ ಹಮ್ಮಿಕೊಂಡಿದ್ದೇವೆ ಎನ್ನುವುದನ್ನು ಸಹ ಸ್ವಲ್ಪ ನೋಡಬೇಕಾಗುತ್ತದೆ. ಅದು ಬಿಟ್ಟು ಏನೇನೂ ಮಾಡಿಲ್ಲ, ಎಂದು ಹೇಳತಕ್ಕಂಥದ್ದರಲ್ಲಿ ಸ್ವಲ್ಪವೂ ಅರ್ಥವಿಲ್ಲ. ಈ ಬರಗಾಲ ಪರಿಸ್ಥಿತಿ ನಿವಾರಣೆ ಸಲುವಾಗಿ ನಾವು ಸುಮಾರು ೧೫ ಕೋಟಿ ೬೩ ಲಕ್ಷ ರೂಪಾಯಿಗಳ ಹಣವನ್ನು ರಿಲೀಸ್ ಮಾಡಿದ್ದೇವೆ. ಇದರಲ್ಲಿ ನೀರಿನ ಸಾಗಾಣಿಕೆಗಾಗಿ ಸುಮಾರು ೧೧೫ ಲಕ್ಷ ರೂಪಾಯಿಗಳು, ಮೇವು ಸಾಗಾಣಿಕೆಗಾಗಿ ಸುಮಾರು ೬೫ ಲಕ್ಷ ರೂಪಾಯಿಗಳು, ಗ್ರಾಮೀಣ ನೀರು ಸರಬರಾಜು ಯೋಜನೆಗೆ ಸುಮಾರು ೫ ಲಕ್ಷ ರೂಪಾಯಿಗಳು, ಅರ್ಬನ್ ವಾಟರ್ ಸಪ್ಲೈಗೆ ಸುಮಾರು ೨೭೫ ಲಕ್ಷ ರೂಪಾಯಿಗಳು ಎಂಪ್ಲಾಯ್‌ಮೆಂಟ್ಸ್ ಅಂಡ್ ವರ್ಕ್ಸ್‌ಗೆ ಸುಮಾರು ೪೦೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ರೆವಿನ್ಯೂ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಆ ಹೇಳಿಕೆಯಲ್ಲಿ ಹೇಳಿದ್ದಾರೆ ಸುಮಾರು ಎಂಟೂವರೆ ಕೋಟಿ ರೂಪಾಯಿಗಳನ್ನು ಮಾತ್ರ ನಾವು ಬರಗಾಲ ಪರಿಹಾರಕ್ಕೆ ಬಿಡುಗಡೆ ಮಾಡಿದ್ದೇವೆಂದು. ಆದರೆ ಮಾನ್ಯ ಕಾನೂನು ಸಚಿವರು ಈಗ ೧೫ ಕೋಟಿ ರೂಪಾಯಿಗಳೆಂದು ಹೇಳುತ್ತಿದ್ದಾರೆ. ೬ ಕೋಟಿ ರೂಪಾಯಿಗಳು ಮಾತ್ರ ಬಡ್ಜೆಟ್ ಪ್ರಾವಿಜನ್‌ನಲ್ಲಿರುವುದು ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ೨ಕೋಟಿ ೮ ಸಾವಿರ ರೂಪಾಯಿಗಳನ್ನು ಹೆಚ್ಚುವರಿ ಖರ್ಚು ಮಾಡಿರುವುದು ಇದೆ. ಇದು on record. It should have sound a place in the supplementary demands or something must have come from the government of India ಇನ್ನುಳಿದ ೭ ಕೋಟಿ ರೂಪಾಯಿಗಳು ಗೌರ್ನಮೆಂಟ್ ಆಫ್ ಇಂಡಿಯಾದಿಂದ ಎಪ್ರಿಲ್‌ನಲ್ಲಿ ಬಂದಿದ್ದರೆ ಬಂದಿರಬೇಕು ಸಪ್ಲಿಮೆಂಟರಿ ಬಜೆಟ್‌ನಲ್ಲಿ ೭ ಕೋಟಿ ರೂಪಾಯಿ ಕೊಟ್ಟಿದೆ ಇಲ್ಲದಿದ್ದರೆ ಅದು ಆಕಾಶದಿಂದ ಉದುರಿ ಬಿದ್ದಿತ್ತೆ? ಬೇರೆ ಎಲ್ಲಿಂದ ಬರಬೇಕು? ಯಾವುದಕ್ಕೆ ಖರ್ಚು ಮಾಡಿರಲಿ, ಅದನ್ನು ಬರಗಾಲಕ್ಕಾಗಿ ಖರ್ಚು ಮಾಡಲಾಗಿದೆಯೆಂದು ಹೇಳಿರುವುದು ನಿಮ್ಮ ರೂಢಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎನ್.ಆರ್.ಇ.ಪಿ ಗೆ ಮತ್ತು ಆರ್.ಎಲ್.ಇ.ಜಿ ಪಿ.ಗೆ ಬಿಡುಗಡೆ ಮಾಡಿದ್ದು ಬೇರೆ. ಇವತ್ತು ಸ್ಕೇರ್‌ಸಿಟಿ ಸಲುವಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಒಂದು ಸಾರಿ ೭ ಕೋಟಿ ೩೪ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೊಂದು ಸಲ ೮ ಕೋಟಿ ೫೪ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಒಟ್ಟು ೧೫ ಕೋಟಿ ಚಿಲ್ಲರೆ ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಆರ್ಡರ್ ಮಾಡಲಾಗಿದೆ, ಜೊತೆಗೆ ಹಣವನ್ನು ಸಹ ಬಿಡುಗಡೆ ಮಾಡಲಾಗಿದೆ. ಎನ್.ಆರ್.ಇ.ಪಿ.ನಲ್ಲಿ ಖರ್ಚು ಮಾಡುವುದಕ್ಕೆ ನಾವು ೬ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ

ನಾವು ೬ ಕೋಟಿ ರೂಪಾಯಿ ಕೊಟ್ಟಿದ್ದರಿಂದ ಅದಕ್ಕೆ ಕೇಂದ್ರದವರು ೩ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು. ಇನ್ನೂ ಹೆಚ್ಚಿನ ಹಣವನ್ನು ಕೇಂದ್ರದಿಂದ ಕೇಳಿದ್ದೇವೆ. ಇನ್ನು ಸ್ವಲ್ಪ ದಿನಗಳಲ್ಲಿ ಹೆಚ್ಚಿನ ಹಣ ಬರಬಹುದು. ಬರಗಾಲಕ್ಕಾಗಿ ಬಿಡುಗಡೆ ಮಾಡಿದ್ದು ಒಟ್ಟು ೧೫ ಕೋಟಿ ೭೦ ಲಕ್ಷ ಅಥವಾ ೮೦ ಲಕ್ಷ ಆಗಿರಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಬರಗಾಲಕ್ಕೆ ಹಣ ಸಾಲದಾಗಿರುವುದರಿಂದ ಇನ್ನೂ ಜಾಸ್ತಿ ಕೊಡಬೇಕೆಂದು ಕೇಳಿದರೆ, ಅದಕ್ಕೆ ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಏನೂ ಖರ್ಚು ಬರಗಾಲಕ್ಕಾಗಿ ಮಾಡಿಲ್ಲ ಎನ್ನುವ ಮಾತಿನಲ್ಲಿ ಹುರುಳಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲೆಲ್ಲಿ ಹಣ ಬೇಕಾಗುತ್ತದೆ, ಎಲ್ಲೆಲ್ಲಿ ಅವಶ್ಯಕತೆ ಇದೆ ಎನ್ನುವ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕು. ಯಾವ ಸಂದರ್ಭದಲ್ಲೂ ಬರಪರಿಹಾರದ ಕಾಮಗಾರಿಗಳನ್ನು ಕುಂಠಿತಗೊಳಿಸುವುದಿಲ್ಲ ಹಣ ಇಲ್ಲ ಎನ್ನುವ ವಾದವನ್ನು ನಾವು ಹೇಳುವುದಿಲ್ಲ, ಸಂಪೂರ್ಣವಾಗಿ ಅದರ ಜವಾಬ್ದಾರಿಯನ್ನು ಹೊತ್ತು ಜನರಿಗೆ ಎಲ್ಲಾ ವಿಧವಾದಂಥ ಅನುಕೂಲವನ್ನು ಕಲ್ಪಿಸಿಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನ ನಡೆಯುತ್ತಿರುವ ಟೈಮ್‌ನಲ್ಲೇ ಕೂಲಿ ಮಾಡಿದ ಜನಕ್ಕೆ ಕೂಲಿ ಹಣವನ್ನು ಕೊಟ್ಟಿಲ್ಲವೆಂದು ಬೆಳಿಗ್ಗೆ ತಾನೇ ಹೇಳಿದ್ದೇನೆ. ನೀವು ಹೇಳುವ ಮಾತಿನಲ್ಲಿ ಅರ್ಥ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರ ಸ್ಟೇಟ್‌ಮೆಂಟ್‌ನ್ನು ತೆಗೆದುಕೊಂಡು ಹೋದರೆ ನಮ್ಮನ್ನು ಜನ ಸುಮ್ಮನೆ ಬಿಡುತ್ತಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇವತ್ತಿನ ದಿನಗಳಲ್ಲಿ ಎಷ್ಟು ಲಕ್ಷ ಜನ ಬರಗಾಲದ ಬಾಬಿನಲ್ಲಿ ಕೆಲಸ ಮಾಡುತ್ತಿದ್ದಾರೆಂದು ಹೇಳಿ ? ೬ ಲಕ್ಷ ಜನರೇ, ೧೦ ಲಕ್ಷ ಜನರೇ ಅಥವಾ ೧೬ ಲಕ್ಷ ಜನರೇ, ಅದನ್ನು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತು ಪೂರಕ ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಅವರ ವಾದ ಏನು ? ಬರಗಾಲ ಪರಿಸ್ಥಿತಿಯನ್ನು ಸರ್ಕಾರದವರು ಸರಿಯಾಗಿ ನಡೆಸುತ್ತಿಲ್ಲ, ಜನರಿಗೆ ಅವಶ್ಯಕವಾದ ಅನುಕೂಲಗಳನ್ನು ಒದಗಿಸುತ್ತಿಲ್ಲ, ಜನರಿಗೆ ಸರಿಯಾದಂಥ ವ್ಯವಸ್ಥೆಯನ್ನು ಮಾಡಿಲ್ಲವೆಂಬ ಸಾಮಾನ್ಯವಾದಂಥ ಟೀಕೆಯನ್ನು ಮಾಡಿದ್ದಾರೆ. ಬರಗಾಲದ ಬಗ್ಗೆ ಈ ಹಿಂದೆ ಎರಡು ಮೂರು ದಿನಗಳ ಕಾಲ ದೀರ್ಘ ಚರ್ಚೆ ನಡೆಯಿತು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಉತ್ತರವನ್ನು ಸಹ ಕೊಟ್ಟಿದ್ದಾರೆ. ಇವತ್ತು ಪೂರಕ ಬೇಡಿಕೆ ಮೇಲೆ ಚರ್ಚೆಯಾಗುತ್ತಿರುವುದರಿಂದ ಬರಗಾಲದ ವಿಷಯವು ಈ ಪರಿಧಿಯಲ್ಲಿ ಬರುವುದಿಲ್ಲ. ಈಗಾಗಲೇ ಬರಗಾಲದ ಬಗ್ಗೆ ಉತ್ತರವನ್ನು ಕೊಟ್ಟಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಹಣವನ್ನು ಖರ್ಚು ಮಾಡಿಲ್ಲ ಎನ್ನುವುದಾದರೆ, ನಾವು ಯಾವ ಯಾವ ಐಟಮ್‌ಗೆ ಹಣವನ್ನು ರಿಲೀಸ್ ಮಾಡಿದ್ದೇವೆಂದು ಲೆಕ್ಕ ಕೊಡುತ್ತೇವೆ. ಈಗಾಗಲೇ ೧೫ ಕೋಟಿ ೬೩ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಹೆಚ್ಚಿನ ವಿವರಗಳು ಬೇಕಾದರೆ ಮಾನ್ಯ ಮಂತ್ರಿಯವರಾದ ಶ್ರೀ ಬೊಮ್ಮಾಯಿಯವರು ಒದಗಿಸಿಕೊಡುವುದಕ್ಕೆ ಸಿದ್ಧರಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ, ಪಂಡಿತ್ ಜವಾಹರಲಾಲ್ ನೆಹರೂರವರ ಬರ್ಥ್ ಸೆಂಟಿನರಿ, ಮತ್ತು ಸ್ವಾತಂತ್ರ್ಯೋತ್ಸವದ ೪೦ನೇ ವರ್ಷದ ಸಮಾರಂಭಕ್ಕಾಗಿ ೩೯ವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಅಷ್ಟು ಏತಕ್ಕೆ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅದರ ಬಗ್ಗೆ ವಿವರಗಳನ್ನು ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಮತ್ತು ವಿರೋಧಪಕ್ಷದ ನಾಯಕರು ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಸ್ವಾತಂತ್ರ್ಯದ ೪೦ನೇ ವರ್ಷದ ಉತ್ಸವಕ್ಕೆ ಮಾತ್ರ ಸೀಮಿತವಲ್ಲ. ಇದರ ಜೊತೆಗೆ ಪಂಡಿತ್ ಜವಾಹರಲಾಲ್ ನೆಹರೂರವರು ಜನ್ಮಶತಾಬ್ದಿಯೂ ಕೂಡ ಸಂಬಂಧಪಟ್ಟದ್ದು ಆಗಿದೆ. ಈ ಬಗ್ಗೆ ರಚಿಸಿದ ಸಮಿತಿಯಲ್ಲಿ ಮಾನ್ಯ ವಿರೋಧಪಕ್ಷದ ನಾಯಕರೂ ಸದಸ್ಯರಾಗಿದ್ದಾರೆ. ಆದುದರಿಂದ ಹೆಚ್ಚಿಗೆ ಮಾಹಿತಿಗಳನ್ನು ಅವರಿಂದ ಪಡೆಯಬಹುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜಿಲ್ಲಾಪರಿಷತ್‌ಗಳ ಬಗ್ಗೆ ಮಾನ್ಯ ಮೊಯಿಲಿಯವರು ಮಾತನಾಡಿದ್ದಾರೆ. ಇದು ಏನೋ ಆಗಿಬಿಟ್ಟಿದೆ, ಮಾಡಬಾರದುದನ್ನು ಮಾಡಿ ಜಿಲ್ಲಾಪರಿಷತ್‌ಗಳನ್ನು ತಂದಿದ್ದೀರಿ. ಬಹಳಷ್ಟು ತೊಂದರೆಗಳು ಆಗಿವೆ ಎಂದೆಲ್ಲಾ ಹೇಳಿದ್ದಾರೆ......

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಸದಸ್ಯರೆಲ್ಲರೂ ಮಾತನಾಡುವಾಗ ಮಾನ್ಯ ಮಂತ್ರಿಗಳು ಸುಮ್ಮನೇ ಕುಳಿತುಕೊಂಡು ಕೇಳುತ್ತಿದ್ದರು. ಆದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿರುವ ಸಂದರ್ಭದಲ್ಲಿ ಹೀಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಹೀಗೆ ಗೊಂದಲ ಮಾಡುವುದು ಸರಿಯಲ್ಲ ?

ಅಧ್ಯಕ್ಷರು.—ದಯಮಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಮಂತ್ರಿಯವರು ತಮ್ಮ ಉತ್ತರವನ್ನು ಕೊಟ್ಟು ಮುಗಿಸಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಅವರಿಗೆ ಏನಾಗಿದೆ ಅಂದರೆ, ... ಜನರಿಗೆ ಅಧಿಕಾರ ಕೊಟ್ಟಿದ್ದೇವೆ...... ವರ್ಗಾವಣೆ ಮಾಡಿದ್ದೇವೆ. ಒಳ್ಳೆಯ ಕೆಲಸ ಪ್ರಾರಂಭವಾಗಿದೆ......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಜನತಾ ಸರಕಾರದವರು ಜನರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ ಅವರಿಗೆ ಇದು ಬೇಡವಾಗಿದೆ.

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಮಂತ್ರಿಯವರು ಮಾತನಾಡಲಿ. ಅವರ ಉತ್ತರ ಆದ ಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ರಾಜಕೀಯ ಶಕ್ತಿಯನ್ನು ನಾವು ಜನರಿಗೆ ಕೊಟ್ಟಿದ್ದೇವೆ. ಆ ಜನರು ಕೆಲಸ ಮಾಡುತ್ತಾ ಇದ್ದಾರೆ......

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಇದರಲ್ಲಿ ಏನೂ ರಾಜಕೀಯ ಇಲ್ಲ. ಸತ್ಯವಾಗಿ ಹೇಳುವುದಾದರೆ, ಪ್ರಾಮಾಣಿಕವಾಗಿ ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಈ ಅಕೌಂಟಿಂಗ್ ಪ್ರೊಸೀಜರ್ ಏನಿದೆ, ಅಂದರೆ ನೀವು ಹಣವನ್ನು ರಿಲೀಸ್ ಮಾಡುತ್ತೀರಿ, ಆ ರೀತಿಯಲ್ಲಿ ರಿಲೀಸ್ ಮಾಡತಕ್ಕಂಥ ಪ್ರೊಸೀಜರ್‌ನಿಂದಾಗಿ ಸ್ವಲ್ಪ ತೊಂದರೆಯಾಗಿದೆ. ನೀವು ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್‌ಗೆ ಹೇಗೆ ಇದನ್ನು ಬಿಟ್ಟು ಕೊಡುತ್ತೀರಿ, ಅದೇ ತರಹ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವುಗಳು ಒಬ್ಬರೇ ಅಲ್ಲ, ತಮ್ಮ ಸ್ನೇಹಿತರುಗಳು ಕೂಡ ಇದರ ಬಗ್ಗೆ ಟೀಕೆ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನಕ್ಕೆ ಸಂಪೂರ್ಣವಾಗಿ ಅಧಿಕಾರ ಇದೆ. ಹಕ್ಕು ಇದೆ ಎಂಬುದನ್ನು ಹಿಂದೆ ಯುನಿವರ್ಸಿಟಿ ಕಾಂಪ್ರೆಹೆನ್ಸಿವ್ ಎಕ್ಟ್ ಚರ್ಚೆಗೆ ಬಂದಾಗ ಕೂಡ ನಾವು ಹೇಳಿದ್ದೇವೆ ನಾವು ಹೇಳುತ್ತಾ ಇರತಕ್ಕಂಥದ್ದು ಈ ರೋಸ್ಟರ್ ಸಿಸ್ಟಮನ್ನು ನೀವು ಅನ್ವಯ ಮಾಡಬೇಕು, ಇದು ಅಪಾದ ಮುಕ್ತವಾಗಿ ಇರಬೇಕು. ಅದಕ್ಕಾಗಿ ನೀವು ಬಿಲ್ಲನ್ನು ಪೈಲಟ್ ಮಾಡಬೇಕಾದರೆ......

ಶ್ರೀ ಎ. ಲಕ್ಷ್ಮೀಸಾಗರ್.—ತಾವುಗಳು ಹೇಳಿದ್ದನ್ನು ನಾನು ಗಂಭೀರವಾಗಿ ಕುಳಿತುಕೊಂಡು ಕೇಳಬೇಕು. ಹಾಗೆಯೇ ನಾನು ಹೇಳುವುದನ್ನು ತಾವುಗಳು ಕೇಳಬೇಕು. ನಾವುಗಳು ಇಷ್ಟಕ್ಕೆ ಇದ್ದರೆ ಅದು ಚೆನ್ನಾಗಿ ಇರುತ್ತದೆ. ಸುಮ್ಮನೇ ಎದ್ದು ನಿಂತರೆ ನಾನು ಏನು ಹೇಳುವುದು ? ನಿಮ್ಮ ಮಾತಿನಲ್ಲಿದ್ದ ಎಲ್ಲಾ ಚುರುಕುಗಳನ್ನು ನಾನು ಸಹಿಸಿಕೊಂಡು ಕೇಳಲಿಲ್ಲವೇ ? ತಾವುಗಳು ಪ್ರತಿಯೊಂದಕ್ಕೂ ಹೀಗೆ ಎದ್ದು ನಿಂತರೆ ನಾನು ಸುಮ್ಮನೇ ಇರಬೇಕಾಗುತ್ತದೆ......

ಶ್ರೀ ಎಂ. ವೀರಪ್ಪಮೊಯಿಲಿ.—ತಾವುಗಳು ಎಲ್ಲದಕ್ಕೂ ರಾಜಕೀಯ ಉತ್ತರ ಕೊಟ್ಟರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಮಾತನಾಡುತ್ತಾ, ಎಲ್ಲಾ ಕೆಟ್ಟು ಹೋಗಿದೆ, ಏನೋ ಹೆಚ್ಚು ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಮಾನ್ಯ ಮೊಯಿಲಿಯವರು ಅಕೌಂಟಿಂಗ್ ಪ್ರಾಬ್ಲಂ ಬಗ್ಗೆ ಹೇಳಿದರು. ಇದಕ್ಕೆ ಮಾನ್ಯ ನಜೀರ್‌ಸಾಬ್‌ರವರು ಬೆಳಿಗ್ಗೆ ಉತ್ತರವನ್ನು ವಿವರವಾಗಿ ಹೇಳಿದ್ದಾರೆ. ಜಿಲ್ಲಾಪರಿಷತ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರಿಗೆ ಸರಿಯಾಗಿ ಹಣವನ್ನು ಒದಗಿಸುತ್ತಾ ಇಲ್ಲ. ಅವರ ಟಿ.ಎ.,ಡಿ.ಎ ಗಳು ಎಷ್ಟು ? ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ? ಕಾರುಗಳ ವಿಚಾರ ಏನು ? ಮನೆಗಳ, ಬಾಡಿಗೆಯ ವಿಚಾರ ಏನು ? ಈ ಎಲ್ಲಾ ವಿಚಾರಗಳಲ್ಲಿ ನರವಾದಂತಹ ಉತ್ತರವನ್ನು ಅಂಕಿಅಂಶಗಳ ಸಮೇತ ಅವರು ಕೊಟ್ಟಿದ್ದಾರೆ.

ಆದರೂ ಕೂಡ ಕೆಲವರಿಗೆ ಸಂಶಯ. ಕೆಲವರು ಸಂಶಯದ ಜನರಿದ್ದಾರೆ. ಅವರ ಮನಸ್ಸಿನಲ್ಲಿರುವ ಸಂಶಯ ಯಾವತ್ತೂ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಅಂಕಿಅಂಶಗಳನ್ನು ಮಾನ್ಯ ನಜೀರ್‌ಸಾಬ್‌ರವರು ಹೇಳಿದ್ದಾರೆ. ಇವರೂ ಹೇಳಿದ್ದಾರೆ. ಸ್ಟೇಟ್‌ಮೆಂಟ್ ಕೂಡ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅದಕ್ಕೆ ಉತ್ತರ ಕೊಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. —೩೭೦ ಕೋಟಿ ಕೊಟ್ಟರೂ ಕೂಡ ಖರ್ಚಾಗಿರುವುದು ಕೇವಲ ೪೦ ಕೋಟಿ ಮಾತ್ರ. ಮಾನ್ಯ ನಜೀರ್‌ಸಾಬರು ಅಕೌಂಟಿಂಗ್ ಪ್ರಾಬ್ಲಂ ಇದೆ ಎಂದು ಹೇಳಿದರು. ರೂಲ್ಸ್ ರೆಗ್ಯುಲೇಷನ್ ಅಡ್ಡಿ ಬರುತ್ತಿವೆ. ಅದನ್ನು ಹೇಗೆ ಖರ್ಚು ಮಾಡಬೇಕೆಂದು ಗೊತ್ತಿಲ್ಲ ಎಂದರು.

SRI M. VEERAPPA MOILY.—Even artificial insemination will have to be done in instalments as per the accounting procedure.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೋಸ್ಕರ, ಸೆಕ್ರೆಟರಿಗಳನ್ನು ಮಂತ್ರಿತರ ಪ್ರಮುಖರನ್ನು ಸಭೆಗೆ ಕರೆದು ಇಲ್ಲಿ ಸನ್ಮಾನ್ಯ ಸದಸ್ಯರು ಹೇಳಿದ ಎಲ್ಲ ಸಲಹೆಗಳನ್ನು ಪ್ರಸ್ತಾಪ ಮಾಡಿ ಇದಕ್ಕೆ ಸಂಬಂಧಿಸಿದಂತೆ ಪರಿಪೂರ್ಣವಾದ ಉತ್ತರ ಕೊಡುವುದಾಗಿ ಮಾನ್ಯ ನಜೀರ್ ಸಾಬ್‌ರವರು ಹೇಳಿದ್ದಾರೆ. ಇಷ್ಟಾದರೂ ಖರ್ಗೆ ಅವರು ನಾವು ಖರ್ಚು ಮಾಡಿರುವುದು ಕಡಿಮೆ ಎಂದರೆ ಏನು ಉತ್ತರ ಕೊಡುವುದು. ಕೆಲವು ಕಡೆ ಖರ್ಚಾಗಿದೆ. ಇನ್ನು ಕೆಲವು ಕಡೆ ಖರ್ಚಾಗಿರುವ ಸರ್ಟಿಫಿಕೇಟ್ಸ್ ಬಾದಿಲ್ಲ. ೨೦ ಜಿ ಪ.ಗಳಲ್ಲಿ ೧೩ ರಿಂದ ಬಂದಿದ್ದು ಇನ್ನೂ ೬ ರಿಂದ ಬರಬೇಕಾಗಿದೆ. ಎಂದರು ಇಷ್ಟೆಲ್ಲ ವಿವರಗಳನ್ನು ಕೊಟ್ಟರೂ ಪದೇ ಪದೇ ಜಿಲ್ಲಾಪರಿಷತ್ತುಗಳು ದುಡ್ಡು ಖರ್ಚು ಮಾಡುತ್ತಿಲ್ಲ ಎಂದು ಆರೋಪ ಮಾಡಿದರೆ ಇದರಲ್ಲಿ ರಾಜಕೀಯ ಇದ್ದೇ ಇದೆ. ಇವರಿಗೆ ಜನರಿಗೆ ಅಧಿಕಾರವನ್ನು ಟ್ರಾನ್ಸ್‌ಫರ್ ಮಾಡುವುದರಲ್ಲಿ ನಂಬಿಕೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ಸ್ ರೆಗ್ಯುಲೇಷನ್ ಮಾಡದೆ ಅವರ ಕೈಗೆ ಏಕೆ ಕೊಟ್ಟಿರಿ ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಖರ್ಚು ಮಾಡುವುದಕ್ಕೆ ಕೊಟ್ಟು ಈಗ ಎಲ್ಲ ವಾಪಸ್ ತೆಗೆದುಕೊಂಡು ಬಿಟ್ರಾ ?

SRI A. LAKSHMI SAGAR.—Hon'ble Minister for Rural Development has given a detailed and effective reply. I cannot persuade myself to raise as and when they put questions like this.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಉತ್ತರ ಕೊಡುತ್ತಿರುವ ಮಂತ್ರಿಗಳು ಹಿಂದುಳಿದ ವರ್ಗಕ್ಕೆ ಸೇರಿದವರು. ಅವರಿಗೆ ಹೀಗೆ ಕಷ್ಟ ಕೊಡಬಹುದೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಮಾಜಿ ಅರ್ಥ ಮಂತ್ರಿಗಳಾದ ಮಾನ್ಯ ಮೊಯ್ಲಿಯವರು ಬಹಳ ಕಠಿಣವಾದ ಶಬ್ದಗಳನ್ನು ಉಪಯೋಗ ಮಾಡಿದ್ದಾರೆ. ಜನಗಳನ್ನು ವಂಚನೆ ಮಾಡುತ್ತಿದ್ದೇವೆ. ಸಂಪನ್ಮೂಲ ದುರುಪಯೋಗ ಮಾಡುತ್ತಿದ್ದೇವೆ. ಎಂದೆಲ್ಲಾ ಹೇಳಿದ್ದಾರೆ ಈ ಸದನದಲ್ಲಿ ಪೂರಕ ಅಂದಾಜಿನ ಮೇಲೆ ಬಹಳಸಬಹುದಾದ ಸಭ್ಯ ಪದಗಳೋ ಅವು ಎಂಬ ಪ್ರಶ್ನೆಯನ್ನು ಅವರಿಗೇ ಬಿಡುತ್ತೇನೆ. ಆ ಶಬ್ದಗಳನ್ನು ಬಳಕೆ ಮಾಡಿ ಮತ್ತೆ ಅದರ ಮೇಲೆ ಖಾರ, ಉಪ್ಪು ಹಾ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರ ಹೇಳಿದ ಈ ಆರೋಪಗಳು. ಉಪಯೋಗಿಸಿದ ಭಾಷೆಗಳು, ಆಮೇಲೆ ಮಾತನಾಡಿದ ಸಮಯದಲ್ಲಿ ತೋರಿಸಿದ ಕೋಪ ಇವುಗಳೆಲ್ಲವೂ ಕೂಡ ಸತ್ಯಕ್ಕೆ ದೂರ ವಾದಂತಹವುಗಳು ಇದಕ್ಕೆ ಸಾಕ್ಷಿ ಪುರಾವೆಗಳಿಗೆ ಸಿಗತಕ್ಕಂಥಾದ್ದು ಅಲ್ಲ ರಾಜಕೀಯ ದುರುದ್ದೇಶ ಇದರಲ್ಲಿ ಇದ್ದರೂ ಇರಬಹುದು ಅನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

SRI S. BANGARAPPA.—You are making a general denial as in written statements in the courts where they used to write "all allegations which are not specifically traversed are denied" Don't make a general denial statement.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇಲ್ಲವೆಂದು ಅವರಿಗೆ ಒಂದು ತರಹ ಭ್ರಮೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ ಇಲ್ಲ ಎಂದು ಒಂದೇ ಸಮನೆ ಹೇಳಿದರು. ವಾಟರ್ ರಿಸೋರ್ಸಸ್ ಕಮೀಷನ್ ಬಗ್ಗೆ ಪ್ರಧಾನ ಮಂತ್ರಿಯವರು ಸಭೆ ಕರೆದಿದ್ದಾರೆ. ಅವರು ಎಲ್ಲಾ ಮುಖ್ಯ ಮಂತ್ರಿಗಳನ್ನು ಕೇಳಿ ಸಭೆಯ ದಿನಾಂಕವನ್ನು ಗೊತ್ತು ಮಾಡುವುದಿಲ್ಲ ನಾವು ಏನಾದರೂ ಸಭೆ ಮಾಡಬೇಕಾದರೆ, ಅವರನ್ನು ಕೇಳಿ ಮಾಡಬೇಕಾಗುತ್ತದೆ. ಈ ಸಭೆಗೆ ತಮಗೆ ಪತ್ರ ಬರೆದಿದ್ದಾರೆ. ಪ್ರತಿಯೊಂದು ಸಲ ಅತ್ಯವಶ್ಯಕವಾಗಿ ಹೋಗಬೇಕಾದಂತಹ ಸಭೆಗಳಿಗೆ ಮಾತ್ರ ಹೋಗಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ......

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಹೇಳಬೇಕೇ ಬೇಡವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಂದ ಮೇಲೆ ಇದನ್ನು ತೆಗೆದು ಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಹೇಳಿದ್ದಕ್ಕೆ ಉತ್ತರವನ್ನು ಹೇಳದೇ ಹೋದರೆ ಹೇಗೆ ? ಮಾನ್ಯ ಮೊಯಿಲಿಯವರು ಈ ವಿಚಾರ ಎತ್ತಿದರು ಆಗ ಮಧ್ಯೆ ಎದ್ದು ನಿಂತು ಹೇಳಿದೆ, ಅವರನ್ನು ಪ್ರಧಾನ ಮಂತ್ರಿಯವರು ಸಭೆಗೆ ಹಾಜರಾಗಲಿಕ್ಕೆ ಕರೆದಿದ್ದಾರೆ ಮತ್ತು ಲೋಕೋಪಯೋಗಿ ಮಂತ್ರಿಗಳನ್ನೂ ಕೂಡ ಕರೆದಿದ್ದಾರೆ ಅವರು ಅಲ್ಲಿಗೆ ಹೋಗಿದ್ದಾರೆ. ಎಂದು ಅದು ಮುಖ್ಯ ವಾದಂತಹ ಸಮಸ್ಯೆಗಳನ್ನು ಇತ್ಯರ್ಥ ಮಾಡತಕ್ಕಂತಹ ಮತ್ತು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳ ತಕ್ಕಂತಹ ಮಹತ್ವದ ಸಭೆ ಹಾಗೂ ಈ ರಾಜ್ಯದ ಕಾವೇರಿ ಜಲಾಶಯದ ಭೂಮಿ ಹಂಚಿಕೆ ಬಗ್ಗೆ ಕೂಡ ಇದೆ. ಆ ವಿಷಯ ಇದರಲ್ಲಿ ಬರುವುದಿದೆ ಮಾನ್ಯ ಮುಖ್ಯ ಮಂತ್ರಿಗಳು ಹೋಗಬೇಕಾಗಿರುವುದರಿಂದ ಹೋಗಿದ್ದಾರೆ. ಇಷ್ಟು ಹೇಳಿದರೂ ಕೂಡ ಮಾನ್ಯ ಮೊಯಿಲಿಯವರು ರಾಜಕೀಯ ಇದೆ ಎಂದು ಹೇಳುವುದು ಸರಿಯಲ್ಲ ಇದರಲ್ಲಿ ರಾಜಕೀಯ ಇಲ್ಲ. ಮಾನ್ಯ ಹೆಗಡೆಯವರು ಇಲ್ಲಿಂದ ಹೋಗಿ ಬಿಟ್ಟರೆ ಏನೋ ಸಿಗುತ್ತದೆಂಬ ಭಾವನೆ ಇದ್ದರೆ ಅದು ಸರಿಯಲ್ಲ ಏನೂ ಸಿಗುವುದಿಲ್ಲ ಅವರು ಎಲ್ಲೋ ಹೋಗಲೀ ಇವರಿಗೆ ಏಕೆ ಭಯವಾಗುತ್ತದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮೂರು ಲಕ್ಷ ೪೫,೦೦೦ ರೂಪಾಯಿ ಖರ್ಚು ಮಾಡಿ ಕೊಂಡು ಗಂಟಲು ಚೆನ್ನಾಗಿ ಮಾಡಿಕೊಂಡು ಬಂದಿದ್ದಾರೆ ಭಾಷಣ ಮಾಡಲೀ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—೧೨ ವರ್ಷದ ಹಿಂದೆ ದೆಹಲಿಗೆ ಓಡಿದರು ಪುನಃ ಹಾರಿ ಬಂದರು ಅವರ ಇತಿಹಾಸ ಇಲ್ಲೇ ಮುಗಿಯಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಯಾರ್‍ಯಾರ ಇತಿಹಾಸ ಎಲ್ಲೆಲ್ಲಿ ಮುಗಿಯಬೇಕು ಅನ್ನುವುದನ್ನು ಜನ ತೀರ್ಮಾನ ಮಾಡುತ್ತಾರೆ ಅವರಿಗೇ ಬಿಡಿ ನಾನು ಆ ವಿಚಾರ ಹೇಳುವುದಿಲ್ಲ. ನೀವು ಇದನ್ನು ಪ್ರಸ್ತಾಪ ಮಾಡಿದ್ದಕ್ಕೋಸ್ಕರ ಹೇಳುತ್ತಿದ್ದೇನೆ. ಇದನ್ನು ಜನರಿಗೆ ಬಿಡೋಣ ಅವರಿಗೆ ಅದರಲ್ಲಿ ನಂಬಿಕೆ ಇಲ್ಲವಲ್ಲಾ. ೧೯೭೫ನೇ ಇಸವಿಯಲ್ಲಿ ಈ ದೇಶದ ಕಾನೂನನ್ನು......

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೇಕೆ ಬಿಡಿ. ಅದನ್ನು ಜನ ತೀರ್ಮಾನ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರೇ, ನಮಗೆ ಹೆಚ್ಚು ಹೇಳುವುದಕ್ಕೆ ಆಸೆ ಇಲ್ಲ ಮಾನ್ಯ ರಾಮಕೃಷ್ಣ ಹೆಗಡೆಯವರ ಭಸ್ಮಾಸುರ ನರ್ತನ ರಾಗ, ತಾಳ, ಲಯಬದ್ಧವಾಗಿ ನಡೆಯುತ್ತಿದೆ ನರ್ತನ ನಡೆಯಲಿ.

ಶ್ರೀ ಎ. ಲಕ್ಷ್ಮೀಸಾಗರ್,—ನಿಮ್ಮದೂ ನಡೆಯುತ್ತಿದೆ ಅವರೊಬ್ಬರಿಗೆ ಏಕೆ ಹೇಳುತ್ತೀರಿ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಬಂಗಾರಪ್ಪನವರು ಮೋಲೆ...ಮೋಹಿನಿಯೇ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಹೌದು ನಾನೇ ಮೋಹಿನಿ ಅಲ್ಲವೆಂದು ತಿಳಿದುಕೊಂಡಿದ್ದೀರಾ ? ಮಾನ್ಯ ಹೆಗಡೆಯವರು ಭಸ್ಮಾಸುರ ನರ್ತನ ಮಾಡಲಿಕ್ಕೆ ಹೊರಟಿದ್ದಾರೆ.

೬—೦೦ ಪಿ.ಎಂ.

ರಾಗ, ತಾಳ, ಲಯಬದ್ಧವಾಗಿ ನಡೆಯುತ್ತಿದೆ. ಸ್ವಲ್ಪ ದಿವಸ ನಡೆಯಲಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಾಜೀವ್ ಗಾಂಧಿಯವರಿಂದ ಯಾವ ನೃತ್ಯ ನಡೆಯುತ್ತಿದೆ?

ಶ್ರೀ ಎಂ. ರಘುಪತಿ.—ಮಾನ್ಯ ರಾಜೀವ್ ಗಾಂಧಿಯವರದು ಬೋಫಾರ್ಸ್ ನೃತ್ಯ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಇಟ್ಟಿರುವ ಪೇಪರ್‌ಗಳನ್ನು ನೋಡುವುದಕ್ಕೂ ಯೋಗ್ಯತೆ ಇಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ. – ಈ ಎರಡೂ ನೃತ್ಯದ ಬಗ್ಗೆ ಚರ್ಚೆಯಾದರೆ ರಾಜ್ಯದ ಗತಿ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ರಾಜ್ಯದ ಭವಿಷ್ಯದ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ. ಜನರ ತೀರ್ಮಾನದ ಬಗ್ಗೆ ನಂಬಿಕೆ ಇಲ್ಲವಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೦.೫ ನಲ್ಲಿದ್ದರು. ಅದು ಹೋಗಿ ಬಿಟ್ಟಿದೆ. ಈಗ ಜೀರೋಗೆ ಬಂದು ಬಿಟ್ಟಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹರಿಯಾಣದಲ್ಲೂ ಹೋಗಿದೆ, ಕೇರಳದಲ್ಲೂ ಹೋಗಿದೆ.......

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಹತ್ತು ರಾಜ್ಯಗಳಲ್ಲಿ ಚುನಾವಣೆ ನಡೆಯಿತು. ೯ ರಾಜ್ಯಗಳಲ್ಲಿ ಸುತರಾಂ ಇಲ್ಲವೇ ?

(ಗೊಂದಲ)

ಶ್ರೀ ಎಂ. ರಾಮಪ್ಪ.—ಮಂತ್ರಿಗಳಿಗೆ ಜವಾಬ್ದಾರಿ ಕಡಿಮೆ. ಇಬ್ಬರು ಮೂವರು ಮಂತ್ರಿಗಳು ಒಂದೇ ಸಾರಿ ಎದ್ದರೆ ನಮ್ಮ ಗತಿ ಏನು? ಅದರಲ್ಲೂ ಇಬ್ಬರು ಬ್ರಹ್ಮಚಾರಿಗಳಾದರೆ.........

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳ ಮೇಲೆ ಪೂರ್ಣವಾದ ಮಾಹಿತಿಗಳನ್ನು ಹಾಗೂ ವಿವರಗಳನ್ನು ಸಹಾ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬ್ರಹ್ಮಚಾರಿಗಳ ಸಾಲಿನಲ್ಲಿ ಮಾನ್ಯ ರಘುಪತಿಯವರನ್ನು .....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಮೊಯಿಲಿಯವರಿಗೆ ಹೇಳಿದ್ದೇನೆ. ನನಗೆ ಏನೂ ತೊಂದರ ಇಲ್ಲ. ಅವರು ಚಿಂತೆ ಪಡಬೇಕಾಗಿಲ್ಲ. ಎಲ್ಲಿಗೆ ಹೋದರೂ ಯಾವ ವಿಧವಾದ ಅಂಕು ಸೋಂಕುಗಳಿಲ್ಲದೇ ಈಗ ಹೇಗೆ ಇದ್ದೇನೋ ಹಾಗೆಯೇ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿಮಗೆ ಏನೂ ತೊಂದರೆ ಇಲ್ಲ. ಸಧ್ಯಕ್ಕೆ......

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಕೊಟ್ಟಿದ್ದೇನೆ. ಅದಕ್ಕೆ ಮಾನ್ಯತೆ ಕೊಡಬೇಕು, ಅದನ್ನು ವಾಸು ಮಾಡಿಕೊಡಬೇಕು ಎಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ರಸ್ತೆ ಮಾಡುವ ಬಗ್ಗೆ.............

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಈ ರಸ್ತೆ ಮಾಡುವುದರ ಬಗ್ಗೆ ನಿಮಗೆ ಕಾಪಿಯನ್ನೇ ಕೊಡುತ್ತೇನೆ. ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗಿದೆ. ಕಾಂಪಿಟೆಂಟ್ ಪೀಪಲ್ ಯಾರು ಎಂದು ಏಳು ಜನರನ್ನು ತೀರ್ಮಾನ ಮಾಡಿ ಅವರಲ್ಲಿ ಲೋಯೆಸ್ಟ್ ಟೆಂಡರ್‌ನವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೆ. ಕಾಪಿ ಕೊಡುತ್ತೇನೆ ನೋಡಿ.

ಶ್ರೀ ಯು. ಭೂಪತಿ.—ನಮ್ಮಲ್ಲಿ ಯಾರು ಇಂಜಿನಿಯರ್‌ಗಳು ಇಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಹಣವನ್ನು ಒದಗಿಸಿಕೊಡತಕ್ಕಂಥ ವ್ಯವಸ್ಥೆಯೂ ಇದೆ. ವಿಶ್ವ ಬ್ಯಾಂಕಿನ ಮುಖಾಂತರ ಹಣ ಬರತಕ್ಕಂಥ ವ್ಯವಸ್ಥೆ ಕೂಡಾ ಅದರಲ್ಲಿ ಅಡಕವಾಗಿರುವುದರಿಂದ, ನಮ್ಮಲ್ಲಿ ಇರತಕ್ಕಂಥವರು ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಎಂದು ಮಾಡಿದ್ದೇವೆ. ನಮ್ಮವರೂ ಆಗ ಬಹುಂದಾಗಿತ್ತು.........

(ಗೊಂದಲ)

ಶ್ರೀ ಯು. ಭೂಪತಿ.—ಅದರಲ್ಲಿ ಯಾರು ಇದ್ದಾರೆ ಎಂದು ದಯಮಾಡಿ ಹೇಳಿ.

SRI A. LAKSHMISAGAR.—The names are:

1) M/s. Consultant International, New Delhi.
2) M/s. Consultants Private Ltd., New Delhi.
3) M/s. Giloon Projects Services Ltd., New Delhi.
4) M/s. National Transportation Planning Research Centre, Trivendrum,
5) M/s. Consulting Engineering Services (India) Private Ltd., New Delhi.
6) M/s. Rites, New Delhi
7) M/s. Development onsultants Private Ltd., Calcutta.

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಒಂದು ವಿಷಯ ಹೇಳಬೇಕು. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ನ್ಯಾಷನಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್, ನ್ಯಾಷನಲ್, ರೋಡ್ ವೇಸ್ ಕಾರ್ಪೊರೇಷನ್ ಇದೆ. ಈ ಎರಡೂ ಸರ್ಕಾರಕ್ಕೆ ಭಾರಿ ಪ್ರೋತ್ಸಾಹಕರ ಕೆಲಸಗಳನ್ನು ತರುತ್ತಿದ್ದಾರೆ. ಹೀಗೆ ಅವರು ಒಳ್ಳೆಯ ಕೆಲಸಗಳನ್ನು ಮಾಡಿ ಹೆಸರನ್ನು ಪಡೆದಿದ್ದಾರೆ. ಅವರನ್ನು ಇವರು ಕರೆಯಲಿಲ್ಲ? ನಾನು ಕೇಳುವುದು ಕೇಂದ್ರ ಸರ್ಕಾರದ ಸಂಸ್ಥೆ ಇದ್ದಾಗ ಅವರನ್ನು ಟೆಂಡರ್ ಕರೆಯುವ ಅವಶ್ಯಕತೆ ಇಲ್ಲ. ಇಂತಹ ಸಮಯದಲ್ಲಿ ಬೇರೆ ಪ್ರೈವೇಟ್ ಕಂಪನಿಗೆ ಇದನ್ನು ಯಾಕೆ ಕೊಟ್ಟಿದ್ದಾರೆ?

(ಗೊಂದಲ)

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ "೧೯೮೮ನೇ ಮಾರ್ಚ್ ೩೧ರ ಅಂತ್ಯದೊಳಗೆ ದೊರಕಲಿರುವ ಪೂರಕ ಅನುದಾನ ಸಂಖ್ಯೆ: ೧, ೨, ೩, ೫, ೬, ೭, ೧೦ ರಿಂದ ೧೪, ೨೨, ೨೭, ೨೯, ೩೨, ೩೪, ೩೫, ೪೧, ೪೫, ೪೬, ೪೮, ೫೧, ೫೫, ೫೮, ೫೯, ೬೨, ೬೩, ೬೪, ಹಾಗೂ ೬೫ನೇ ಸಂಖ್ಯೆಗಳ ಬೇಡಿಕೆಗಳ ಬಗ್ಗೆ ಸರ್ಕಾರದವರು ಸದರಿ ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಮೊಬಲಗುಗಳನ್ನು ಮಂಜೂರು ಮಾಡುವುದು."

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಬೇಡಿಕೆಗಳಿಗೆ ಮಂಜೂರಾತಿದೊರಕಿತು)

ಶ್ರೀ ಯಂ, ಭೂಪತಿ.—ಈಗ ಅರ್ಧ ಗಂಟೆ ಚರ್ಚೆ ಇದೆ.

ಅಧ್ಯಕ್ಷರು.—ಈಗ ಈ ವಿಶ್ವವಿದ್ಯಾಲಯದ ಶಿಕ್ಷಕರ ಬಗ್ಗೆ ವಿಧಾನ ಪರಿಷತ್ತಿನಿಂದ ಅಂಗೀಕೃತವಾಗಿ ಬಂದಿರುವ ವಿಧೇಯಕವನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೌದು ಕೌನ್ಸಿಲ್‌ನಿಂದ ಇದು ಬಂದಿದೆ. ಇದಕ್ಕೆ ನಾವು ವಿರೋಧ ಮಾಡಬೇಕು ಎಂದು ಅಲ್ಲ. ಇದರಲ್ಲಿ ಬೇರೆ ಜನರಿಗೆ ಅಡೆ ತಡೆಗಳು ಆಗುತ್ತವೆ. ಹೊಸದಾಗಿ ಲೆಕ್ಚರರ್ಸ್ ಅನ್ನು ಅಪಾಯಿಂಟ್ ಮಾಡಬೇಕೆಂದರೆ ಅವಕಾಶ ಸಿಗುತ್ತಿಲ್ಲ. ಈಗ ಹೊಸದಾಗಿ ಅಪಾಯಿಂಟ್‌ಮೆಂಟನ್ನು ಸಾರಾ ಸಗಟು ತಂದರೆ ಸರಿಯಲ್ಲ. ಇದನ್ನು ವಿತ್ ಹೆಲ್ಡ್ ಮಾಡಿ, ಇದರ ಬಗ್ಗೆ ಚರ್ಚೆ ಮಾಡಿ ಅದರ ನಂತರ ಇದನ್ನು ಇಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಅವರುಗಳು ತುಂಬಾ ತೊಂದರೆಯಲ್ಲಿದ್ದಾರೆ. ಅದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡಿದ್ದೇವೆ. ಒಂದು ವಾರದ ತನಕ ಇವರ ಬಗ್ಗೆ ಚರ್ಚೆ ಮಾಡಿದ್ದೇವೆ, ಅವರೂ ಸಹ ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡುತ್ತಿದ್ದರು. ಅವರ ಸಂಸಾರಗಳು ಹಾಳಾಗುತ್ತವೆ. ಇದನ್ನು ಮಾಡಬೇಕೆಂದು ಹೇಳಿದ್ದಾರೆ, ಬೇರೆಯವರಿಗೆ ಅನ್ಯಾಯ ಆಗತಕ್ಕ ಪ್ರಶ್ನೆಯನ್ನು ಪರಿಶೀಲನೆ ಮಾಡೋಣ. ಇದು ಆಗದೇ ಹೋದರೆ ಅವರುಗಳಿಗೆ ತುಂಬಾ ತೊಂದರೆ ಆಗುತ್ತದೆ. ಅವರುಗಳು ಸುಪ್ರೀಮ್ ಕೋರ್ಟಿಗೆ ಹೋಗಿದ್ದಾರೆ, ಆರ್ಡರ್ ಆಗಿದೆ. ಇದು ಕೌನ್ಸಿಲ್‌ನಲ್ಲಿ ಒಪ್ಪಿಗೆ ದೊರೆತಿದೆ. ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಬಾರಿ ಮಾಡುವಾಗ ತಿದ್ದುಪಡಿ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರಿಗೋ ತೊಂದರೆ ಅಂದರೆ ಕೆಲವು ಸಂಸಾರಕ್ಕೆ ತೊಂದರೆ ಆಗುತ್ತದೆ ಎಂದು ಬೇರೆ ವರ್ಗದ ಜನಾಂಗಕ್ಕೆ ತೊಂದರೆ ಮಾಡಿದ್ದೀರಿ. You have got dual responsibility to protect their interest also. you have not only to protect the interests of a few families but also you have to protect the interests of other weaker sections who did not have any other opportunity since so many years. ಇದನ್ನು ಬಿಟ್ಟು ನೀವು ತಂದರೆ ಹೇಗೆ? ಕಾಂಟ್ರಾಕ್ಟ್ ಬೇಸಿಸ್‌ನವರು ಇದ್ದಾರೆ. ಪಿ.ಡಬ್ಲ್ಯು.ಡಿ. ನವರು ಇದ್ದಾರೆ, ಕಾರ್ಪೊರೇಷನ್‌ನವರು ಇದ್ದಾರೆ. ಲ್ಯಾಂಡ್ ಆರ್ಮಿನವರು ಕೂಡ ಟೆಂಪೂರರಿ ಅಪಾಯಿಂಟ್‌ನಲ್ಲಿದ್ದಾರೆ. ಹೀಗೇ ಎಲ್ಲಾ ಕಡೆ ಟೆಂಪೂರರಿ ಅಪಾಯಿಂಟ್ ಮಾಡಿಕೊಂಡಿರುವವರನ್ನು ನೀವು ರೆಗ್ಯುಲರೈಸ್ ಮಾಡಿದರೆ ಬೇರೆ ಒಂದು ಜನಾಂಗಕ್ಕೆ ಅನ್ಯಾಯ ಮಾಡಿದಂತಾಗಲಿಲ್ಲವೇ?

ಶಾಸನ ರಚನಾ ಕಲಾಪಗಳು

ಅಧ್ಯಕ್ಷರು.—ಮೊದಲು ಮಾನ್ಯ ಮಂತ್ರಿಗಳು ವಿಧೇಯಕವನ್ನು ಮಂಡನೆ ಮಾಡಲಿ ನಂತರ ನೀವು ಮಾತನಾಡಬಹುದು.